ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 50

ಡಿಸೆಂಬರ್ 8-14 1997 ಬೆಲೆ ರೂ. 2.00



ಜನಾದೇಶವಿಲ್ಲದೆ ಅಧಿಕಾರ ಲಪಟಾಯಿಸುವ ಕಾಂಗ್ರೆಸ್, ಬಿಜೆಪಿ ಯತ್ನ ವಿಫಲ

ಈಗ ಮತ್ತೆ ಚುನಾವಣೆಯತ್ತ

ದಿಲ್ಲಿಯಲ್ಲಿ ನವಂಬರ್ ತಿಂಗಳಲ್ಲಿ ಕಂಡ ಹೊಲಸು ನಾಟಕಕ್ಕೆ ಕೊನೆಗೂ ತೆರಬಿದ್ದಿದೆ. ಜೈನ್ ಆಯೋಗದ ಮಧ್ಯಂತರ ವರದಿ ಸೋರಿ ಹೋಗಿ ಇಂಗ್ಲೀಷ್ ಪತ್ರಿಕೆ 'ಇಂಡಿಯಾ ಟುಡೇ' ಯಲ್ಲಿ ಅದರ ಕೆಲವು ಅಂಶಗಳ ಪ್ರಕಟಣೆಯೊಂದಿಗೆ ಆರಂಭವಾದ ಬಿಕ್ಕಟ್ಟು ಡಿಸೆಂಬರ್ 4 ರಂದು 11ನೇ ಲೋಕಸಭೆಯ ವಿಸರ್ಜನೆಯೊಂದಿಗೆ ಕೊನೆಗೊಂಡಿದೆ. ಈ ಬಿಕ್ಕಟ್ಟು ಆರಂಭವಾದಂದಿನಿಂದಲೇ ಸಿಪಿಐ(ಎಂ) ಮತ್ತು ಎಡಪಕ್ಷಗಳು ಆಗ್ರಹಿಸುತ್ತಿದ್ದಂತೆ ಕೊನೆಗೂ ಜನತೆಯಿಂದ ಹೊಸ ಆದೇಶ ಪಡೆಯಲು ಚುನಾವಣೆಗಳತ್ತ ಸಾಗಿದ್ದೇವೆ.

ಈ ಒಂದು ತಿಂಗಳ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಜನಾದೇಶವಿಲ್ಲದೆಯ ಅಧಿಕಾರವನ್ನು ಲಪಟಾಯಿಸಲು ನಡೆಸಿದ ಹತಾಶ ಪ್ರಯತ್ನಗಳನ್ನು ದೇಶ ಕಾಣಬೇಕಾಗಿ ಬಂತು. ಸಂಯುಕ್ತ ರಂದ ಸರಕಾರ ರಾಷ್ಟ್ರೀಯ ಐಕ್ಯತೆಯ ರಕ್ಷಣೆಯ ಪ್ರಶ್ನೆಯ ಮೇಲೆ ರಾಜೀನಾಮೆ ಕೊಡಬೇಕಾಗಿ ಬಂತು ಎಂದು ಈ ಬೆಳವಣಿಗೆಗಳ ವಿಶ್ಲೇಷಣೆ ಮಾಡುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಈ ಹಿಂದೆ 1990 ರಲ್ಲಿ ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯರಂಗ ಸರ್ಕಾರ ಕೋಮುವಾದದ ವಿರುದ್ಧ ಹೋರಾಟದ ಭಾಗವಾಗಿ ರಾಜಿನಾಮೆ ನೀಡಿತ್ತು. ಈಗ ಸಂಯುಕ್ತ ರಂಗ ಸರಕಾರ ಜೈನ್ ಆಯೋಗದ ಮಧ್ಯಂತರ ವರದಿ ಇಡೀ ತಮಿಳು ಜನತೆಯ ಮೇಲೆ ಧಾಳಿ ಮಾಡಿರುವ ಸಂದರ್ಭದಲ್ಲಿ ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ಅಧಿಕಾರ ತ್ಯಜಿಸಿದೆ ಎಂದು ಸುರ್ಜಿತ್ ವರ್ಣಿಸಿದ್ದಾರೆ.

11ನೇ ಲೋಕಸಭೆ ರಚನೆಯಾದ ನಂತರದ ಘಟನೆಗಳನ್ನು ನೆನಪಿಸುತ್ತಾ "ತನ್ನ ಬಹುಮತ ಸಾಬೀತು ಪಡಿಸಲು ಬೇಕಾದ ಸಂಖ್ಯೆಯನ್ನು ಸಂಗ್ರಹಿಸಲಾಗದ 13 ದಿನಗಳ ಅಟಲ ಬಿಹಾರಿ ವಾಜಪೇಯಿ ಸರಕಾರ ರಾಜೀನಾಮೆ ಕೊಡಬೇಕಾಗಿ ಬಂದ ಅವಮಾನದಿಂದ ಚೇತರಿಸಿಕೊಳ್ಳಲಾರದ ಬಿಜೆಪಿ ಸಂಯುಕ್ತ ರಂಗ ಮತ್ತು ಅದಕ್ಕೆ ಬೆಂಬಲ ನೀಡಿದ ಕಾಂಗ್ರೆಸ್‌ನ ನಡುವ ಭಿನ್ನಾಭಿಪ್ರಾಯ ಯಾವಾಗ ಉಲ್ಬಣಗೊಂಡೀತೆಂದು ಕಣ್ಣಿಗೆ ಎಣ್ಣೆ ಹಾಕಿಕೊಂಡು ಕಾಯುತ್ತಿತ್ತು. ಇನ್ನೊಂದೆಡೆ ಅಧಿಕಾರದಿಂದ ಹೊರಗಿರಲಾರದ ಚಡಪಡಿಸುತ್ತಿದ್ದ ಕಾಂಗ್ರೆಸ್ ಹೇಗಾದರೂ ಮಾಡಿ, ಸಂಯುಕ್ತರಂಗದಲ್ಲಿ ಬಿರುಕು ತಂದು ಮತ್ತೆ ಅಧಿಕಾರಕ್ಕೆ ಬರಲು, ಪ್ರಯತ್ನಿಸುತ್ತಿತ್ತು" ಎಂದು ಈಗ ದೇಶ ಮತ್ತೆ ಚುನಾವಣೆಗಳನ್ನು ಎದುರಿಸಬೇಕಾಗಿ ಬಂದ ಮೂಲ ಕಾರಣವನ್ನು ವಿಶ್ಲೇಷಿಸುತ್ತಾ ಸುರ್ಜಿತ್ ಹೇಳುತ್ತಾರೆ.

ಕಾಂಗ್ರೆಸ್‌ನ ಪೀಕಲಾಟ

ಕಾಂಗ್ರೆಸ್ ಮಾರ್ಚ್ 1997 ರಲ್ಲಿ ಮೊದಲ ಪ್ರಯತ್ನ ನಡೆಸಿತು. ಆಗ ಸಂಯುಕ್ತ ರಂಗವನ್ನು ಒಡೆಯಲು ಅದಕ್ಕೆ ಆಗದಿದ್ದರೂ ಸಂಯುಕ್ತ ರಂದ ಸರಕಾರದ ನೇತೃತ್ವದಲ್ಲಿ ಬದಲಾವಣೆಗೆ ಒತ್ತಡ ತಂದು ಅದು ಯಶಸ್ವಿಯಾಯಿತು. 'ಈ ಬ್ಲಾಕ್ ಮೇಲ್'ನ ತಂತ್ರವನ್ನು ಸಿಪಿಐ(ಎಂ) ಆಗಲೂ ವಿರೋಧಿಸಿತ್ತು. ಆದರೆ ಸಂಯುಕ್ತ ರಂಗ ಇತರ ಪಕ್ಷಗಳಲ್ಲಿ ಈ ಬಗ್ಗೆ ಮನವರಿಕೆ ಮೂಡಿಸುವುದು ನಮಗಾಗಲಿಲ್ಲ. ಆದಾದ ಆರು ತಿಂಗಳೊಳಗೇ ಕಾಂಗ್ರೆಸ್ ಇನ್ನೊಂದು ಪ್ರಶೆಯನ್ನು ಬಡಿದೆಬ್ಬಿಸಿತು. ಆದರೆ ಈ ಬಾರಿ ಸಂಯುಕ್ತ ರಂಗ ಈ ಬ್ಲಾಕ್‌ಮೇಲ್ ತಂತ್ರಕ್ಕೆ ಮಣಿಯಲಿಲ್ಲ. ಈ ಬಿಕ್ಕಟ್ಟಿನಲ್ಲಿ ಹೆಚ್ಚು ಜಾಣ್ಮೆಯಿಂದ, ದೃಢತೆಯಿಂದ ವರ್ತಿಸಿತು. ರಂಗ ಸಂಯುಕ್ತವಾಗಿಯೇ ಉಳಿಯಿತು. ಕಾಂಗ್ರೆಸ್ ಏನೇ ಕಸರತ್ತು ನಡೆಸಿದರೂ ರಂಗವನ್ನು ಒಡೆಯುವಲ್ಲಿ ವಿಫಲರಾದರು" ಎನ್ನುತ್ತಾರೆ ಸುರ್ಜಿತ್.

ಜೈನ್ ಆಯೋಗದ ಮಧ್ಯಂತರ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಬೇಕೆಂಬುದಷ್ಟೇ ಕಾಂಗ್ರೆಸ್ಸಿನ ಬೇಡಿಕೆಯಾಗಿತ್ತು. ಈ ಬೇಡಿಕೆಯನ್ನು ಸಿಪಿಐ(ಎಂ) ಕೂಡಾ ಮುಂದಿಟ್ಟಿತ್ತು. ಸರಕಾರ ಇದಕ್ಕೆ ಒಪ್ಪಿಕೊಂಡಿತ್ತು. ಆದರೆ ಅದನ್ನು ಮಂಡಿಸುವವರೆಗೂ ಕಾಯದೆ ಡಿ.ಎಂ.ಕೆ. ಮಂತ್ರಿಗಳನ್ನು ಕೈ ಬಿಡುವ ಒತ್ತಾಯವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮುಂದಿಟ್ಟಿತು. ವಾಸ್ತವವಾಗಿ ಈ ದಪ್ಪ ವರದಿಯಲ್ಲಿ ರಾಜೀವ್ ಗಾಂಧಿ ಹತ್ಯೆಯಲ್ಲಿ ಡಿಎಂಕೆಯ ಅಥವಾ ಅದರ ಮುಖಂಡರು ಶಾಮೀಲಾಗಿರುವ ಯಾವುದೇ ನೇರ ಅಥವಾ ಪರೋಕ್ಷ ಸೂಚನೆಯನ್ನು ಸಾಬೀತು ಮಾಡಿಲ್ಲ. ಆದ್ದರಿಂದ ಸಹಜವಾಗಿಯೇ ಸಂಯುಕ್ತ ರಂಗ ಈ ಬೇಡಿಕೆಯನ್ನು ತಿರಸ್ಕರಿಸಿ ಸಂಸತ್ತಿನಲ್ಲಿ ಈ ಬಗ್ಗೆ ಚರ್ಚೆ ನಡೆಸೋಣ. ಜತೆಗೆ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಕೃತ್ಯಗಳ ಬಗ್ಗೆಯೂ ಚರ್ಚಿಸೋಣವೆಂದು ಸಲಹೆ ಮಾಡಿತು. ಆದರೆ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಕುಕೃತ್ಯಗಳಿಂದ ಅತ್ಯಂತ ಹೆಚ್ಚು ಆಘಾತಗೊಳ್ಳಗಾದರೂ ಕಾಂಗ್ರೆಸ್ ಮಂದಿ ಸಂಸತ್ ಕಲಾಪಗಳೇ ನಡೆಯದಂತೆ ಮಾಡಿದರು. ಆ ಮೂಲಕ ಬಿಜೆಪಿಗೆ ತಪ್ಪಿಸಿಕೊಳ್ಳಲು ಅವಕಾಶ ನೀಡಿದರು ಎಂದು ಸುರ್ಜಿತ್ ಆಪಾದಿಸಿದ್ದಾರೆ - ಆದರೆ ಈ ಕಾಂಗ್ರೆಸ್ ಜೂಜಾಟ ಶೋಚನೀಯವಾಗಿ ವಿಫಲವಾಯಾಯಿತು. ಬದಲಿಗೆ ಅದೇ ಒಂದು ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡು ತಾನೇ ಸರಕಾರ ರಚಿಸುವ ಹಾಸ್ಯಾಸ್ಪದ ದಾವೆ ಮಂಡಿಸಬೇಕಾಗಿ ಬಂತು, ಜತೆಗೆ ಬಿಜೆಪಿ ಮಂದಿ ತನ್ನ ಸದಸ್ಯರನ್ನೇ ಬೇಟೆಯಾಡುವ ಶೋಚನೀಯ ಪರಿಸ್ಥಿತಿಯನ್ನು ಕಾಣಬೇಕಾಯಿತು. **ರಾಜೀವ್ ಗಾಂಧಿಯವರ ಹತ್ಯೆ ಮತ್ತು ಜೈನ್ ಆಯೋಗದ ವರದಿ ತಮಗೆ ಮತಗಳನ್ನು ತಂದು ಕೊಡುವುದಿಲ್ಲವೆಂದು ಅವರಿಗೆ ಮನವರಿಕೆಯಾಯಿತು ಎಂದು ಸುರ್ಜಿತ್ ಈ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತಾ ಹೇಳುತ್ತಾರೆ.**

'ಕಾಂಗ್ರೆಸ್ಸಿನ ಪತನದ ಮೂಲದಲ್ಲಿರುವ ಸಂಗತಿಯೆಂದರೆ 1996 ರ ಸೋಲನ್ನು ಹಾಗೂ ಏಕಪಕ್ಷ ಪ್ರಾಬಲ್ಯದ ದಿನಗಳು ಮುಗಿದಿವೆ ಎನ್ನುವುದನ್ನು ಅದನ್ನೂ ಅರಿತುಕೊಳ್ಳದಿರುವುದು. ಹಿಂದಿನ ಕಾಂಗ್ರೆಸ್ ಸರಕಾರಗಳ ನೀತಿಗಳಿಂದಾಗಿ ತನ್ನ ಅವನತಿಯಾಗಿದೆ ಎಂಬುದನ್ನು ಗುರುತಿಸಲಾರದ ಆ ಪಕ್ಷ ರಾಜೀವ್ ಗಾಂಧಿಯ ಹೆಸರು ತಮ್ಮನ್ನು ರಕ್ಷಿಸುತ್ತದೆ ಎಂಬ ಸಾಮೂಹಿಕ ಭ್ರಮೆಯಲ್ಲಿ ಬದುಕ ಬಯಸುತ್ತಿದೆ. ಎಂತಹ ಅವನತಿಯಾಗಿದೆಯೆಂಬುದಕ್ಕೆ ಅಕ್ಟೋಬರ್‌ನಲ್ಲಿ ಲಕ್ನೌ ಘಟನೆಗಳು, ಒಂದು ತಿಂಗಳೊಳಗೆ ನವಂಬರ್‌ನಲ್ಲಿ ದಿಲ್ಲಿಯಲ್ಲಿ ಘಟನೆಗಳೇ ಒಳ್ಳೆಯ ಉದಾಹರಣೆಗಳು, ನಾಲ್ಕು ವಾರಗಳ ಅಂತರದಲ್ಲಿ ಕಾಂಗ್ರೆಸ್ಸಿನ ಲ್ಲುಂಟಾಗಿರುವ ಅವನತಿ ಇಡೀ ಜಗತ್ತಿನ ಮುಂದೆ ಬಯಲಾಗಿದೆ. ***ಹಿಂದೂ ಕೋಮುವಾದದ ಹೆಚ್ಚುತ್ತಿದ್ದ ಸವಾಲನ್ನು ಕುರಿತಂತೆ ಸಂಧಾನದ ಮನೋಭಾವದಿಂದ ಆರಂಭವಾದ ಈ ಅವನತಿ ಈಗ ಉತ್ತರ ಪ್ರದೇಶದ ಅಸೆಂಬ್ಲಿಯಲ್ಲಿ ಅದರ ಬಹುಪಾಲು ಶಾಸಕರು ಬಿಜೆಪಿಗೆ ಪಕ್ಷಾಂತರ ಹೊಂದುವ ಲೋಕಸಭೆಯಲ್ಲೂ ಪಕ್ಷಾಂತರದ ಬೆದರಿಕೆ ಬಂದಿರುವ ಮಟ್ಟಕ್ಕೆ ಬಂದಿದೆ" ಎಂದು ಸುರ್ಜಿತ್ ತೀಕ್ಷ್ಣವಾಗಿ ವಿಶ್ಲೇಷಿಸಿದ್ದಾರೆ.***

ಪ್ರಪಾತಕ್ಕಿಳಿಯುತ್ತಿರುವ ಬಿಜೆಪಿ

"ಇನ್ನು ಬಿಜೆಪಿಯಂತೂ ಕಾಂಗ್ರೆಸ್ಸಿಗಿಂತಲೂ ದೊಡ್ಡ ಪ್ರಮಾಣದಲ್ಲಿ ಹಣದ ರಾಜಕೀಯವನ್ನು ಮೊದಲು ಆರಂಭಿಸಿದ ಕುಖ್ಯಾತಿಯನ್ನೀಗ ಗಳಿಸಿದೆ. ಅಧಿಕೃತವಾಗಿ ಸರಕಾರ ರಚಿಸುವ ದಾವೆ ಹಾಕದೆ ವಂಚನೆಯ ದಾರಿ ಹಿಡಿದು ಪಕ್ಷಾಂತರಗಳನ್ನು ಸಂಘಟಿಸಲು, ಹೊಲಸು

ಪುಟ 2 ನೋಡಿ

ಭವಿಷ್ಯ ನಿಧಿಯಿಂದ ಪ್ರತ್ಯೇಕವಾದ ಪಿಂಚಣಿ ಯೋಜನೆಗೆ ಒತ್ತಾಯಿಸಿ ಡಿಸೆಂಬರ್ 17ರಂದು ಮುಷ್ಕರಕ್ಕೆ ನಿರ್ಧಾರ

ಬೆಂಗಳೂರು : ನೌಕರರ ಭವಿಷ್ಯನಿಧಿಗೆ ಲಗತ್ತಿಸಿ 1995 ರಿಂದ ಜಾರಿಗೆ ತರಲಾದ ಪಿಂಚಣಿ ಯೋಜನೆಯ ಬದಲು ಪ್ರತ್ಯೇಕವಾದ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ಇದೇ 17ರಂದು ದೇಶಾದ್ಯಂತ ನಡೆಯಲಿರುವ ಕೈಗಾರಿಕಾ ಮುಷ್ಕರವನ್ನು ಕರ್ನಾಟಕದಲ್ಲಿನ ಖಾಸಗಿ ಮತ್ತು ಸಾರ್ವಜನಿಕ ರಂಗದ ಕಾರ್ಖಾನೆಗಳಲ್ಲಿ ಯಶಸ್ವಿಗೊಳಿಸಲು ಡಿಸೆಂಬರ್ 1 ರಂದು ಇಲ್ಲಿ ನಡೆದ "ದುಡಿಯುವ ವರ್ಗದ ರಾಜ್ಯ ಸಮಾವೇಶ" ನಿರ್ಧರಿಸಿದೆ.

ರಾಜ್ಯ ಸಭಾ ಸದಸ್ಯರೂ, ಸಿ.ಐ.ಟಿ.ಯು. ಅಖಿಲ ಭಾರತ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಜೀವನ್ ರ್‍ಯಾ ಅವರು ಸಮಾವೇಶವನ್ನು ಉದ್ಘಾಟಿಸುತ್ತಾ "1995 ರಿಂದ ಅನುಷ್ಠಾನಕ್ಕೆ ತರಲಾದ ಪಿಂಚಣಿ ಯೋಜನೆಯು ಆಂತರಿಕ ವಿರೋಧಾಭಾಸಗಳಿಂದ ಕೂಡಿರುವುದರಿಂದ ಯಶಸ್ವಿಯಾಗಿ ಜಾರಿಗೆ ಬರಲಾರದು" ಎಂದರು. ಈ ಅವಧಿಯಲ್ಲಿ ಪಿಂಚಣಿ ಪಡೆಯಲು ಅರ್ಹರಿರುವರಲ್ಲಿ ಕೇವಲ ಪ್ರತಿಶತ 53 ನೌಕರರಿಗೆ ಮಾತ್ರ ಅರ್ಜಿ ಫಾರ್ಮುಗಳ ವಿತರಣೆ ಸಾಧ್ಯವಾಗಿದ್ದು ಅವರಲ್ಲಿ ಕೇವಲ ಪ್ರತಿಶತ 15 ನೌಕರರಿಂದ ಮಾತ್ರ ಅರ್ಜಿಗಳನ್ನು ಸಂಗ್ರಹಿಸಲಾಗಿದೆ. ಕಳೆದ 4 ವರ್ಷಗಳಲ್ಲಿ ಸುಮಾರು 9 ಲಕ್ಷ ನೌಕರರು ನಿವೃತ್ತಿ ಹೊಂದಿದ್ದರೂ ಕೇವಲ 63 ಸಾವಿರ ನೌಕರರಿಗೆ ಪಿಂಚಣಿ ವಿತರಣೆ ಸಾಧ್ಯವಾಗಿದೆ. ಪಿಂಚಣಿ ಯೋಜನೆಯನ್ನು ಭವಿಷ್ಯ ನಿಧಿಗೆ ಜೋಡಿಸಿರುವುದರಿಂದ ಭವಿಷ್ಯ ನಿಧಿ ಯೋಜನೆಗೆ ಸೇರ್ಪಡೆಯಾಗದೆ ಹೊರಗೆ ಉಳಿದಿರುವ ಅಸಂಘಟಿತ ವಲಯದ ಲಕ್ಷಾಂತರ ಕಾರ್ಮಿಕರು ಪಿಂಚಣಿ ಯೋಜನೆಯಿಂದ ವಂಚಿತರಾಗಿದ್ದಾರೆ" ಎಂದು ಅವರು ಹೇಳಿದರು.

1995ರ ಪಿಂಚಣಿ ಯೋಜನೆ ಯನ್ನು ಜಾರಿಗೆ ತರುವಾಗ ಪ್ರತಿ 6 ತಿಂಗಳಿಗೊಮ್ಮೆ ಅದರ ಅನುಷ್ಠಾನದ ಕುರಿತು ವಿಮರ್ಶೆ ನಡೆಸಲಾಗುವುದೆಂದು ನೀಡಲಾದ ಭರವಸೆ ಜಾರಿಗೆ ಬರಲಿಲ್ಲ. ಕಾರ್ಮಿಕರು ಮತ್ತು ಅವರ ಮಾಲೀಕರು ಜಂಟಿಯಾಗಿ ರೂಪಿಸುವ ಪಿಂಚಣಿ ಯೋಜನೆಗಳಿಗೆ ಅನುಮತಿ ನೀಡಿ ಅಂತಹ ಕಾರ್ಮಿಕರಿಗೆ ಈ ಭವಿಷ್ಯ ನಿಧಿ ಲಗತ್ತಿತ ಪಿಂಚಣಿ ಯೋಜನೆಯಿಂದ ರಿಯಾಯ್ತಿ ಕೊಡಲಾಗುವುದು ಎಂಬ ಭರವಸೆಯು ಸಹ ಈಡೇರಿಸಲಾಗಿಲ್ಲ. ಸ್ವತಂತ್ರವಾಗಿ ರೂಪಿಸಲಾದ ಪಿಂಚಣಿ ಯೋಜನೆಗಳು ಈಗ ಉತ್ತಮವಾಗಿ ಕಂಡರೂ 2000 ಇಸವಿಯ ನಂತರ ಸರ್ಕಾರ ರೂಪಿಸಿದ ಯೋಜನೆಯೇ ಹೆಚ್ಚು ಲಾಭದಾಯಕ ವಾಗಿರುತ್ತದೆ ಎಂದು ಸರ್ಕಾರದ ವಕ್ತಾರರು ವಾದಿಸುತ್ತಾರೆ. ಪ್ರತಿವರ್ಷ ನೌಕರರ ಸಂಬಳದಲ್ಲಿ ಪ್ರತಿಶತ 12 ರಷ್ಟು ಹೆಚ್ಚಳ ಆಗುತ್ತದೆ ಎಂಬ ತಪ್ಪು ಲೆಕ್ಕಾಚಾರದ ಆಧಾರದಲ್ಲಿ ಹೀಗೆ ವಾದಿಸಲಾಗುತ್ತದೆ ಎಂದು ಹೇಳಿದರು. ಅವರು ವಾಸ್ತವಿಕವಾಗಿ ಕಳೆದ 20 ವರ್ಷಗಳಲ್ಲಿಯೂ ನೌಕರರ ಸಂಬಳದಲ್ಲಿ ಈ ಪ್ರಮಾಣದಲ್ಲಿ ಹೆಚ್ಚಳವಾಗಿಲ್ಲ ಎಂದರು.

ಹಲವಾರು ರಾಜ್ಯಗಳ ಉಚ್ಚ ನ್ಯಾಯಾಲಯಗಳು ಪಿಂಚಣಿ ಯೋಜನೆಗೆ ತಡೆಯಾಜ್ಞೆ ನೀಡಿರುವುದನ್ನು ಪ್ರಸ್ತಾಪಿಸಿದ ಅವರು ನೌಕರರಿಗೆ ಈ ಯೋಜನೆಯಿಂದ ಹೊರಗುಳಿಯುವ ಸ್ವಾತಂತ್ರ್ಯವನ್ನು ನಿರಾಕರಿಸುವ ಮೂಲಕ ಅವರ ಮೂಲಭೂತ ಹಕ್ಕುಗಳಿಗೆ ಚ್ಯುತಿ ಉಂಟಾಗಿದೆ. ಕಲ್ಕತ್ತಾ ಉಚ್ಚ ನ್ಯಾಯಾಲಯ ನೀಡಿದ ತೀರ್ಪು ಮಹತ್ವದ್ದಾಗಿದೆ ಎಂದು ಹೇಳಿದರು. ರಾಜ್ಯ ಉಚ್ಚ ನ್ಯಾಯಾಲಯಗಳ ತಡೆಯಾಜ್ಞೆಗಳನ್ನು ತೆರವು ಮಾಡಬೇಕೆಂಬ ಕೇಂದ್ರ ಸರ್ಕಾರದ ಪ್ರಾರ್ಥನೆಯನ್ನು ಸರ್ವೋಚ್ಚ ನ್ಯಾಯಾಲಯ ತಳ್ಳಿಹಾಕಿರುವುದು ಮಹತ್ವದ ಬೆಳವಣಿಗೆಯಾಗಿದೆ ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪಿಂಚಣಿ ಯೋಜನೆಯ ವಿರುದ್ಧ ಕೇಂದ್ರ ಕಾರ್ಮಿಕ ಸಂಘಟನೆಗಳಲ್ಲಿ ಇಲ್ಲಿಯ ವರೆಗೆ ಸಿ.ಐ.ಟಿ.ಯು. ಮಾತ್ರ ಹೋರಾಟ ನಡೆಸುತ್ತಾ ಬಂದಿತು ಎಂದು ಹೇಳಿದ ಅವರು ಈಗ ಇತರ ಕೇಂದ್ರ ಕಾರ್ಮಿಕ ಮುಂಖಡರಿಗೂ ಪ್ರಸಕ್ತ ಯೋಜನೆಯ ಹಿಂದೆ ಅಡಗಿರುವ ಮೋಸ ಅರ್ಥವಾಗತೊಡಗಿದೆ ಎಂದು ಹೇಳಿದರು. ಇತ್ತೀಚೆಗೆ ಕೇಂದ್ರ ಕಾರ್ಮಿಕ ಮಂತ್ರಿಗಳು ಕರೆದ ಸಭೆಯೊಂದರಲ್ಲಿ ಭಾಗವಹಿಸಿದ್ದ ಎ.ಐ.ಟಿ.ಯು.ಸಿ., ಐ.ಎನ್.ಟಿ.ಯು.ಸಿ. ಮತ್ತು ಬಿ.ಎಂ.ಎಸ್ ಸಂಘಟನೆಗಳ ಮುಖಂಡರೂ ಸಹ ಸರ್ಕಾರ ಪಿಂಚಣಿ ಯೋಜನೆಯಲ್ಲಿ ಕಾರ್ಮಿಕರಿಗೆ ಮೋಸ ಮಾಡಿದೆ ಎಂದು ಒಪ್ಪಿಕೊಂಡರು ಎಂದು ಹೇಳಿದ ಅವರು ದೇಶದ ಉದ್ದಗಲಗಳಲ್ಲಿಯೂ ಸಾಮಾನ್ಯ ಕಾರ್ಮಿಕರಲ್ಲಿ ಅತೃಪ್ತಿ ಉಂಟಾಗಿದ್ದು ಅವರೆಲ್ಲರನ್ನು ಸಂಘಟನೆಗಳ ಭೇದ ಭಾವವನ್ನು ಗಣನೆಗೆ ತೆಗೆದುಕೊಳ್ಳದೆ ದೊಡ್ಡ ಪ್ರಮಾಣದಲ್ಲಿ ಡಿಸೆಂಬರ್ 17 ರ ಮುಷ್ಕರದಲ್ಲಿ ಪಾಲ್ಗೊಳಿಸುವುದು ಸಾಧ್ಯವಾದರೆ ಪಿಂಚಣಿಯನ್ನು ತೃತೀಯ ನಿವೃತ್ತಿ ಸೌಲಭ್ಯವಾಗಿ ಪಡೆಯುವುದು ಖಂಡಿತವಾಗಿ

ಪುಟ 2 ನೋಡಿ

ಕೋಮುವಾದಿಯಾದ ಮತ್ತು ಈಗ ತ್ವರಿತವಾಗಿ ಭ್ರಷ್ಟವೂ ಆಗುತ್ತಿರುವ ಬಿಜೆಪಿ ಹಾಗೂ ಸೋತು ಸುಣ್ಣವಾಗಿರುವ ಕಾಂಗ್ರೆಸ್ ಇವೆರಡರ ನಡುವೆ ಯಾವುದನ್ನು ತಾನೇ ಆರಿಸಿಕೊಳ್ಳಲು ಸಾಧ್ಯ? ಒಂದು ಮೂರನೇ ಪರ್ಯಾಯ ಈಗಿನ ದೇಶದ ರಾಜಕೀಯದ ವಾಸ್ತವಿಕ ಅವಶ್ಯಕತೆ. ಸಂಯುಕ್ತ ರಂಗ ಇದನ್ನು ನೀಡಬಲ್ಲದು

\- ಸುರ್ಜಿತ್



ರಾಜಕೀಯ ಅಸ್ಥಿರತೆಯ ಮಧ್ಯೆ ಪ್ರತ್ಯೇಕತೆಯ ಕೂಗು

ಎನ್.ಕೆ. ಉಪಾಧ್ಯಾಯ

ದೇಶದಲ್ಲಿ ಅತಿಗಂಭೀರವಾದ ರಾಜಕೀಯ ಸ್ಥಿತ್ಯಂತರಗಳು ಉಲ್ಬಣಿಸುತ್ತಿರುವಾಗಲೇ ಕರ್ನಾಟಕದಲ್ಲಿ ಮತ್ತೆ ಪ್ರತ್ಯೇಕತೆಯ ಅಪಸ್ವರ ತೀವ್ರಗೊಳ್ಳುತ್ತಿರುವುದು ವಿಷಾದನೀಯ. ಕೊಡಗಿನಲ್ಲಿ ಪ್ರತ್ಯೇಕ ರಾಜ್ಯ ರಚನೆಯ ಬೇಡಿಕೆ ಮತ್ತೆ ಚಿಗುರಿ ಬರುತ್ತಿದೆ. ಹಿಂದೊಮ್ಮೆ ಪ್ರತ್ಯೇಕ ರಾಜ್ಯದ ಬೇಡಿಕೆಗಾಗಿ ಚಳುವಳಿ ನಡೆಸಲಾಗಿತ್ತು. ಚುನಾವಣೆಯ ಸಮಯದಲ್ಲಿಯೂ ಪ್ರತ್ಯೇಕ ಕೊಡಗು ರಾಜ್ಯ ನಿರ್ಮಾಣದ ಗೊಂದಲ ಎಬ್ಬಿಸಲಾಗಿತ್ತು. ಆದರೆ ಆಗ ಈ ಬೇಡಿಕೆಗೆ ಸಹಾಯಕವಾಗುವ ರೀತಿಯಲ್ಲಿ ಪ್ರೋತ್ಸಾಹ ನೀಡುವಂಥ ಜನ ಬೆಂಬಲ ಮೂಡಿ ಬರಲಿಲ್ಲ. ಆದರೆ ದೇಶದಲ್ಲಿ ಹಾಗೆಯೇ ರಾಜ್ಯದ ರಾಜಕೀಯ ಸ್ಥಿತ್ಯಂತರಗಳಿಂದ ಪ್ರೇರೇಪಿಸಲ್ಪಟ್ಟ ಕೊಡಗಿನ ಪ್ರತ್ಯೇಕತಾವಾದಿಗಳು ಕರ್ನಾಟಕದಿಂದ ಸಿಡಿದು ಪ್ರತ್ಯೇಕ ರಾಜ್ಯ ರಚನೆಯ ಬೇಡಿಕೆಗೆ ಒತ್ತಾಯಿಸುತ್ತಿದ್ದಾರೆ. ಮಾತ್ರವಲ್ಲ ಮುಂದಿನ ಜನವರಿಯಿಂದ ಕರ ನಿರಾಕರಣೆ ಮತ್ತು ಆರ್ಥಿಕ ದಿಗ್ಬಂಧನದಂತ ಉಗ್ರಕ್ರಮಗಳನ್ನು ಕೈಗೊಳ್ಳುವ ನಿರ್ಣಯಗಳನ್ನು ಬಹಿರಂಗಗೊಳಿಸಲಾಗಿದೆ. ಕೊಡಗು ರಾಜ್ಯ ಮುಕ್ತಿ ಮೋರ್ಚಾ ಎಂಬ ಸಂಘಟನೆ ರೂಪಗೊಂಡಿತ್ತು. ಕೊಡಗಿನ ಆರ್ಥಿಕ ಹಿಂದುಳಿದಿರುವಿಕೆಯನ್ನು ಮುಂದೆ ಮಾಡಿ ಪ್ರತ್ಯೇಕ ರಾಜ್ಯ ನಿರ್ಮಾಣದ ಬಗ್ಗೆ ಕರ್ನಾಟಕ ವಿಧಾನ ಸಭೆ ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸುವವರೆಗೆ ಎಲ್ಲಾ ಕಂದಾಯ ಸಲ್ಲಿಕೆಯನ್ನು ನಿಲ್ಲಿಸುವುದಾಗಿಯೂ ಈ ಪ್ರತ್ಯೇಕತಾವಾದಿಗಳ ಮೋರ್ಚಾ ಮುಖಂಡರು ಬೆದರಿಕೆಯನ್ನೊಡ್ಡಿದ್ದಾರೆ.

ದೇಶದ ಸ್ವಾತಂತ್ರ್ಯ ಸಂಗ್ರಾಮ ನಡೆಯುತ್ತಿರುವಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿರುವ ಭಾಷಿಕರನ್ನೆಲ್ಲ ಒಂದೇ ರಾಜ್ಯದಲ್ಲಿ ಒಟ್ಟುಗೂಡಿಸಿ ಅವರ ಸಂಸ್ಕೃತಿ, ಭಾಷೆ ನಡೆ-ನುಡಿಗಳ ಅಭಿವೃದ್ಧಿಗಾಗಿ ತಮ್ಮ ಆಡುವ ಭಾಷೆಯಲ್ಲಿಯೇ ಶಿಕ್ಷಣ ದೊರೆಯುವಂತೆ ರಾಜ್ಯ ಭಾಷೆ ಆಗುವಂತ ಆಡಳಿತೆ ಆಯಾ ರಾಜ್ಯದ ಭಾಷಿಕರ ಭಾಷೆಯಲ್ಲಿಯೇ ನಡೆಯುವಂತೆ ಭಾಷಾವಾರು ಪ್ರಾಂತ ರಚನೆ ಮಾಡುವ ಆಶ್ವಾಸನೆಯನ್ನು ಎಡಪಕ್ಷಗಳೂ, ರಾಷ್ಟ್ರೀಯ ಮುಖಂಡರೂ ಜನತೆಗೆ ನೀಡಿದ್ದರು. ಆದರೆ 1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ತಾವಿತ್ತ ಆಶ್ವಾಸನೆಯನ್ನು ಮುಖಂಡರು ಮರೆತಾಗ ಎಡ ಪಕ್ಷಗಳೂ ಭಾಷಾವಾರು ಪ್ರಾಂತ ರಚನೆಗಾಗಿ ನಿಜವಾಗಿಯೂ ಹಾತೊರೆಯುತ್ತಿದ್ದ ವಿಚಾರವಾದಿಗಳೂ, ಸಾಹಿತಿಗಳೂ ದೇಶಪ್ರೇಮಿಗಳೂ ಒಂದಾಗಿ ಚಳುವಳಿ ಹೂಡಿ ಭಾಷಾವಾರು ಪ್ರಾಂತ ರಚನೆ ಸಾಧಿಸಿಕೊಂಡರು. ಕರ್ನಾಟಕದಲ್ಲಿ ಕರ್ನಾಟಕ ಏಕೀಕರಣ ಚಳುವಳಿ ಅದರದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಸಂಸ್ಥಾನಗಳ ವಿಲೀನೀಕರಣ ಕಾಯಿದೆಗನುಸಾರ ಮುಂಬಯಿ ಕರ್ನಾಟಕದಲ್ಲಿದ್ದ 8-10 ಸಂಸ್ಥಾನಗಳು 1957 ರಲ್ಲಿ ಕರ್ನಾಟಕ ಏಕೀಕರಣ ಆಗುವ ಮುಂಚೆಯೇ ಭಾರತ ದೇಶದಲ್ಲಿ ವಿಲೀನಗೊಂಡಿದ್ದವು. ಮೈಸೂರು ಮತ್ತು ಹೈದರಾಬಾದ್ ಪ್ರತ್ಯೇಕ ಸಂಸ್ಥಾನಗಳಾಗಿಯೇ ಉಳಿದಿದ್ದವು. ಅವುಗಳ ವಿಲೀನಕ್ಕಾಗಿ ಹೈದರಾಬಾದ್ ಸಂಸ್ಥಾನದಲ್ಲಿ ಸಶಸ್ತ್ರ ಹೋರಾಟವನ್ನು ಮೈಸೂರು ಸಂಸ್ಥಾನದಲ್ಲಿ ಜನಜಾಗೃತಿ ಚಳುವಳಿಯನ್ನು ನಡೆಸಿ ವಿಲೀನೀಕರಣಗೊಳಿಸಲಾಯಿತು. ಏಕೀಕರಣ ಚಳುವಳಿಗಾಗಿ ನಡೆದ ಹೋರಾಟದಲ್ಲಿ ಕೊಡಗನ್ನೊಳಗೊಂಡ ಇತರ 8-10 ಸಂಸ್ಥಾನಗಳೂ ಪ್ರಜೆಗಳೂ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಿದ್ದರೂ ಮೈಸೂರು ಸಂಸ್ಥಾನದ ಕೆಲವು ಸ್ವಹಿತಾಸಕ್ತಿಗಳು ಏಕೀಕರಣವಾದರೆ ತಮ್ಮ ಅಧಿಕಾರ ಕೈ ಬಿಟ್ಟು ಹೋಗಬಹುದೆಂಬ ಭೀತಿಯಿಂದ ಕರ್ನಾಟಕ ಏಕೀಕರಣ ಚಳುವಳಿಯನ್ನು ವಿರೋಧಿಸುತ್ತಿದ್ದರು. 1956 ರ ನವಂಬರ್ 1 ರಂದು ಕರ್ನಾಟಕ ರಾಜ್ಯ ರಚನೆಯಾದರೂ ಇಂದಿನ ತನಕ ರಾಜ್ಯದ ಯಾವುದೇ ಭಾಗ ಕರ್ನಾಟಕ ರಾಜ್ಯದಿಂದ ಸಿಡಿದು ಪ್ರತ್ಯೇಕ ರಾಜ್ಯ ರಚನೆಯ ಕನಸನ್ನು ಕಂಡಿರಲಿಲ್ಲ.

ಆದರೆ ದೇಶದ ಉತ್ತರ ಪ್ರದೇಶ, ಅಸ್ಸಾಂ, ಬಿಹಾರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಈಗ ಆಂಧ್ರಪ್ರದೇಶಗಳಲ್ಲಿ ಪ್ರತ್ಯೇತ ರಾಜ್ಯದ ಕೂಗು ಕೇಳಿ ಬರುತ್ತಿರುವಾಗ ಕರ್ನಾಟಕದಲ್ಲಿ ಕೂಡ ಅಂಥ ಭಾವನೆಗಳಿಗೆ ನೀರೆರಚಿ ಅವು ಚಿಗುರುವಂತೆ ಮಾಡುವ ಪ್ರಯತ್ನ ನಡೆದಿದೆ. ಇಂಥ ಭಾವನೆಗಳು, ಅಭಿಲಾಷೆಗಳು ಮೂಡಿ ಬರಲಿಕ್ಕೆ ಅಮೆರಿಕನ್ ಸಾಮ್ರಾಜ್ಯಶಾಹಿ, ವಿದೇಶಿ ಸ್ವಯಂ ಸೇವಾ ಸಂಘಟನೆಗಳೇ ಪ್ರಮುಖ ಕಾರಣವೆಂಬುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಎಚ್ಚರಿಸುತ್ತಲೇ ಬಂದಿದೆ. ಅಧಿಕಾರದ ಗುಲಾಮರಾಗಿರುವ ಕೆಲವು ಜಾತಿವಾದಿ ಸಂಘ ಸಂಸ್ಥೆಗಳೂ, ಜಾತಿಯ ಮುಖಂಡರೂ ಇಂಥ ಚಳುವಳಿಯ ಬೆನ್ನೆಲುಬಾಗಿರುವುದನ್ನು ಕಾಣಬಹುದು. ಇದಕ್ಕೆ ಪೂರಕವಾಗಿ ಆಳುವ ಬಂಡವಾಳಶಾಹಿ ಪಕ್ಷಗಳ ಆರ್ಥಿಕ ನೀತಿ, ಅಸಂಬದ್ಧ ಯೋಜನೆಗಳೂ ಕಾರಣವೆಂಬುದನ್ನು ಮರೆಯುವಂತಿಲ್ಲ. ಕರ್ನಾಟಕ ರಾಜ್ಯದಲ್ಲಿ ಮುಂಬಯಿ ಕರ್ನಾಟಕ ಹೈದರಾಬಾದ್ ಕರ್ನಾಟಕಗಳು ಆರ್ಥಿಕವಾಗಿ, ಕೈಗಾರಿಕೋದ್ಯಮದಲ್ಲಿ ಹಿಂದುಳಿದಿವೆ. ನೀರಾವರಿ ಯೋಜನೆಯಲ್ಲಿ ವಂಚಿಸಲ್ಪಟ್ಟಿವೆ. ಅಪಾರವಾದ ಸಂಪನ್ಮೂಲಗಳ ಉಪಯೋಗದ ಚಿಂತನೆ ಇಲ್ಲದಾಗಿದೆ. ಹೀಗಾಗಿ ಆಳುವ ಬಂಡವಾಳಶಾಹಿ ಪಕ್ಷಗಳು ಕೆಲವು ಹಿಂದುಳಿದ ಪ್ರದೇಶಗಳನ್ನು ನಿರ್ಲಕ್ಷಿಸುತ್ತಿರುವುದರಿಂದ ಪ್ರತ್ಯೇಕತೆಯ ವಿಷಬೀಜ ಮೊಳಕೆ ಹೊಡಲು ಕಾರಣವಾಗುತ್ತಿವೆ.

ಮುಂಬಯಿ ಮತ್ತು ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರತ್ಯೇಕತಾವಾದದ ಕೂಗು ಕೇಳಿಬಂದಿತ್ತು. ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಅದು ನಡೆಯಿತು. ಬೇಡಿಕೆಗಳು ಸಮಂಜಸವಾಗಿದ್ದರೂ ಮುಖಂಡತ್ವ ವಿಚಾರಧಾರೆ ಈ ಚಳುವಳಿಗೆ ಜನರನ್ನು ಆಕರ್ಷಿಸಲಿಲ್ಲ. ಅದೇ ಕೆಲವೇ ತಿಂಗಳಲ್ಲಿ ಸ್ಥಗಿತಗೊಂಡಿತು. ಈಗ ಕೊಡಗಿನ ಪ್ರತ್ಯೇಕತಾವಾದಿಗಳು ಘಟಿದೇಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ವಿಲೀನಗೊಂಡ ಹೈದರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕಗಳಂತೆಯೇ ಕೊಡಗಿನ ಜನರೂ ಅಭಿವೃದ್ಧಿ ಶೀಲ ಯೋಜನೆಗಳಿಗಾಗಿ ಹಾತೊರೆಯುತ್ತಿರುವುದರಲ್ಲಿ ಆಶ್ಚರ್ಯವಿಲ್ಲ. ಕಾಫಿ, ಏಲಕ್ಕಿ, ಕಿತ್ತಳೆ, ಭತ್ತದ ಬೆಳೆಗಳಿಂದ ಸಮೃದ್ಧಿಗೊಂಡಿರುವ ಹಾಗೆಯೇ ಅರಣ್ಯ ಸಂಪತ್ತಿನಿಂದ ತುಂಬಿ ತುಳುಕುತ್ತಿರುವ ಕೊಡಗು ಸುಮಾರು ರೂ. 600 ಕೋಟಿಗೂ ಹೆಚ್ಚು ತೆರಿಗೆಯನ್ನು ರಾಜ್ಯ ಮತ್ತು ಕೇಂದ್ರಕ್ಕೆ ಸಲ್ಲಿಸುತ್ತಿದೆ. ಆದರೆ ಕೊಡಗು ಜಿಲ್ಲೆಯನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಇನ್ನೂ ಭೂಮಿತಾಯಿಯ ಯೋಜನೆಯನ್ನು ರಾಜ್ಯ ಸರಕಾರ ಕೈಗೊಳ್ಳದಿರುವುದು ಜಿಲ್ಲೆಯ ಜನರಲ್ಲಿ ಅಸಮಾಧಾನ ಹೆಚ್ಚಿಸಿರುವುದರಲ್ಲಿ ಸಂಶಯವಿಲ್ಲ. ನೆರೆ ರಾಜ್ಯಗಳಿಂದ ವಲಸೆ ಬರುತ್ತಿರುವ ಜನ ಕೊಡಗಿನ ಸಂಸ್ಕೃತಿ ಮತ್ತು ಪರಿಸರಕ್ಕೆ ಹಾನಿ ಉಂಟು ಮಾಡುತ್ತಿದ್ದಾರೆಂದೂ ಪ್ರತ್ಯೇಕತಾವಾದಿಗಳ ಆಕ್ಷೇಪ. ಆದರೆ ಪ್ರತ್ಯೇಕ ರಾಜ್ಯವಾದರೆ ಈ ಸಮಸ್ಯೆಗಳಿಗೆ ಸಮರ್ಪಕವಾದ ಪರಿಹಾರ ಸಿಗಬಹುದೇ ? ಸಾಧ್ಯವಿಲ್ಲ. ಕೊಡಗು ಒಂದು ಅತಿ ಚಿಕ್ಕ ರಾಜ್ಯವಾಗಿ ತನ್ನ ಅಭಿವೃದ್ಧಿ ಯೋಜನೆಗಳಿಗೆ ಸಂಪನ್ಮೂಲ ಕೊರತೆ ಎದುರಿಸಬೇಕಾಗುತ್ತದೆ. ಅದನ್ನು ನೀಗಿಸಲು ವಿದೇಶಿ ಬಂಡವಾಳಕ್ಕೆ ಬಲಿ ಹೋಗಬೇಕಾಗುತ್ತದೆ. ಆ ಮೂಲಕ ನೇರವಾಗಿ ವಿದೇಶಿಯರ ಆರ್ಥಿಕ - ರಾಜಕೀಯ ಹಿಡಿತಕ್ಕೊಳಗಾಗುವ ಭೀತಿಯಿದೆ.

ಆದ್ದರಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಜೀವದಾನ ಮಾಡಿದ ವೀರ ಕೊಡಗಿನ ಜನ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ತಾವು ಆರಿಸಿ ತಂದ ಜನ ಪ್ರತಿನಿಧಿಗಳ ಮೇಲೆ ಪ್ರಭಾವ ಬೀರುವ ಹೋರಾಟ ನಡೆಸುವ ಕ್ರಮ ಕೈಗೊಳ್ಳಬೇಕಲ್ಲದೆ ಪ್ರತ್ಯೇಕ ರಾಜ್ಯದ ಬೇಡಿಕೆಗಾಗಿ ಸಲ್ಲದ ಚಳುವಳಿ ನಡೆಸುವುದು ಸರಿಯಲ್ಲ ಎಂದು ಹೇಳಬೇಕಾಗುತ್ತದೆ. ಅಂಥ ಕ್ರಮಗಳನ್ನು ಕೈ ಬಿಡಬೇಕೆಂದು ಕೇಳಿಕೊಳ್ಳಬೇಕಾಗುತ್ತದೆ.

ಈಗ ಮತ್ತೆ ಚುನಾವಣೆ

ಪುಟ 1 ರಿಂದ

ದಾರಿಯಲ್ಲಿ ಗಳಿಸಿದ ಹಣವನ್ನು ಬಳಸಿ ಕಾಂಗ್ರೆಸ್ ಎಂ.ಪಿ.ಗಳನ್ನು ಖರೀದಿಸಲು ಸರ್ವಪ್ರಯತ್ನ ನಡೆಸಿತು. ಹೀಗೆ ಮಾಡುತ್ತಾ ಅದು ಕಾಂಗ್ರಸನ್ನೂ ನಾಚಿಸುವ ರೀತಿಯ ನೈತಿಕ ಅಧಃಪತನದ ಸಿನಿಕತನದ ಪ್ರಪಾತಕ್ಕಿಳಿಯಿತು. **ನರಸಿಂಹರಾವ್ ಕಂಪನಿ 1993 ರಲ್ಲಿ ತಮ್ಮ ಸರಕಾರ ಉಳಿಸಿಕೊಳ್ಳಲು ನಾಲ್ಕು ಜೆ.ಎಂ.ಎಂ. ಎಂ.ಪಿಗಳನ್ನು ಇನ್ನು ಕೆಲವು ಅಜಿತ್ ಸಿಂಗ್ ಗುಂಪಿನವರಿಗೂ ಲಂಚ ನೀಡಿದ್ದರು. ಬಿಜೆಪಿ ಈಗ ಕಾಂಗ್ರೆಸ್ಸಿನ ಮೂರನೇ ಒಂದಕ್ಕಿಂತಲೂ ಹೆಚ್ಚು ಎಂ.ಪಿ.ಗಳನ್ನು ಗೆದ್ದುಕೊಂಡು ಅವರ ದಾಖಲೆಯನ್ನು ಮುರಿಯಲು ಪ್ರಯತ್ನಿಸಿತು.** ಪ್ರಸಕ್ತ ಮಾರುಕಟ್ಟೆ ದರವನ್ನು ಗಮನಿಸಿದರೆ ಕಾಂಗ್ರೆಸ್ ತೊಡಗಿಸಿದ್ದಕ್ಕಿಂತ ಕನಿಷ್ಟ 50 ಪಟ್ಟು ಹೆಚ್ಚು ಕಪ್ಪು ಹಣವನ್ನು ತೊಡಗಿಸಬೇಕಾಗಿದೆ ಎಂಬುದೇ ಇದರರ್ಥ'' ಎಂದು ಸುರ್ಜಿತ್ ಕಟುವಾಗಿ ಟೀಕಿಸಿದ್ದಾರೆ. ಚುನಾವಣೆಗಳ ನಂತರ ಅತ್ಯಂತ ದೊಡ್ಡ ಪಕ್ಷವಾಗಿ ಮೂಡಿಬಂದ ಅದು ಈಗ ಜನಗಳ ವಿಶ್ವಾಸವನ್ನು ಕಳಕೊಳ್ಳುವಂತಾಗಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಸಂಯುಕ್ತ ರಂಗವೇ ಏಕೈಕ ಪರ್ಯಾಯ

ಈ ಎಲ್ಲಾ ದೊಂಬರಾಟಗಳ ನಡುವೆ ಸಂಯುಕ್ತ ರಂಗ ಯಾವುದೇ ಕುಕೃತ್ಯಕ್ಕೆ ಇಳಿಯದೆ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡಿದೆ. **ಕೋಮುವಾದಿಯಾದ ಮತ್ತು ಈಗ ತ್ವರಿತವಾಗಿ ಭ್ರಷ್ಟವಾಗುತ್ತಿರುವ ಬಿಜೆಪಿ ಹಾಗೂ ಸೋತು ಸುಣ್ಣವಾಗಿರುವ ಕಾಂಗ್ರೆಸ್** ಇವೆರಡರ ನಡುವೆ ಯಾವುದನ್ನು ತಾನೇ ಆರಿಸಿಕೊಳ್ಳಲು ಸಾಧ್ಯ? ಒಂದು ಮೂರನೇ ಪರ್ಯಾಯ ಈಗಿನ ದೇಶದ ರಾಜಕೀಯದ ವಾಸ್ತವಿಕ ಅವಶ್ಯಕತೆ. ಸಂಯುಕ್ತ ರಂಗ ಇದನ್ನು ನೀಡಬಲ್ಲದು ಎಂದು ಸುರ್ಜಿತ್ ಹೇಳುತ್ತಾರೆ.

''ಬಿಜೆಪಿ ಕಾಂಗ್ರೆಸ್ಸಿನ ಚೌಕಟ್ಟಿನಿಂದ ಹೊರಗಿರುವ ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಪಕ್ಷಗಳು ಸೇರಿ ರಚಿಸಿಕೊಂಡ ಈ ಸಂಯುಕ್ತ ರಂಗ ಅಧಿಕಾರದಲ್ಲಿರಲು ಕಾಂಗ್ರೆಸ್ಸನ್ನು ಅವಲಂಬಿಸಬೇಕಾಗಿ ಬಂದಿತು. ಆದರೂ ಜಾತ್ಯಾತೀತತೆ, ಒಕ್ಕೂಟವಾದ ಹಾಗೂ ಜನಗಳ ಹಿತಾಸಕ್ತಿಗಳಿಗೆ ಬದ್ಧವಾದ ಒಂದು ಪರ್ಯಾಯದ ಸಾಧ್ಯತೆಗಳನ್ನು ಇದು ತೋರಿಸಿಕೊಟ್ಟಿದೆ. ಇದನ್ನು ಬಲಪಡಿಸುವ ಅಗತ್ಯವಿದೆ ಎಂಬುದನ್ನು ಕಳೆದ ಅವಧಿಯ ಘಟನೆಗಳು ತೋರಿಸಿಕೊಟ್ಟಿವೆ.

ಐಎಂಎಫ್-ವಿಶ್ವಬ್ಯಾಂಕ್ ಮಾದರಿಗಿಂತ ಭಿನ್ನವಾದ ಆರ್ಥಿಕ ನೀತಿಗಳನ್ನು ಆರಂಭಿಸುವಲ್ಲಿ ಅದರ ವಿಫಲತೆ ಪರ ಕಾರ್ಯನಿರ್ವಹಣೆಗೆ ಅಡ್ಡಿಯುಂಟು ಮಾಡಿದೆ. ಈಗ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಕಾಂಗ್ರೆಸ್ ಹಾಗೂ ಬಿಜೆಪಿಯ ಆರ್ಥಿಕ ನೀತಿಗಳಿಗಿಂತ ಭಿನ್ನವಾದ ಪರ್ಯಾಯ ನೀತಿಗಳತ್ತ ಅದು ಗಮನ ಕೇಂದ್ರೀಕರಿಸಬೇಕಾಗಿದೆ'' ಎಂದು ಸುರ್ಜಿತ್ ಹೇಳುತ್ತಾರೆ.

ಎಡ ಪಕ್ಷಗಳ ವಿಶ್ವಾಸರ್ಹತೆ

ಸಂಯುಕ್ತ ರಂಗದಲ್ಲಿ ಎಡಪಕ್ಷಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ರಂಗದ ಐಕ್ಯತೆಯನ್ನು ಬೆಸೆಯುವಲ್ಲಿ, ಉಳಿಸಿಕೊಳ್ಳುವಲ್ಲಿ ಅದು ಒಂದು ಮಹತ್ವದ ಪಾತ್ರವಹಿಸಿದೆ. ಮುಂದಿನ ಲೋಕಸಭೆಯಲ್ಲಿ ಎಡರಂಗದ ಬಲವರ್ಧನೆ ಸಂಯುಕ್ತ ರಂಗ ಹೆಚ್ಚು ಕಾಲ ಸಮರ್ಥವಾಗಿ ನಡೆಯುವಂತಾಗಲು ಅಗತ್ಯ, ಜಾತ್ಯಾತೀತತೆ, ದುಡಿಯುವ ಜನಗಳ ಹಿತಾಸಕ್ತಿಗಳ ರಕ್ಷಣೆ ಹಾಗೂ ಸ್ವಾವಲಂಬೀ ಆರ್ಥಿಕ ಬೆಳವಣಿಗೆಗೂ ಸಂಸತ್ತಿನಲ್ಲಿ ಎಡಪಕ್ಷಗಳ ಬಲವರ್ಧನೆ ಒಂದು ಗ್ಯಾರಂಟಿಯನ್ನು ನೀಡುತ್ತದೆ ಎಂದು ಸುರ್ಜಿತ್ ಹೇಳಿದ್ದಾರೆ.

'ನಾವೀಗ ಚುನಾವಣೆಗಳಿಗೆ ಸಿದ್ಧರಾಗುತ್ತಿದ್ದೇವೆ. ಜನ ತಮ್ಮನ್ನು ಸಂಯುಕ್ತ ರಂಗದೊಂದಿಗೆ ಗುರುತಿಸಿ ಕೊಳ್ಳುತ್ತಾರೆ. ಜನಗಳ ಮುಂದೆ ಬಟ್ಟಬಯಲಾಗಿರುವ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಜನ ಉತ್ತರ ಕೇಳುತ್ತಾರೆ. ಯಜಮಾನರಾದ ಜನತೆ ಅವರ ಅದೃಷ್ಟವನ್ನು ನಿರ್ಧರಿಸುತ್ತಾರೆ.' ಎಂದು ಸುರ್ಜಿತ್ ಹೇಳಿದ್ದಾರೆ.

ಡಿಸೆಂಬರ್ 17ರಂದು ಮುಷ್ಕರಕ್ಕೆ ನಿರ್ಧಾರ

ಪುಟ 1 ರಿಂದ

ಸಾಧ್ಯವಾಗುವುದು ಎಂದರು.

ಸಮಾವೇಶದ ಚರ್ಚೆಗಾಗಿ ಪ್ರಬಂಧ ಒಂದನ್ನು ಮಂಡಿಸಿದ ಸಿ.ಐ.ಟಿ.ಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಅವರು 1995ರ ಪಿಂಚಣಿ ಯೋಜನೆಗಾಗಿ ಪ್ರತಿ ವರ್ಷ ರೂ. 2,000 ಕೋಟಿಗೂ ಅಧಿಕ ಮೊತ್ತ ನೌಕರರ ಭವಿಷ್ಯ ನಿಧಿಯಿಂದ ಸಂಗ್ರಹವಾಗುತ್ತಿದ್ದರೂ ರೂ. 100 ಕೋಟಿಗೂ ಕಡಿಮೆ ಮೊತ್ತವನ್ನು ಮಾತ್ರ ಪಿಂಚಣಿ ರೂಪದಲ್ಲಿ ಪಾವತಿ ಮಾಡಲಾಗುತ್ತದೆ ಎಂದರು. ಎರಡು ಸಾವಿರ ಕೋಟಿ ರೂಪಾಯಿಗಳಿಗೆ ವಾರ್ಷಿಕವಾಗಿ ಬಡ್ಡಿಯ ರೂಪದಲ್ಲಿ ರೂ. 240 ಕೋಟಿ ಆದಾಯ ಬರುತ್ತಿದ್ದು ಕೇವಲ ರೂ. 100 ಕೋಟಿಯನ್ನು ಮಾತ್ರ ವಿತರಣೆ ಮಾಡುವುದರಲ್ಲಿನ ಮೋಸವನ್ನು ಕಾರ್ಮಿಕರು ಮನಗಾಣಬೇಕು ಎಂದರು. ಇದಲ್ಲದೆ ಹಿಂದಿನ ಕುಟುಂಬ ಪಿಂಚಣಿ ಯೋಜನೆಯ ಮೂಲಕ ಸಂಗ್ರಹವಾದ ರೂ. 12,000 ಕೋಟಿಗಳು ಸಹ ಪ್ರಸಕ್ತ ಯೋಜನೆಗೆ ಬಳಸಲಾಗುತ್ತಿದ್ದು ಅದರ ಮೇಲಿನ ವಾರ್ಷಿಕ ಬಡ್ಡಿ ರೂ. 1,440 ಕೋಟಿ ಆಗುತ್ತದೆ ಎಂದರು. ಸಂಗ್ರಹವಾದ ಮೊತ್ತದ ಮೇಲಿನ ಪೂರ್ಣ ಬಡ್ಡಿಯನ್ನು ಸಹ ಪಿಂಚಣಿಯಾಗಿ ಕೊಡದೆ ಕಾರ್ಮಿಕರಿಗೆ ಅನ್ಯಾಯ ಮಾಡಲಾಗುತ್ತಿದೆ ಮಾತ್ರವಲ್ಲ ಸಂಗ್ರಹವಾದ ಅಸಲನ್ನು ಸಹ ಅಂತಿಮವಾಗಿ ಕಬಳಿಸಲಾಗುತ್ತದೆ ಎಂದು ಅವರು ಹೇಳಿದರು. ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರಾದ ಸೂರ್ಯನಾರಾಯಣ ರಾವ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಖಾನೆಗಳ ಕಾರ್ಮಿಕರೂ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಕಾರ್ಮಿಕ ಪ್ರತಿನಿಧಿಗಳು ಡಿಸೆಂಬರ್ 17ರ ಮುಷ್ಕರವನ್ನು ಬೆಂಬಲಿಸಿ ಮಾತನಾಡಿದರು. ಆರಂಭದಲ್ಲಿ ಬೆಂಗಳೂರಿನ ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಸ್ವಾಗತಿಸಿದರು. ಕೊನೆಯಲ್ಲಿ ಸಿ.ಐ.ಟಿ.ಯು. ರಾಜ್ಯ ಖಜಾಂಚಿಯಾಗಿರುವ ಕೆ.ವಿ. ಶ್ರೀನಿವಾಸ್ ವಂದಿಸಿದರು.

ಬೀಡಿ ಕಾರ್ಮಿಕರ ವಾರ್ಷಿಕ ಸಭೆ

ಮಂಗಳೂರು: ಮೂಸ್ನೂರು ಪ್ರದೇಶದ ಬೀಡಿ ಕಾರ್ಮಿಕರ ಮಹಾಸಭೆಯು ಇತ್ತೀಚೆಗೆ ನಡೆಯಿತು. ಬೀಡಿ ಕಾರ್ಮಿಕರನ್ನು ಒಂದಿಲ್ಲೊಂದು ನೆಪ ಒಡ್ಡಿ ಶೋಷಣೆ ಮಾಡುತ್ತಿರುವ ಬೀಡಿ ಕಂಟ್ರಾಕ್ಟರ್‌ದಾರರ ನೀತಿಯನ್ನು ಖಂಡಿಸಿ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ನಡೆಸುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಸಭೆಯಲ್ಲಿ ಬೀಡಿ ಕಾರ್ಮಿಕರ ಮುಖಂಡ ರಾಮ ಸುಕುಮಾರ್, ಡಿವೈಎಫ್‌ನ ಕೆ. ಕೃಷ್ಣಪ್ಪ ಸಾಲಿಯಾನ್, ಸಿಐಟಿಯು ಜಿಲ್ಲಾ ಸದಸ್ಯೆ ಕೆ. ಪದ್ಮಾವತಿ ಕುತ್ತಾರ್, ಸಿಪಿಐ(ಎಂ) ನ ಕೆ.ಈಶ್ವರ್, ಉಪಸ್ಥಿತರಿದ್ದರು.

30 ಜನರ ಹೊಸ ಸಮಿತಿ ರಚನೆಯಾಗಿ ಯು.ಜಯಂತ್ ನಾಯ್ಕ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ಅಂಗನವಾಡಿ ನೌಕರರ ಧರಣಿ

ತುಮಕೂರು: ಜಿಲ್ಲೆಯ ಗುಬ್ಬಿ ತಾಲೂಕಿನ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸೇವಕಿಯರು ಡಿಸೆಂಬರ್ 1 ರಂದು ತಮ್ಮ ಬಹುದಿನಗಳ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ದ ನೇತೃತ್ವದಲ್ಲಿ ಮೆರವಣಿಗೆ ನಡೆಸಿ, ನಂತರ ತಾಲೂಕು ಕಛೇರಿ ಮುಂದೆ ಧರಣಿ ನಡೆಸಿದರು.

ಧರಣಿಯನ್ನುದ್ದೇಶಿಸಿ ಮಾತನಾಡಿದ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಅಂಗನವಾಡಿ ಕಾರ್ಯಕರ್ತೆಯರು 20 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಅವರಿಗೆ ಕೊಡುವ ಗೌರವ ಧನ ಏನೇನೂ ಸಾಲದು. ಕೂಡಲೇ ಸರ್ಕಾರ ಅವರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು. ಬಿ.ಕೆ. ಪ್ರಭಾವತಿ, ಕುಮಾರ್, ಅಲ್ಲಾ ಬಕಾಸಿ ಈ ಸಭೆಯನ್ನುದ್ದೇಶಿಸಿ ಮಾತನಾಡಿದರು. ಅನುಸೂಯ ಮತ್ತು ಲಲಿತ ನೇತೃತ್ವ ವಹಿಸಿದ್ದರು.

ಪತ್ರಿಕೆ ವಿರುದ್ಧ ದಾಳಿಗೆ ಖಂಡನೆ

ಆಂದೋಲನ ದಿನಪತ್ರಿಕೆಗಳನ್ನು ಕೊಡಗು ರಾಜ್ಯ ಮುಕ್ತಿ ಮೋರ್ಚಾದ ಕಾರ್ಯಕರ್ತರು ಜಿಲ್ಲೆಯ ಹಲವೆಡೆ ಸುಟ್ಟು ಹಾಕಿ, ವೀರಾಜಪೇಟೆ. ಅಮ್ಮತ್ತಿ ಮುಂತಾದೆಡೆ ಪತ್ರಿಕೆಗಳನ್ನು ಮಾರದಂತೆ ಬೆದರಿಸಿ, ಪತ್ರಿಕಾ ಕಛೇರಿಗೆ ದೂರವಾಣಿಯ ಮೂಲಕ ಬೆಂಕಿ ಹಾಕುವ ಹಾಗೂ ಬಾಂಬ್ ಸ್ಫೋಟಿಸುವ ಬೆದರಿಕೆಗಳನ್ನು ಹಾಕಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಖಂಡಿಸಿದೆ.

ತಮ್ಮ ವಿರುದ್ಧ ಬರೆಯುವ ಪತ್ರಿಕೆಗಳನ್ನು, ಜನರನ್ನು, ಸುಡುವ, ಕೊಲೆ ಬೆದರಿಕೆ ಹಾಕುವ ಮೂಲಕ ಜಿಲ್ಲೆಯಲ್ಲಿ ಫ್ಯಾಸಿಸ್ಟ್ ಪಡೆ ರೀತಿಯಲ್ಲಿ ತೊಡಗಿರುವ ಈ ಸಂಘಟನೆಯ ಕಾರ್ಯಕರ್ತರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಒತ್ತಾಯಿಸಿದೆ.

ವಿಜ್ಞಾನಿ ಕಲಾಂ 'ಭಾರತ ರತ್ನ'

ಖ್ಯಾತ ರಕ್ಷಣಾ ವಿಜ್ಞಾನಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ (66 ವರ್ಷ) ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ' ಗೌರವಕ್ಕೆ ಪಾತ್ರರಾಗಿದ್ದಾರೆ. ನವೆಂಬರ್ 26 ರಂದು ಇದರ ಪ್ರಕಟಣೆ ಹೊರಬಿತ್ತು.

ಡಾ. ಕಲಾಂ ಸೂಕ್ಷ್ಮ ಕ್ಷಿಪಣಿ ತಂತ್ರಜ್ಞಾನವನ್ನು ದೇಶೀಯವಾಗಿ ಅಭಿವೃದ್ಧಿಪಡಿಸುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸಿದ್ದಾರೆ.

ವೈಮಾನಿಕ ಮತ್ತು ರಾಕೆಟ್ ತಂತ್ರಜ್ಞಾನದಲ್ಲಿ ಇವರದು ವಿಶೇಷ ಪರಿಣತಿ. 'ಅಗ್ನಿ' ಮತ್ತು 'ಪೃಥ್ವಿ' ಕ್ಷಿಪಣಿಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ.

ಡಾ. ಕಲಾಂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಮುಖ್ಯಸ್ಥರು. ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರೂ ಹೌದು.

'ದೇಶ ನನಗೆ ಅತೀವ ಗೌರವವನ್ನು ತಂದುಕೊಟ್ಟಿದೆ. ನನಗೆ ಸಂತಸವಾಗಿದೆ. ನನ್ನ ಪಾಲಕರು ಮತ್ತು ಶಿಕ್ಷಕರಿಗೆ ನಾನು ಋಣಿ. ತಿರುವನಂತಪುರ ಮತ್ತು ಹೈದರಾಬಾದಿನಲ್ಲಿರುವ ನನ್ನ ತಂಡಗಳಿಗೂ ಕೃತಜ್ಞತೆ ಸಲ್ಲುತ್ತದೆ' - ಇದು 'ಭಾರತ ರತ್ನ'ನ ವಿನಮ್ರ ಪ್ರತಿಕ್ರಿಯೆ.

ಜಾಥಾದ ಗೆಜ್ಜೆ ನಾದಕ್ಕೆ ಜನರ ಹೆಜ್ಜೆ

ಪಕ್ಷದ 16ನೇ ರಾಜ್ಯ ಸಮ್ಮೇಳನದ ಸಿದ್ಧತೆಗಳು ಭರದಿಂದ ನಡೆದಿವೆ. ಹತ್ತು ದಿನಗಳ ಕಾಲ ನಡೆದ ಸಾಂಸ್ಕೃತಿಕ ಕಾರ್ಯಾಗಾರದಲ್ಲಿ ಸಿದ್ಧಗೊಂಡ ನಾಟಕ, ಹಾಡುಗಳುಳ್ಳ ನಾಲ್ಕು ಜಾಥಾಗಳು ಪಕ್ಷದ ಸಂದೇಶವನ್ನೊತ್ತು ಕೋಲಾರ ಜಿಲ್ಲೆಯಾದ್ಯಂತ ಸಂಚರಿಸತೊಡಗಿವೆ. ಸಮ್ಮೇಳನದ ಯಶಸ್ಸಿಗೆ ಉದಾರ ಸಹಾಯ ನೀಡಲು, ಡಿಸೆಂಬರ್ 30 ರ ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸಲು ಜನತೆಗೆ ಮನವಿ ಮಾಡುತ್ತಿವೆ. ಎಲ್ಲಾ ತಾಲೂಕುಗಳ ಬಹುತೇಕ ಎಲ್ಲಾ ಮುಖ್ಯ ಹಳ್ಳಿಗಳನ್ನು ತಲುಪುವ ಆಶಯ ಜಾಥಾದ್ದು. ಹಳ್ಳಿಯ ಗಡಿಯಿಂದಲೇ ತಮಟೆ ಬಾರಿಸುತ್ತಾ ಹೆಜ್ಜೆ-ಗೆಜ್ಜೆ ನಾದಗಳೊಂದಿಗೆ ಊರು ಪ್ರವೇಶಿಸುವ ಸಮವಸ್ತ್ರಧಾರಿಗಳ ಕಲಾತಂಡ ಜನತೆಯನ್ನು ಕೆಲವು ನಿಮಿಷಗಳಲ್ಲೇ ಆಣಿನೆರೆಸುತ್ತಿವೆ. ಜನರೂ ಸಹ ಕಾರ್ಯಕರ್ತರ ಹೆಜ್ಜೆಗಳನ್ನು ಹಿಂಬಾಲಿಸಿ ಕಲಾಜಾಥಾ ಜನರ ಜಾಥಾವಾಗುತ್ತಿವೆ.

ಸುತ್ತುವರಿದ ಜನಗಳಿಂದ ಶೃಂಗಾರಗೊಂಡ ಊರ ಅಂಗಳದಲ್ಲಿ ಹಾಡು, ನಾಟಕ, ಮಾತುಗಳ ಬಳಿಕ 'ಅಂದರೂ ಮನವಾಳ್ಳೆ' (ಎಲ್ಲರೂ ನಮ್ಮವರೇ) ಎಂದೂ ತಂಡವನ್ನು ಬೀಳ್ಕೊಡುತ್ತಾರೆ. ಬರಿಗೈಯಲ್ಲಿ ಅಲ್ಲ. ಇದ್ದಷ್ಟು ಚಿಡಿ-ಬಿಡಿ ಕಾಸು ಕೊಟ್ಟು ಹಿಟ್ಟು(ಮುದ್ದೆ) ಅನ್ನ ಇಟ್ಟು!!

ಕಲಾವಿದರೋ ಬಹುತೇಕ ಯುವಜನ-ವಿದ್ಯಾರ್ಥಿಗಳು. ಜೊತೆಗೆ ಪರಿಣಿತ ಹಿರಿಯರು. ಹಾಗೂ ನಿರಂತರ ಜನರ ಹೃದಯದೊಂದಿಗೆ ಬಾಂಧವ್ಯ ಎಳೆ ಪೋಣಿಸುವ ನಿಪುಣರು. ದುಡಿಯುವ ಜನರಲ್ಲಿ ರಾಜಕೀಯ ಚೈತನ್ಯ ಮೂಡಿಸುವ ಈ ಕಲಾ ತಂಡಗಳು ನಾಟಕ. ಒಂದೊಂದು ತಂಡಕ್ಕೂ ಒಂದೊಂದು ವಿಶಿಷ್ಟ ಹೆಸರು. 'ಸಫ್ದರ್ ಹಶ್ಮಿ', 'ಕಾ|| ಮಳ್ಳೂರು ಪಾಪಣ್ಣ', 'ನವೆಂಬರ್ ಹುತಾತ್ಮರು', ಭಗತ್ ಸಿಂಗ್ ಕನ್ನಡ. ತೆಲುಗು. ತಮಿಳು ಭಾಷೆ ಗಳಲ್ಲಿಯೂ ಜನರೊಂದಿಗೆ ಸಂವಾದಿಸುತ್ತೇವೆ. ಡಿಸೆಂಬರ್ 1 ರಂದು ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಐತಿಹಾಸಿಕ ಸ್ಥಳ ವಿಧುರಾಶ್ವಥ (ಗೌರಿಬಿದನೂರು)ದಲ್ಲಿ ಹಾಗೂ ಜಾತಿ ಭೇದಭಾವ, ಅಲ್ಲಿನ ಅಂಧಶ್ರದ್ಧೆಯ ವಿರುದ್ಧ ವೈಚಾರಿಕ ಸಂಘರ್ಷ ನಡೆಸಿದ ನಾರಾಯಣತಾತನವರ ನೆಲೆಯಾಗಿದ್ದ ಕೈವಾರ(ಚಿಂತಾಮಣಿ)ದಲ್ಲಿ ಜಾಥಗಳು ಉದ್ಘಾಟನೆಗೊಂಡವು. ಕೈವಾರದಲ್ಲಿ ಉದ್ಘಾಟನೆಗೊಂಡ ತಂಡ ಕನಿಷ್ಟ 83 ಪ್ರದೇಶಗಳಲ್ಲಿ ಪ್ರದರ್ಶನ ನೀಡಲಿದೆ. ಪ್ರತಿಯೊಂದು ತಂಡ 12 ದಿನಗಳು ಸಂಚರಿಸಲಿವೆ.



'ಮುಂಬರುವ ದಿನಗಳು ನಿರ್ಣಾಯಕ'

ಭವ್ಯ ಇತಿಹಾಸವಿರುವ ಕಾಂಗ್ರೆಸ್ ಪಕ್ಷವನ್ನು ಹಾಗೂ ದೇಶವನ್ನು ಉಳಿಸಲು ಮುಂದಾಗಬೇಕೆಂದು ಶ್ರೀಮತಿ ಸೋನಿಯಾ ಗಾಂಧಿಯವರ ಕಾಲನ್ನು ಹಿಡಿದು ಸೀತಾರಾಮ ಕೇಸರಿಯವರು ಬೇಡಿಕೊಳ್ಳುತ್ತಿರುವುದು ಕಾಂಗ್ರೆಸ್‌ಗೆ ಹಾಗೂ ದೇಶದ ಜನರಿಗೆ ಮಾಡುತ್ತಿರುವ ಅತೀ ದೊಡ್ಡ ಅನ್ಯಾಯವಾಗಿದೆ. ದೇಶದ ಬಗ್ಗೆ ಕನಿಷ್ಟ ಜವಾಬ್ದಾರಿ, ಕಾಳಜಿಯಿಲ್ಲದ ಕಾಂಗ್ರೆಸ್ ನಾಯಕತ್ವ ಜೈನ್ ಆಯೋಗದ ವರದಿಯನ್ನು ನೆಪ ಮಾಡಿಕೊಂಡು ಸಂಯುಕ್ತ ರಂಗ ಸರಕಾರಕ್ಕೆ ನೀಡುತ್ತಿರುವ ಬೆಂಬಲ ವಾಪಸು ಪಡೆದು ದೇಶವನ್ನು ಅತಂತ್ರಕ್ಕೆ ದೂಡಿದೆ ಎಂದು ಖ್ಯಾತ ಪ್ರಗತಿಪರ ಚಿಂತಕ, ನಟರೂ ಆದ ಪ್ರೊ. ಜಿ.ಕೆ.ಗೋವಿಂದ ರಾವ್‌ರವರು ನುಡಿದರು. ಅವರು ಡಿಸೆಂಬರ್ 1 ರಂದು ಕೈವಾರದಲ್ಲಿ ಸಿ.ಪಿ.ಐ(ಎಂ)ನ ರಾಜ್ಯ ಸಮ್ಮೇಳನದ ಪ್ರಯುಕ್ತ ಹೊರಟಿರುವ ಜಾಥಗಳನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

"ಕಾಂಗ್ರೆಸ್‌ಗೆ ಪರ್ಯಾಯ, ರಾಷ್ಟ್ರೀಯವಾದಿ. ಸ್ವಚ್ಛ ಎಂದೆಲ್ಲಾ ಪೋಸ್ ಕೊಡುವ ಬಿ.ಜೆ.ಪಿ. ಪಕ್ಷವು ಪ್ರಜಾಪ್ರಭುತ್ವದ ನೀತಿ ನಿಯಮಗಳನ್ನು ಗಾಳಿಗೆ ತೂರಿ ದೊಡ್ಡ ಪ್ರಮಾಣದಲ್ಲಿ ಅಕ್ರಮ, ಭ್ರಷ್ಟಾಚಾರದಲ್ಲಿ ತೊಡಗಿವೆ. ಇತ್ತೀಚಿನ ಉತ್ತರ ಪ್ರದೇಶದ ರಾಜಕೀಯ ವಿದ್ಯಮಾನಗಳು ಇದನ್ನು ಸಾಬೀತು ಪಡಿಸಿವೆ. ಅದರ ಅಧಿಕಾರ ಲಾಲಸೆ, ಕೋಮುವಾದಿ ವಿಷ ಪ್ರಚಾರ ಅಪಾಯಕಾರಿ ಎಂದರು. ಈ ಎಲ್ಲಾ ಭ್ರಷ್ಟ, ಕಲುಷಿತ ವಾತಾವರಣದಲ್ಲಿಯೂ ಎಡ ಪಕ್ಷಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ, ಇಂತಹ ಶಕ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಂಬಲಿಸಬೇಕೆಂದು ಜನರಲ್ಲಿ ವಿನಂತಿಸಿದರು. ಮುಂಬರುವ ದಿನಗಳು ಅತ್ಯಂತ ನಿರ್ಣಾಯಕವಾಗಿವೆ. ಕ್ಷಣ ಕಾಲವು ಎಚ್ಚರ ತಪ್ಪುವ ಹಾಗಿಲ್ಲ. ಆದ್ದರಿಂದ ಜನರನ್ನೂ ಜಾಗೃತಗೊಳಿಸಿ. 'ಎಡ, ಧರ್ಮನಿರಪೇಕ್ಷ, ಪ್ರಜಾಪ್ರಭುತ್ವ ಶಕ್ತಿಗಳ ಪರ್ಯಾಯವೊಂದೆ ಉಳಿದಿರುವ ಮಾರ್ಗ' ಎಂದರು. ಇದಕ್ಕಾಗಿ ಶ್ರಮಿಸಲು ಸಿದ್ಧನಿರುವುದಾಗಿ ನುಡಿದರು. ಜಾಥಗಳು ಯಶಸ್ವಿಯಾಗಿ ಜನರನ್ನೂ ತಲುಪಲೆಂದು ಶುಭ ಹಾರೈಸಿ, ಉದ್ಘಾಟಿಸಿದರು.

'ಇಂದು ಎರಡು ಐತಿಹಾಸಿಕ ಸ್ಥಳಗಳಲ್ಲಿ ಜಾಥಗಳು ಉದ್ಘಾಟನೆಯಾಗುತ್ತಿವೆ. ಪರಂಪರೆಯ ಅತ್ಯುತ್ತಮ ಅಂಶಗಳನ್ನು ಸಿ.ಪಿ.ಐ.(ಎಂ) ಸದಾ ಎತ್ತಿ ಹಿಡಿದಿದೆ. ಅವುಗಳನ್ನು ಬೆಳೆಸುತ್ತದೆ ಎಂದು ಮಾತನ್ನಾರಂಭಿಸಿದ ಪಕ್ಷದ ರಾಜ್ಯ ಸಮಿತಿ ಸದಸ್ಯ ಕಾಂ|| ಎಸ್.ವೈ. ಗುರುಶಾಂತ್ ಜನರ ನೋವು ಸಂಕಷ್ಟಗಳಿಗೆ ಸ್ಪಂದಿಸಿದ್ದು ಸಿ.ಪಿ.ಐ.(ಎಂ). ಕೋಲಾರದ ಜನತೆ ವಿದ್ಯುತ್ ಕಡಿತ, ಬೆಳೆಗಳ ಬೆಲೆ ಕುಸಿತ, ಲಾಕಪ್ ಸಾವು, ಜಾತಿಯ ಜಗಳ, ಗ್ಯಾಟ್ ಒಪ್ಪಂದ, ಕೋಮುಗಲಭೆ, ಮುಂತಾದ ಸಂದರ್ಭದಲ್ಲಿ ಹೋರಾಡಿ ಸ್ಪಂದಿಸಿದ್ದು ಜನತಾದಳ, ಕಾಂಗ್ರೆಸ್ ಅಥವಾ ಬಿ.ಜೆ.ಪಿ. ಅಲ್ಲ, ಅದು ಸಿ.ಪಿ.ಐ(ಎಂ) ಎಂದರು. ಜಾತೀಯತೆ ವಿರುದ್ಧ ಧ್ವನಿಯೆತ್ತಿದ ಬಂಡಾಯಗಾರ ನಾರಾಯಣಪ್ಪ ತಾತನವರ ಜಾತಿ ಯಾವುದೆಂದು ಹುಡುಕುವ ಕೆಲವು ವಂಚಕರೂ ಇದ್ದಾರೆ. ಇದು ಅವರಿಗೆ ಬಗೆವ ಘೋರ ಅವಮಾನ. ಜಾತೀಯತೆ, ಮತೀಯತೆಯ ಮನೋಭಾವ ಹಬ್ಬಿಸಿ ದುಡಿಯುವ ಜನರನ್ನೂ ಒಡೆಯುವ ಸಂಚುಗಳ ಎದುರು ಸಿಡಿದು ನಿಲ್ಲಬೇಕಾದ ಸಂದರ್ಭ ಎಂದರು ಕಾಂಗ್ರೆ ಬಿ.ಜೆ.ಪಿ.ಗಳ ದಿವಾಳಿತನ ಬಯಲಿಗಿಟ್ಟು. ಎಡ ಪಕ್ಷಗಳ ಕಾರ್ಯ ವಿವರಿಸಿ ಜನತೆ ಸಹಾಯಧನವನ್ನು ಉದಾರವಾಗಿ ನೀಡಿ. ರ್‍ಯಾಲಿಯಲ್ಲಿ ಭಾಗವಹಿಸಲು ಮನವಿಮಾಡಿದರು. ಪಕ್ಷದ ರಾಜ್ಯ ಸಮ್ಮೇಳನದ ಕಲಾಪಗಳ ಮಹತ್ವ ವಿವರಿಸಿದರು.

'ಸಮುದಾಯ'ದ ಮುಖಂಡ ಹಾಗೂ ಕಲಾ ತಂಡಗಳನ್ನು ರೂಪಿಸುವಲ್ಲಿ ಸಕ್ರಿಯ ಪಾತ್ರವಹಿಸಿದ ಗುಂಡಣ್ಣನವರು ನಾಟಕಗಳ ಅಂತಃಸತ್ವದ ಕುರಿತು ವಿವರಿಸಿದರು. ಪಕ್ಷದ ಹಿರಿಯ ನಾಯಕರಾದ ಕಾಂ|| ಜಿ.ವಿ. ಅಶ್ವಥನಾರಾಯಣರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಹಾಗೂ ರಾಜ್ಯ ಸಮಿತಿ ಸದಸ್ಯರಾದ ಕಾಂ|| ಜಿ.ಸಿ. ಬಯ್ಯಾರೆಡ್ಡಿಯವರು 16ನೇ ರಾಜ್ಯ ಸಮ್ಮೇಳನದ ಪ್ರಾಮುಖ್ಯತೆಗಳನ್ನು ವಿವರಿಸಿ, ಎಲ್ಲರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಪಕ್ಷದ ನಾಯಕರಾದ ಕಾಂ|| ಕೆ.ಎಂ. ವೆಂಕಟೇಶ್, ಪ್ರಚಾರ ಸಮಿತಿಯ ಸಂಚಾಲಕರಾದ ಕಾಂ|| ಪಿ. ಶ್ರೀನಿವಾಸ್ ಮುಂತಾದವರಿದ್ದರು.

ಸಮಾರಂಭದ ನಂತರ "ಗೊರ್ರ್ಲು ತಿರುಗ ಪಡತ್ತಾಯಿ"(ಕುರಿಗಳು ತಿರುಗಿಬೀಳುತ್ತವೆ) ಎಂಬ ನಾಟಕವನ್ನು ಪ್ರದರ್ಶಿಲಾಯಿತು. ನೂರಾರು ಜನರು ಭಾಗವಹಿಸಿದ್ದ ಈ ಕಾರ್ಯಕ್ರಮವು ಹಲವು ಕ್ರಾಂತಿಗೀತೆಗಳೊಂದಿಗೆ ಮುಕ್ತಾಯಗೊಂಡಿತು.

ಇನ್ನೊಂದು ಜಾಥವನ್ನು ವಿಧುರಾಶ್ವಥದಲ್ಲಿ ಪಕ್ಷದ ಮುಖಂಡರು ಹಾಗೂ ಶಾಸಕರಾದ ಕಾಂ|| ಜಿ.ವಿ. ಶ್ರೀರಾಮರೆಡ್ಡಿಯವರು ಉದ್ಘಾಟಿಸಿದರು.




ರಾಜ್ಯಸಮ್ಮೇಳನದ ಸ್ವಾಗತ ಸಮಿತಿ ಮತ್ತು ವಿವಿಧ ಉಪ ಸಮಿತಿಗಳು

ಸ್ವಾಗತ ಸಮಿತಿ

ಅಧ್ಯಕ್ಷರು	:	ಜಿ.ವಿ.ಶ್ರೀರಾಮರೆಡ್ಡಿ
ಉಪಾಧ್ಯಕ್ಷರು	:	ಟಿ.ಎಸ್.ಮಣಿ
ಪ್ರಧಾನ ಕಾರ್ಯದರ್ಶಿ	:	ಜಿ.ಸಿ.ಬಯ್ಯಾರೆಡ್ಡಿ
ಕಾರ್ಯದರ್ಶಿ	:	ಸಿ.ಡಿ.ಗಂಗುಲಪ್ಪ
ಸಹ ಕಾರ್ಯದರ್ಶಿ	:	ಕೆ.ಎಂ.ವೆಂಕಟೇಶ್
ಖಜಾಂಚಿ	:	ಗಾಂಧಿನಗರ ನಾರಾಯಣ ಸ್ವಾಮಿ ಮತ್ತು ಉಳಿದ ಜಿಲ್ಲಾ ಸಮಿತಿ ಸದಸ್ಯರು

ವಿವಿಧ ಉಪ ಸಮಿತಿಗಳು

ಆರ್ಥಿಕ ಸಮಿತಿ	:	ಸ್ವಾಗತ ಸಮಿತಿಯ ಪದಾಧಿಕಾರಿಗಳು
ಪ್ರಚಾರ ಸಮಿತಿ	:	ಪಿ.ಶ್ರೀನಿವಾಸ್- ಸಂಚಾಲಕರು
ಸದಸ್ಯರು	:	ಪಿ.ಆರ್.ಸೂರ್ಯನಾರಾಯಣ, ಪಿ.ನಾಗಪ್ಪ, ಎರ.ಎಸ್.ಆನಂದ್, ಅಚ್ಯುತ, ಚೊಕ್ಕಲಿಂಗಂ, ಎ.ವಿ.ವೆಂಕಟರಾಂ ಕೆ.ಎಸ್.ನಾರಾಯಣ ಸ್ವಾಮಿ, ರಾಜು, ಇ.ವೆಂಕಟರಮಣಪ್ಪ
ಊಟ ಮತ್ತು ವಸತಿ ಸಮಿತಿ	:	ಬಿ.ಅರ್ಜುನ್ - ಸಂಚಾಲಕರು
ಸದಸ್ಯರು	:	ಜಿ.ವಿ.ಅಶ್ವತ್ಥನಾರಾಯಣ ರೆಡ್ಡಿ, ವೆಂಕಟಸ್ವಾಮಿ ರೆಡ್ಡಿ, ಎಂ.ವಿ.ನಾರಾಯಣ ಸ್ವಾಮಿ, ಮುರಳಿ, ವೆಂಕಟರಮಣ
ಸ್ವಯಂ ಸೇವಕರ ಸಮಿತಿ		ಪಿ.ಆರ್.ಸೂರ್ಯನಾರಾಯಣ-ಸಂಚಾಲಕರು
ಸದಸ್ಯರು	:	ಗಾಂಧಿ ನಾರಾಯಣ ಸ್ವಾಮಿ, ಸಿದ್ದಗಂಗಪ್ಪ, ಶ್ರೀನಿವಾಸ ಕರ್ಣ, ಹೋಳೂರು ಶಂಕರ್, ಭಾಸ್ಕರರೆಡ್ಡಿ, ಎ.ಆರ್.ಬಾಬು, ಮುನಿಕೃಷ್ಣಪ್ಪ, ಬಾಬು



ಸಿಪಿಐ(ಎಂ) ನ 16ನೇ ಕರ್ನಾಟಕ ರಾಜ್ಯ ಸಮ್ಮೇಳನದ ಸಿದ್ಧತೆಯಾಗಿ ಈಗ ಕೋಲಾರ ಜಿಲ್ಲಾದ್ಯಂತ ಸಂಚರಿಸುತ್ತಿರುವ ಜಾಥಾಗಳಲ್ಲಿ ಕೈವಾರದಿಂದ ಡಿಸೆಂಬರ್ ಒಂದರಂದು ಹೊರಟ ಎರಡು ಜಾಥಾಗಳ ದಾರಿ

ಕೋಲಾರ ತಾಲೂಕು ಸಮ್ಮೇಳನ

ಕೋಲಾರ: ಇತ್ತೀಚೆಗೆ ಕೋಲಾರ ತಾಲೂಕು ಸಿಪಿಐ(ಎಂ) ಪಕ್ಷದ ತಾಲೂಕು ಪ್ರಥಮ ಸಮ್ಮೇಳನ ಕೋಲಾರದಲ್ಲಿ ನಡೆಯಿತು. ಸಮ್ಮೇಳನದ ಉದ್ಘಾಟನೆಯನ್ನು ಜಿಲ್ಲಾ ಕಾರ್ಯದರ್ಶಿ ಕಾಂ. ಜಿ.ವಿ.ಶ್ರೀರಾಮರೆಡ್ಡಿ ನೆರವೇರಿಸಿದರು.

ಸಮ್ಮೇಳನವು ಹಲವಾರು ಸ್ಥಳೀಯ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸುವ ನಿರ್ಣಯಗಳನ್ನು ಕೈಗೊಂಡಿತು. ಗಾಂಧಿನಗರದ ನಾರಾಯಣ ಸ್ವಾಮಿ ಕಾರ್ಯದರ್ಶಿಯಾಗಿರುವ 8 ಜನರ ತಾಲೂಕು ಸಮಿತಿಯು ಆಯ್ಕೆಗೊಂಡಿತು. ಸಮಾರೋಪ ಸಮಾರಂಭದಲ್ಲಿ ಜಿ.ಸಿ.ಬಯ್ಯಾರೆಡ್ಡಿ ಹಾಗೂ ಶ್ರೀರಾಮರೆಡ್ಡಿ ಮಾತನಾಡಿದರು.

ಬಿಜಾಪುರ ತಾಲೂಕು ಸಮ್ಮೇಳನ

ಬಿಜಾಪುರ: ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲೂಕು ಸಮ್ಮೇಳನವು ನವೆಂಬರ್ 21 ರಂದು ಕಾಂ. ವಿ.ಎಮ್. ಸೊನ್ನದೆ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಶ್ರೀಧರ ಕುಲಕರ್ಣಿಯವರು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿದ್ದ ಜಿಲ್ಲಾ ಕಾರ್ಯದರ್ಶಿ ಭೀಮಶಿ ಕಲಾದಗಿ ಮಾತನಾಡಿ, ಜನತಾದಳ ಸರಕಾರ ವಿದ್ಯುತ್ ದರ, ಬಸ್ ದರ ಏರಿಸಿ ಜನ ಸಾಮಾನ್ಯರನ್ನು ಕಷ್ಟಕ್ಕೆ ಸಿಲುಕಿಸಿದೆ. ಎಂದ ಅವರು ಪಕ್ಷವು ಇಂತಹ ನೀತಿಗಳ ವಿರುದ್ಧ ಜನ ಜಾಗೃತಿಯಾಗುವಂತೆ ಕಾರ್ಯನಿರ್ವಹಿಸಬೇಕೆಂದು ಕರೆ ನೀಡಿದರು. ಸಮ್ಮೇಳನವು ನೀರಾವರಿ ಯೋಜನೆ, ಕುಡಿಯುವ ನೀರು, ಆಹಾರ ಧಾನ್ಯಗಳ ಕಡಿತ, ವಸತಿ ಸಮಸ್ಯೆ ಮುಂತಾದ ನಿರ್ಣಯಗಳನ್ನು ಕೈಗೊಂಡಿತು.

ನೂತನ ಸಮಿತಿಯ ಕಾರ್ಯದರ್ಶಿಯಾಗಿ ಕಾಂ. ಸುರೇಖಾ ರಜಪೂತ ಆಯ್ಕೆಯಾದರು

ಬಸವನ ಬಾಗೇವಾಡಿ: ತಾಲೂಕು ಸಮ್ಮೇಳನ

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ಸಿಪಿಐ(ಎಂ) ಪಕ್ಷದ ತಾಲೂಕು ಸಮ್ಮೇಳನವು ನವೆಂಬರ್ 21 ರಂದು ನಬಿಸಾಬ ದವಳಗಿ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಕಾರ್ಯದರ್ಶಿಯಾಗಿ ತಿಪ್ಪಣ್ಣ ಗುಡಿಮನಿ, ರಾಮಚಂದ್ರ ಕೊಡಗಿ, ದುಂಡಪ್ಪಗರಸಂಗಿ, ಶಂಕರ ಗೌಡ, ಮುತ್ತಪ್ಪ, ಚಲವಾದಿ, ಭೀಮಪ್ಪ ಬಾಗೇವಾಡಿ ಸದಸ್ಯರಾಗಿ ಆಯ್ಕೆಯಾದರು.

ಆಲಮಟ್ಟಿ ಅಣೆಕಟ್ಟೆ, ಕೃಷ್ಣಾ ಎಡದಂಡೆ, ಮುಳವಾಡ ಏತ ನೀರಾವರಿ ಯೋಜನೆಗಳನ್ನು ಇನ್ನು 2 ವರ್ಷಗಳಲ್ಲಿ ಪೂರ್ಣಗೊಳಿಸಬೇಕೆಂದು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯ್ತು.

ಕಮಲಾಪೂರ ವಲಯ ಸಮ್ಮೇಳನ

ಸಿ.ಪಿ.ಐ.(ಎಂ) ಪಕ್ಷದ ಕಮಲಾಪೂರ ವಲಯದ ಮೊದಲನೇ ಸಮ್ಮೇಳನವು ಮಹಾಗಾಂವದಲ್ಲಿ ನವೆಂಬರ್ ೧೦ ರಂದು ನಡೆಯಿತು. ಪ್ರಾರಂಭದಲ್ಲಿ ಕಾಂ|| ಅಂಬಾರಾಯ ಗುತ್ತೇದಾರ ಧ್ವಜಾ ರೋಹಣ ಮಾಡಿದರು. ನಂತರ ಕಾಂ|| ಮೆಹತಾಬ ಸಾಬ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರತಿ ನಿಧಿಗಳ ಸಭೆಯಲ್ಲಿ ರಾಜಕೀಯ, ಸಾಮಾಜಿಕ ಪರಿಸ್ಥಿತಿಯನ್ನು ಚರ್ಚಿಸಿ ಲಾಯಿತು.

ಸಮ್ಮೇಳನದಂಗವಾಗಿ ನಡೆದ ಬಹಿ ರಂಗ ಸಭೆಯನ್ನುದ್ದೇಶಿ ಜಿಲ್ಲಾ ಕಾರ್ಯ ದರ್ಶಿ ಮಾರುತಿ ಮಾನ್ಪಡೆಯವರು ಮಾತ ನಾಡುತ್ತಾ ಉತ್ತರ ಪ್ರದೇಶದಲ್ಲಿ ಅಧಿಕಾರ ದಾಹಕ್ಕಾಗಿ ಬಿ.ಜೆ.ಪಿ. ಇತರ ಶಾಸಕರನ್ನೂ ಖರೀದಿಸಿ ಆಡಳಿತ ನಡೆಸುತ್ತಿದೆ. ಅದು ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧವೆಂಬುದನ್ನು ತೋರಿಸಿ ಕೊಟ್ಟಿದೆ. ಅಲ್ಲದೇ ಕೇಂದ್ರದಲ್ಲಿಯೂ ಇದೇ ನೀತಿ ಅನುಸರಿಸಲು ಮುಂದಾಗಿರುವುದನ್ನು ಸಂಯುಕ್ತರಂಗ ತಡೆಗಟ್ಟಿ ಬಿ.ಜೆ.ಪಿ. ಕೋಮುವಾದಿತನವನ್ನು ಬಯಲಿಗೆಳೆಯ ಬೇಕೆಂದು ತಿಳಿಸಿದರು.

ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ|| ವಿರುಪಾಕ್ಷಪ್ಪ ತಡಕಲ್ ಮಾತನಾಡುತ್ತಾ ಕಮಾಲಾಪೂರ ಶಾಸಕರ ಭ್ರಷ್ಟತೆಯನ್ನು ಖಂಡಿಸುತ್ತಾ, ಪಕ್ಷದ ಸದಸ್ಯರು ಜನತೆಯ ಸಮಸ್ಯೆಗಳಿಗೆ ಸ್ಪಂದಿಸಿ, ಸಿ.ಪಿ.ಐ(ಎಂ) ವಿಚಾರಧಾರೆಗಳನ್ನು ತಿಳಿಸಿ ಸಂಘಟಿತ ಹೋರಾಟ ಮಾಡಲು ಮುಂದಾಗ ಬೇಕೆಂದು ಕರೆ ಕೊಟ್ಟರು.

ಸಮ್ಮೇಳನದಲ್ಲಿ ಗಂಡೋರಿ ನಾಲಾ ಕಾಮಗಾರಿಯನ್ನು ಎರಡು ಸಾವಿರ ಇಸ್ವಿಯೊಳಗೆ ಪೂರ್ಣಗೊಳಿಸಬೇಕು. ಮುಳುಗಡೆ ಪ್ರದೇಶದ ಪುನರ್ ಸರ್ವೆ ಮಾಡಿ ಹೆಚ್ಚಿನ ಹಣ ಬಿಡುಗಡೆ ಮಾಡಬೇಕು. ಐ.ಆರ್.ಡಿ.ಪಿ. ಆಶ್ರಯ, ಅಂಬೇಡ್ಕರ ಯೋಜನೆಗಳನ್ನು ಗ್ರಾಮ ಸಭೆ ಮೂಲಕವೇ ಅರ್ಹ ಫಲಾನುಭವಿಗಳಿಗೆ ಹಂಚಬೇಕು ಎಂಬ ನಿರ್ಣಯ ಗಳನ್ನು ಅಂಗೀಕರಿಸಿತು.

ಕಾರ್ಯದರ್ಶಿನ್ನಾಗಿ ವಿರುಪಾಕ್ಷಪ್ಪ ತಡಕಲ್ ಇವರನ್ನು ಕಮಾಲಪೂರ ವಲಯ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು.



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಹೊಸ ಸುಧಾರಣೆಗಳನ್ನು ಆರಂಭಿಸಲು ಸರ್ ಜಾನ್ ಸೈಮನ್ ನೇತೃತ್ವದಲ್ಲಿ ಒಂದು ಆಯೋಗ ಭಾರತಕ್ಕೆ ಬರುವುದಾಗಿ ಬ್ರಿಟೀಷ್ ಸರಕಾರ ಪ್ರಕಟಿಸಿತು. ಬಿಳಿಯ ಸದಸ್ಯರೇ ಇದ್ದ ಈ ಆಯೋಗವನ್ನು ಬಹಿಷ್ಕರಿಸಲು ಕಾಂಗ್ರೆಸ್ಸಿನ ಡಿಸೆಂಬರ್ 27 ರ ಮದ್ರಾಸ್ ಅಧಿವೇಶನ ಕರೆ ನೀಡಿತು. ದೇಶಾದ್ಯಂತ ಜನಗಳ ಅಸಂತೃಪ್ತಿ "ಗೋ ಬ್ಯಾಕ್ ಸೈಮನ್" (ಸೈಮನ್ ಹಿಂದಿರುಗು) ಎಂಬ ಘೋಷಣೆಯ ಮೂಲಕ ವ್ಯಕ್ತಗೊಂಡಿತ್ತು. ಈ ಆಯೋಗ ಹೋದಲ್ಲೆಲ್ಲಾ ಕಪ್ಪು ಬಾವುಟ ಪ್ರದರ್ಶನ ಇತ್ಯಾದಿಗಳು ನಡೆದವು.



ಪೋಲೀಸರು ಅಷ್ಟೇ ಕ್ರೂರವಾಗಿ ಅದನ್ನು ದಮನ ಮಾಡಲು ಯತ್ನಿಸಿದರು. ಮುಖಂಡರನ್ನೂ ಅವರು ಬಿಡಲಿಲ್ಲ. ಲಕ್ನೋನಲ್ಲಿ ಜವಹರಲಾಲ್ ನೆಹರೂ, ಗೋವಿಂದ ವಲ್ಲಭ ಪಂತ್ ಗಾಯಗೊಂಡರು. ಲಾಹೋರಿನಲ್ಲಿ ಲಾಲಾ ಲಜಪತ್ ರಾಯ್ ರವರಿಗೆ ಮರಣಾಂತಿಕ ಗಾಯಗಳಾದವು. ನಂತರ ಅವರು ನಿಧನರಾದರು. ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂಬ ಒತ್ತಾಯವನ್ನು ಬ್ರಿಟಿಷ್ ಆಳರಸರು ತಳ್ಳಿಹಾಕಿದರು. ಒಂದು ತಿಂಗಳ ನಂತರ ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ದಮನ ನಡೆಸಿದ ಪೋಲೀಸ್ ಅಧಿಕಾರಿ ಸಾಂಡರ್ಸ್‌ನನ್ನು ಹಾಡುಹಗಲೇ ಕೊಂದುಹಾಕಿದರು.

1928 ರ ಮಧ್ಯಭಾಗದಲ್ಲಿ ಗುಜರಾತ್‌ನ ಬಾರ್ಡೋಲಿಯಲ್ಲಿ ಮಧ್ಯಮ ಮತ್ತು ಸಿರಿವಂತ ರೈತರು ಭೂಕಂದಾಯವನ್ನು ಆಗಾಗ್ಗೆ 25% ರಷ್ಟು ಹೆಚ್ಚಿಸಿರುವುದನ್ನು ಪ್ರತಿಭಟಿಸಿದರು. ಇದನ್ನು ಪೋಲೀಸರು ದಮನ ಮಾಡಲು ಯತ್ನಿಸಿದಾಗ ವಲ್ಲಭಭಾಯಿ ಪಟೇಲ್ ನೇತೃತ್ವದ ಈ ಆಂದೋಲನ ಸಾಮೂಹಿಕ ರೂಪ ತಳೆಯಿತು. ಹೆಚ್ಚಳವನ್ನು 6% ಕ್ಕೆ ಇಳಿಸಬೇಕಾಗಿ ಬಂತು.

ಏಪ್ರಿಲ್ 1928 ರಲ್ಲಿ ಮುಂಬೈಯ ಗಿರಣಿ ಕಾರ್ಮಿಕರು ತಮ್ಮ ಕೆಲಸದ ವೇಳೆ ಹೆಚ್ಚಿಸಿ ಸಾಕಷ್ಟು ಸಂಖ್ಯೆಯ ಕಾರ್ಮಿಕರನ್ನು ರಿಟ್ರೆಂಚ್‌ಮೆಂಟ್ ಮಾಡುವ ಮಾಲಕರ ಪ್ರಯತ್ನದ ವಿರುದ್ಧ ಮುಷ್ಕರ ನಡೆಸಿದರು. ಪೋಲೀಸರು ಪ್ರತಿಭಟನಾ ಮೆರವಣಿಗೆಯ ಮೇಲೆ ಗೋಲಿಬಾರು ನಡೆಸಿದರು. ಪರಶುರಾಮ್ ಜಾಧವ್ ಎಂಬ ವೀರ ಕಾರ್ಮಿಕ ಹುತಾತ್ಮನಾದ. ಇದರಿಂದ ರೊಚ್ಚಿಗೆದ್ದು ಅದುವರೆಗೆ ಮುಷ್ಕರದಲ್ಲಿ ಭಾಗವಹಿಸದಿದ್ದ ಗಿರಣಿ ಕಾರ್ಮಿಕರೂ ಮುಷ್ಕರದಲ್ಲಿ ಸೇರಿಕೊಂಡರು.



ಮಹಿಳಾ ಗಿರಣಿ ಕಾರ್ಮಿಕರ ಪಿಕೆಟಿಂಗ್

ಭಾರತೀಯ ಕಾರ್ಮಿಕ ಆಂದೋಲನದ ಇತಿಹಾಸದಲ್ಲೇ ಮೊದಲ ಬಾರಿಗೆ ಒಂದು ಕೇಂದ್ರ ಮುಷ್ಕರ ಸಮಿತಿ ರಚಿಸಿಕೊಂಡು ಸಾರ್ವತ್ರಿಕ ಮುಷ್ಕರ ನಡೆಸಿದರು. ಇದಕ್ಕೆ ಡಾಂಗೆ, ಘಾಟೆ, ಜೋಗಳೇಕರ್, ಮಿರಜ್ ಕರ್‌ರಂತಹ ಭಾರತೀಯ ಕಮ್ಯುನಿಸ್ಟ್ ಮುಖಂಡರು ಮಾತ್ರವಲ್ಲ, ಬ್ರಿಟಿಷ್ ಕಮ್ಯುನಿಸ್ಟ್ ಬೆಂಜಮಿನ್ ಬ್ರಾಡ್ಲೆ ಕೂಡಾ ನೇತೃತ್ವ ನೀಡಿದರು. ಸೋವಿಯತ್ ಒಕ್ಕೂಟದ ಗಿರಣಿ ಕಾರ್ಮಿಕರು ಸೌಹಾರ್ದ ಕೊಡುಗೆ ಕಳಿಸಿದರು. ಸರೋಜಿನಿ ನಾಯ್ಡು, ವಲ್ಲಭಭಾಯಿ ಪಟೇಲ್‌ರಂತಹ ಕಾಂಗ್ರೆಸ್ ಮುಖಂಡರೂ ನೆರವು ನೀಡಿದರು.

ಆ ವರ್ಷದ ಕೊನೆಯಲ್ಲಿ ಕಲ್ಕತ್ತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕಾರ್ಮಿಕರು ಭಾರತೀಯ ರಾಜಕಾರಣದಲ್ಲಿ ಒಂದು ಹೊಸ ಶಕ್ತಿಯಾಗಿ ಮೂಡಿ ಬರುತ್ತಿದ್ದುದು ಸ್ಪಷ್ಟವಾಯಿತು. ಹಿಂದಿನ ವರ್ಷದ ಮದ್ರಾಸ್ ಅಧಿವೇಶನದಲ್ಲಿ ಗಾಂಧೀಜಿಯ ಗೈರು ಹಾಜರಿಯಲ್ಲಿ ಆಗಷ್ಟೇ ಸಾಮ್ರಾಜ್ಯಶಾಹಿ-ವಿರೋಧಿ ಅಂತರಾಷ್ಟ್ರೀಯ ಸಮ್ಮೇಳನದಿಂದ ಹಿಂದಿರುಗಿದ ಜವಹರಲಾಲ ನೆಹರೂ ರವರು ಮಂಡಿಸಿದ ಕಮ್ಯುನಿಸ್ಟರು ಬೆಂಬಲಿಸಿದ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯ ಅಂಗೀಕಾರವಾಗಿತ್ತು. ಆದರೆ ಗಾಂಧೀಜಿ ಇದೊಂದು ಅವಿವೇಕದ, ಅಪಕ್ವ ನಿರ್ಣಯ ಎಂದರು. ರಾಷ್ಟ್ರೀಯ ಆಂದೋಲನದ ಗುರಿಯೇನು ?- ಬ್ರಿಟೀಷ್ ಚಕ್ರಾಧಿಪತ್ಯದೊಳಗಿನ ಅಧೀನ ಸ್ಥಾನಮಾನವೋ ಅಥವಾ ಸಂಪೂರ್ಣ ಸ್ವಾತಂತ್ರ್ಯವೋ ? ಎಂಬ ಪ್ರಶ್ನೆ ಕಲ್ಕತ್ತಾ ಅಧಿವೇಶನದಲ್ಲಿ ಬಂತು. ಗಾಂಧೀಜಿ ಮತ್ತು ಅವರ ಬೆಂಬಲಿಗರು 'ಒಂದು ವರ್ಷದೊಳಗೆ ಅಧೀನ ಸ್ಥಾನಮಾನ'- ಎಂಬ ಬೇಡಿಕೆಯ ನಿರ್ಣಯವನ್ನು ತಂದು ಬಹುಮತದಿಂದ ಗೆದ್ದರು. ಆದರೆ ಸುಭಾಷ್ ಚಂದ್ರ ಬೋಸ್, ಜವಹರಲಾಲ್ ನೆಹರೂ, ಕಮ್ಯುನಿಸ್ಟರು ಸಶಸ್ತ್ರ ಕ್ರಾಂತಿಕಾರಿಗಳು ಇದನ್ನು ವಿರೋಧಿಸಿ ಸಂಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಗುರಿಯಾಗಬೇಕು ಎಂದರು.

ಡಿಸೆಂಬರ್ 30, 1928 ರಂದು ಎರಡು ಮೈಲಿ ಉದ್ದದ ಸುಮಾರು 50,000 ಕಾರ್ಮಿಕರ ಒಂದು ಶಿಸ್ತಿನ ಬೃಹತ್ ಮೆರವಣಿಗೆ ಕಾಂಗ್ರೆಸ್ ಅಧಿವೇಶನ ನಡೆಯುತ್ತಿದ್ದ ಪಾರ್ಕ್ ಸರ್ಕಾಸ್‌ಗೆ ಬಂತು. ಸಾವಿರಾರು ಕಾರ್ಮಿಕರು, ಟ್ರಾಮ್‌ವೇ ಕಾರ್ಮಿಕರು, ರೈಲ್ವೇ ಕಾರ್ಮಿಕರು ಮತ್ತು ಬಂದರು ಕಾರ್ಮಿಕರ ಸಂಘಟನೆಗಳು ಇದನ್ನು ಸಂಘಟಿಸಿದ್ದವು. "ಜಗತ್ತಿನ ಕಾರ್ಮಿಕರೇ ಒಂದಾಗಿ", "ಸ್ವತಂತ್ರ ಭಾರತೀಯ ಗಣತಂತ್ರ ಚಿರಾಯುವಾಗಲಿ", "ಕಾರ್ಮಿಕ ಕಳೆದುಕೊಳ್ಳುತ್ತಿರುವುದು ಸಂಕೋಲೆಗಳನ್ನು ಮಾತ್ರ" ಎಂಬಿತ್ಯಾದಿ ಘೋಷಣೆ ಕೂಗುತ್ತಿದ್ದ ಕಾರ್ಮಿಕರು ಕಾಂಗ್ರೆಸ್ ಅಧಿವೇಶನದ ಪೆಂಡಾಲ್ ಪ್ರವೇಶಿಸಲು ಮುಂದಾದಾಗ ಕಾಂಗ್ರೆಸ್ ಸ್ವಯಂಸೇವಕರು ಅವರನ್ನು ತಡೆದರು. ಆಗ ಅಧಿವೇಶನದ ಅಧ್ಯಕ್ಷರಾಗಿದ್ದ ಮೋತೀಲಾಲ್ ನೆಹರೂ ಮಧ್ಯಪ್ರವೇಶಿಸಿದ್ದರಿಂದ ಕಾರ್ಮಿಕರಿಗೆ ಪ್ರವೇಶ ನೀಡಲಾಯಿತು. ಅಲ್ಲಿಯೇ ಸಾಮೂಹಿಕ ಸಭೆ ನಡೆಯಿತು. ಜವಾಹರಲಾಲ್ ನೆಹರೂ ಇದರ ಅಧ್ಯಕ್ಷತೆ ವಹಿಸಿದ್ದರು. ಧರಣಿ ಗೋಸ್ವಾಮಿ ಮಂಡಿಸಿದ ನಿರ್ಣಯವನ್ನು ಜೋಗಳೇಕರ್ ಅನುಮೋದಿಸಿದರು. ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಆ ನಿರ್ಣಯದ ಒಕ್ಕಣಿಕೆ ಹೀಗಿತ್ತು-



"ರೈತರು ಮತ್ತು ಕಾರ್ಮಿಕರ ಈ ಸಭೆ ಘೋಷಿಸುವುದೇನೆಂದರೆ ಈ ದೇಶದ ರೈತರು ಮತ್ತು ಕಾರ್ಮಿಕರು ದೇಶ ಸ್ವತಂತ್ರವಾಗಿ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಶೋಷಣೆಗಳನ್ನೆಲ್ಲಾ ಕೊನೆಗೊಳಿಸುವವರೆಗೂ ನಮ್ಮ ಆಂದೋಲನ ನಿಲ್ಲದು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಈ ಗುರಿಯನ್ನು ಅಂಗೀಕರಿಸಿ ಎಲ್ಲಾ ರಾಷ್ಟ್ರೀಯವಾದಿ ಸಂಘಟನೆಗಳನ್ನು ಬಲಪಡಿಸಬೇಕು ಎಂಬ ಕರೆ ನೀಡುತ್ತೇವೆ".

ಇದಕ್ಕೆ ಕೆಲವು ದಿನಗಳ ಹಿಂದೆ ಅದೇ ನಗರದಲ್ಲಿ ನಡೆದಿದ್ದ **ಅಖಿಲ ಭಾರತ ಕಾರ್ಮಿಕರು ಮತ್ತು ರೈತರ ಪಕ್ಷದ** ಸಮ್ಮೇಳನ ಕೂಡಾ ಸಂಪೂರ್ಣ ಸ್ವಾತಂತ್ರ್ಯದ ಗುರಿಯನ್ನು ಅಂಗೀಕರಿಸಲು ನಿರ್ಧರಿಸಿತ್ತು. ಆದರೆ ಆ ವರ್ಷ ಕಾಂಗ್ರೆಸ್ ಈ ಗುರಿಯನ್ನು ಅಂಗೀಕರಿಸಲಿಲ್ಲ.

ಕಾರ್ಮಿಕ ವರ್ಗದ ಸಕ್ರಿಯ ಪಾತ್ರ ಅದಕ್ಕೆ ಕಮ್ಯುನಿಸ್ಟರ ನೇತೃತ್ವ ಕಂಡು ಬ್ರಿಟೀಷರಿಗೆ ಆತಂಕ ಉಂಟಾಗಿತ್ತು ಎಂಬುದು ಜನವರಿ 1929 ರಲ್ಲಿ ಆಗಿನ ವೈಸರಾಯ್ ಲಾರ್ಡ್ ಇರ್ವಿನ್ ಕೇಂದ್ರೀಯ ಅಸೆಂಬ್ಲಿಯಲ್ಲಿ ಮಾಡಿದ ಭಾಷಣದಿಂದ ಸ್ಪಷ್ಟವಾಗಿತ್ತು. ಕೆಲವಾರಗಳ ನಂತರ ದೇಶಾದ್ಯಂತ ಪೋಲೀಸ್ ಧಾಳಿಗಳ ಪರಿಣಾಮವಾಗಿ 3 ಕಮ್ಯುನಿಷ್ಟರನ್ನು ಹಾಗೂ ಕಾರ್ಮಿಕವರ್ಗದ ಎಡಪಂಥೀಯ ಮುಖಂಡರನ್ನು ಬಂಧಿಸಿ ಚಾರಿತ್ರಿಕ ಮೀರತ್ ಪಿತೂರಿ ಮೊಕದ್ದಮೆಯನ್ನು ಆರಂಭಿಸಲಾಯಿತು. ಪ್ರಧಾನ ಸರ್ಕಾರೀ ವಕೀಲ ತನ್ನ ಆರಂಭದ ಭಾಷಣದಲ್ಲೇ "ಕಮ್ಯುನಿಷ್ಟರು ಧರ್ಮ ವಿರೋಧಿಗಳು, ರಾಷ್ಟ್ರ-ವಿರೋಧಿಗಳು, ನಾಗರೀಕ ಸಮಾಜದಲ್ಲಿರುವ ಪ್ರತಿಯೊಂದರ ವಿರೋಧಿಗಳು ಎಂದು ನಾನು ಸಾಬೀತು ಮಾಡುತ್ತೇನೆ" ಎಂದು ಸಾರಿದ. ಕಮ್ಯುನಿಸ್ಟರು ಮತ್ತು ಇತರ ರಾಷ್ಟ್ರೀಯವಾದಿಗಳ ನಡುವೆ ವಿರಸ ತರುವುದು ಬ್ರಿಟಿಷರ ಉದ್ದೇಶವಾಗಿತ್ತು. ಆದರೆ ತದ್ವಿರುದ್ಧ ಪರಿಣಾಮವಾಯಿತು. ಮೀರತ್ ಆಪಾದಿತರಿಗೆ ಬೆಂಬಲವಾಗಿ ದೇಶ ಮತ್ತು ವಿದೇಶಗಳಲ್ಲಿ ದೊಡ್ಡ ಆಂದೋಲನ ಬೆಳೆಯಿತು. ಕಮ್ಯುನಿಷ್ಟ ಆಪಾದಿತರು ವಿಚಾರಣೆಗಳನ್ನು ಸಾಮ್ರಾಜ್ಯಶಾಹಿ ಶೋಷಣೆಯ ಸ್ವರೂಪವನ್ನು ಬಚ್ಚಿಡಲು, ತಮ್ಮ ಜನಪ್ರಿಯ ಕ್ರಾಂತಿಯ ಕಣ್ಣೋಟವನ್ನು ದೇಶದ ಮುಂದಿಡಲು ಬಳಸಿಕೊಂಡರು.

'ಬಂದ್' ಬಗ್ಗೆ ಸುಪ್ರಿಂ ಕೋರ್ಟಿನ ತೀರ್ಪು

ಬಂಡವಾಳಶಾಹಿ ಪದ್ಧತಿಯ ಮೂಲಭೂತ ನ್ಯೂನತೆಗಳ ಪ್ರತಿಫಲನ

ಸಿಐಟಿಯು ಕಾರ್ಯದರ್ಶಿ ಪಿ.ಕೆ.ಗಂಗೂಲಿ ಇತ್ತೀಚೆಗೆ ಅಂದರೆ ನವಂಬರ್ 12 ರಂದು ಬಂದ್‌ಗಳು ಕಾನೂನು ಬಾಹಿರ ಹಾಗೂ ಸಂವಿಧಾನ ಬಾಹಿರ ಎಂದು ಸುಪ್ರೀಂ ಕೋರ್ಟ್ ಘೋಷಿಸಿರುವುದರ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಜುಲೈ 28, 1997 ರಂದು ಕೇರಳ ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿ ಸುಪ್ರಿಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ಮೇಲೆ ತೀರ್ಪು ನೀಡುತ್ತಾ, ಕೇರಳ ಹೈಕೋರ್ಟ್‌ನ ತೀರ್ಪನ್ನು ಎತ್ತಿಹಿಡಿಯುತ್ತಾ ಸುಪ್ರಿಂ ಕೋರ್ಟ್ ಹೀಗೆ ಹೇಳಿತ್ತು.

ಸಹಜವಾಗಿ ಕಾರ್ಮಿಕ ಸಂಘಗಳು, ಜನರ ಪ್ರಶ್ನೆಗಳನ್ನೆತ್ತಿಕೊಳ್ಳುವ ರಾಜಕೀಯ ಪಕ್ಷಗಳು ಹಾಗೂ ಕೆಲವು ನಿವೃತ್ತ ಹೈಕೋರ್ಟ್ ನ್ಯಾಯಧೀಶರುಗಳು ಕೂಡಾ ಈ ತೀರ್ಪಿನ ಬಗ್ಗೆ ಉದ್ವಿಗ್ನತೆಯನ್ನು ವ್ಯಕ್ತಪಡಿಸಿದ್ದಾರೆ. ಮಾಲಕರ ಸಂಸ್ಥೆಗಳು ಬಂಡವಾಳಶಾಹಿ ಪತ್ರಿಕೆಗಳ ಸಂಪಾದಕೀಯಗಳು ಇದನ್ನು ಸ್ವಾಗತಿಸಿವೆ. ಬಿಜೆಪಿ ಕೂಡಾ ತನ್ನ ಬಲಪಂಥೀಯ ವರ್ಗಗುಣಕ್ಕೆ ಅನುಗುಣವಾಗಿ ಇದನ್ನು ಸ್ವಾಗತಿಸಿವೆ. ಆದರೆ ಜನಸಾಮಾನ್ಯರ ಹಾಗೂ ಕಾರ್ಮಿಕ ವರ್ಗದ ಪ್ರಜಾಪ್ರಭುತ್ವ ಆಂದೋಲನದ ವಿರುದ್ಧ ಪಕ್ಷಪಾತ ತೋರಿರುವ ಈ ಪ್ರತಿಗಾಮಿ ತೀರ್ಪಿನಲ್ಲೇ ವೈರುಧ್ಯ ಅಡಕವಾಗಿದೆ ಎಂದು ಪಿ.ಕೆ.ಗಂಗೂಲಿ ಯವರು ಗಮನ ಸೆಳೆದಿದ್ದಾರೆ.

ಹಾಸ್ಯಾಸ್ಪದ ತರ್ಕ

ಬಂದ್ ಮತ್ತು ಹರತಾಳ ಅಂದರೆ ಸಾರ್ವತ್ರಿಕ ಮುಷ್ಕರದ ನಡುವೆ ವ್ಯತ್ಯಾಸ ಕಾಣಲು ಕೇರಳ ಹೈಕೋರ್ಟ್‌ನ ತೀರ್ಪು ಪ್ರಯತ್ನಿಸಿತ್ತು. ಸುಪ್ರಿಂ ಕೋರ್ಟ್ ಅದನ್ನು ಎತ್ತಿ ಹಿಡಿದಿದೆ.

ಆದರೆ ಅದು ಕಾಣುವ ವ್ಯತ್ಯಾಸ ಹಾಸ್ಯಾಸ್ಪದ ಹಾಗೂ ತರ್ಕಹೀನ ಎನ್ನುತ್ತಾರೆ ಪಿ.ಕೆ.ಗಂಗೂಲಿಯವರು. ಸಾರ್ವತ್ರಿಕ ಮುಷ್ಕರಗಳ ಮೇಲೆ ಸಾರಾಸಗಟು ನಿಷೇಧ ಹಾಕುವ ಧೈರ್ಯ ಸಾಲದ ಸುಪ್ರಿಂಕೋರ್ಟ್ ಈ ರೀತಿಯ ವ್ಯತ್ಯಾಸವನ್ನು ಕಂಡಿದೆ. ಏಕೆಂದರೆ ಸಾರ್ವತ್ರಿಕ ಮುಷ್ಕರ ವಿಶ್ವಾದ್ಯಂತ ಕಂಡುಬರುವ ವಿದ್ಯಮಾನ. ಅದನ್ನು ದೇಶದ ನ್ಯಾಯಾಲಯ ನಿಷೇಧಿಸಿದ್ದರೆ ಬರಬಹುದಾಗಿದ್ದ ಪ್ರತಿಕ್ರಿಯೆ ಏನೆಂದು ತಿಳಿದಿರುವ ಸುಪ್ರೀಂಕೋರ್ಟ್ ಹಾಗೆ ಮಾಡಲಿಲ್ಲ. ಆದರೆ ಬಂದ್‌ಗಳನ್ನು ನಿಷೇಧಿಸಿದ್ದು ಸಾರ್ವತ್ರಿಕ ಹರತಾಳವನ್ನು ನಿಷೇಧಿಸಿದಂತಾಗಿದೆ ಎಂದು ಪಿ.ಕೆ.ಗಂಗೂಲಿ ಸುಪ್ರಿಂಕೋರ್ಟಿನ ತೀರ್ಪಿನ ಹಿಂದಿರುವ ವೈರುಧ್ಯವನ್ನು ಬಯಲಿಗೆಳೆದಿದ್ದಾರೆ. ಬಂದ್ ಮತ್ತು ಹರತಾಳ ಎರಡೂ ಹಿಂದೀ - ಮೂಲದ ಪದಗಳು. ಎರಡರ ಅರ್ಥವೂ ಸಾರ್ವತ್ರಿಕ ಮುಷ್ಕರ ಎಂದೇ ಆಗುತ್ತದೆ. ಇವುಗಳ ಅರ್ಥ ಹುಡುಕಲು ಇಂಗ್ಲೀಷ್‌ನ ಆಕ್ಸ್‌ಫರ್ಡ್, ಚೇಂಬರ್ಸ್ ಡಿಕ್ಷನರಿಗಳಲ್ಲಿ ತಡಕಾಡುವ ಅಗತ್ಯವಿಲ್ಲ. ಇವುಗಳಲ್ಲಿ ಬಲವಂತಕ್ಕೆ ಎಡಮಾಡಿ ಕೊಡುತ್ತದೆ ಎನ್ನುವುದು ಆಳುವ ವರ್ಗಗಳ ಯೋಚನೆಯಿಂದ ಬಂದಿರುವ ಟೊಳ್ಳು ಅಭಿಪ್ರಾಯ ಎಂದು ಕಾಂ. ಗಂಗೂಲಿ ವಾದಿಸುತ್ತಾರೆ. ಈ ಮಾನ್ಯ ನ್ಯಾಯಾಧೀಶರುಗಳು ಹೋರಾಟದ ಇನ್ನೊಂದು ಸಾಮಾನ್ಯವಾಗಿ ಬಳಸುವ ವಿಧಾನವಾದ 'ಪಿಕೆಟಿಂಗ್'ನತ್ತ ಕೆಂಗಣ್ಣು ಹಾಕದಿರುವುದಕ್ಕೆ ಕಾರ್ಮಿಕ ವರ್ಗ ಅವರಿಗೆ ಕೃತಜ್ಞವಾಗಿರಬೇಕು ಎಂದು ಅವರು ವ್ಯಂಗ್ಯವಾಡಿದ್ದಾರೆ. ಪಿಕೆಟಿಂಗ್‌ನ ಅರ್ಥ ಮುಷ್ಕರಗಳ ಸಮಯದಲ್ಲಿ ಕೆಲಸಗಾರರು ಕೆಲಸ ಮಾಡದಂತೆ ಆಗ್ರಹ ಪಡಿಸುವುದೆಂದರ್ಥ ತಾನೆ?

ಆಳ ಚಿಂತನೆಯೇಕಿಲ್ಲ ?

ಹೀಗೆ ಬಂದ್‌ಗಳನ್ನು ಬಂದ್ ಮಾಡಬೇಕೆಂದು ಸುಪ್ರಿಂ ಕೋರ್ಟ್ ಸಾರಲು ನೀಡಿರುವ ಸಮರ್ಥನೆಯೇನು ? ಬಂದ್ ವೇಳೆಯಲ್ಲಿ ಹಿಂಸಾಚಾರ ನಡೆಯುತ್ತದೆ, ರಾಷ್ಟ್ರೀಯ ಆಸ್ತಿಗಳ ನಾಶವಾಗುತ್ತದೆ. ಇತರ 'ಮೂಲಭೂತ ಹಕ್ಕುಗಳ'ನ್ನು ಮೊಟಕುಗೊಳಿಸಲಾಗುತ್ತದೆ ಇತ್ಯಾದಿ. ನ್ಯಾಯಾಧೀಶರಿಗೆ ಇಂತಹ ಮೇಲುಮೇಲಿನ ಮಾತುಗಳು ತಕ್ಕುದಲ್ಲ ಎನ್ನುತ್ತಾರೆ ಪಿ.ಕೆ.ಗಂಗೂಲಿಯವರು. ಕೆಲವು ಸಂಘಟನೆಗಳು ತಮ್ಮ ಸಂಕುಚಿತ ಸ್ವಾರ್ಥಗಳ ಈಡೇರಿಕೆಗ 'ಬಂದ್'ನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಹೀಗೆ ಸಾರ್ವತ್ರೀಕರಿಸುವುದು ಸರಿಯಲ್ಲ. ಬಂದ್ ವೇಳೆ ಹಿಂಸಾಚಾರಗಳು ನಡೆದರೆ ಅವು ಸಾಮಾನ್ಯವಾಗಿ ಏಕೆ ನಡೆಯುತ್ತವೆ, ಹಿಂಸಾಚಾರ ನಡೆಸುವವರಾರು ಎಂಬ ಬಗ್ಗೆ ನ್ಯಾಯಾಧೀಶರು ಆಳವಾದ ಚಿಂತನೆ ಮಾಡಬೇಕಿತ್ತು. ಸಾಮಾನ್ಯವಾಗಿ ಕಾರ್ಮಿಕ ಸಂಘಗಳ ಹಾಗೂ ಎಡ ಪಕ್ಷಗಳ ಅನುಭವವೆಂದರೆ ಇಂತಹ ಹಿಂಸಾಚಾರಗಳು ಬಂದ್‌ನ್ನು ವಿಫಲಗೊಳಿಸಲು ಮಾಲಕರು, ಆಳುವ ವರ್ಗಗಳು ಬಾಡಿಗೆ ಗೂಂಡಾಗಳಿಂದ ಮಾಡಿಸುವ ಕುಕೃತ್ಯಗಳು. 'ವಾಸ್ತವತೆ'ಗಳ ಮಾತನಾಡುವ ಮಾನ್ಯ ನ್ಯಾಯಾಧೀಶರುಗಳು ಈ 'ವಾಸ್ತವತೆ'ಯನ್ನೇಕೆ ಉಪೇಕ್ಷಿಸುತ್ತಾರೆ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಬಂದ್ ನಡೆಸಲು ಕರೆ ನೀಡುವ ಕಾರ್ಮಿಕ ಸಂಘಗಳಾಗಲಿ, ಎಡ ರಾಜಕೀಯ ಪಕ್ಷಗಳಾಗಲೀ ಅದರ ಮೊದಲು ಈ ಬಂದ್ ಏಕೆ ಎಂದು ಜನರಿಗೆ ಮನವರಿಕೆ ಮಾಡಲು, ಅವರ ಬೆಂಬಲ ಪಡೆಯಲು ವ್ಯಾಪಕ ಪ್ರಚಾರ ಕಾರ್ಯ ನಡೆಸುತ್ತಾರೆ ಎಂಬುದನ್ನು ಈ ನ್ಯಾಯಾಧೀಶರುಗಳು ಗಮನಿಸಿದಂತಿಲ್ಲ. ಈ ತೀರ್ಪನ್ನು ಬೆಂಬಲಿಸುವ ಕೆಲವು ಪತ್ರಿಕಾ ಸಂಪಾದಕೀಯಗಳು ತಮ್ಮದು 'ಸಮತೋಲನದ ಅಭಿಪ್ರಾಯ' ಎಂದು ಬಿಂಬಿಸಲು ಸ್ವಾತಂತ್ರ್ಯ ಹೋರಾಟಕಾಲದಲ್ಲಿ ಗಾಂಧೀಜಿಯವರು ಹರತಾಳಕ್ಕೆ, ಅಂದರೆ ಅಂಗಡಿ, ವ್ಯಾಪಾರ ಇತ್ಯಾದಿಗಳ ಬಂದ್‌ಗೆ ಕರೆ ನೀಡುತ್ತಿದ್ದರು. ಆದರೆ ಅಹಿಂಸಾತ್ಮಕ ವಾಗಿ ಎಂದು ಹೇಳಿವೆ. ನಿಜ, ಕಾರ್ಮಿಕ ಸಂಘಗಳು, ಎಡ ರಾಜಕೀಯ ಪಕ್ಷಗಳೂ ಇದನ್ನೇ ಮಾಡುತ್ತಿವೆ. ಆದರೆ ನಮ್ಮ ಮೇಲೆ ಹಿಂಸಾತ್ಮಕವಾಗಿ ಎರಗುವಾಗ ಅಹಿಂಸಾತ್ಮಕವಾಗಿ ರಕ್ಷಿಸಿಕೊಳ್ಳುವುದು ಹೇಗೆ ಎಂದು ಗಾಂಧೀಜಿಯವರು ಹೇಳಿಲ್ಲವಲ್ಲ ಎಂದು ಪಿ.ಕೆ.ಗಂಗೂಲಿಯವರು ಇಂತಹ ಹಿಂಸಾಚಾರಗಳ ಮೂಲದತ್ತ ಗಮನ ಸೆಳೆಯುತ್ತಾರೆ.

ವರ್ಗ ಪಕ್ಷಪಾತ

ಇನ್ನು 'ಮೂಲಭೂತ ಅಧಿಕಾರ'ಗಳ ಪ್ರಶ್ನೆ. ಬೇರೆಯವರ ಮೂಲಭೂತ ಹಕ್ಕುಗಳನ್ನು ಮೊಟಕು ಮಾಡುವ ಬಂದ್‌ಗಳಿಗೆ ಕರೆ ನೀಡುವ ಹಕ್ಕು ಯಾರಿಗೂ ಇಲ್ಲ ಎಂದಿದೆ ಈ ತೀರ್ಪು. ಇದು ತಲೆಹರಟೆಯೆನ್ನಬಹುದಾದ ತರ್ಕ ಎನ್ನುತ್ತಾರೆ ಪಿ.ಕೆ.ಗಂಗೂಲಿಯವರು. ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಹೇಳುವಾಗ ಇದನ್ನು ನಿರಾಕರಿಸುವ ಯಾವುದೇ ಅವಕಾಶವನ್ನು ಕೊಟ್ಟಿಲ್ಲ. ಆದ್ದರಿಂದ 'ಬೇರೆ ಕೆಲವು ನಾಗರೀಕರಿಗೆ' ಅಥವಾ ವ್ಯಕ್ತಿಗಳಿಗೆ ಈ ಮೂಲಭೂತ ಹಕ್ಕುಗಳನ್ನು ಎದುರಿಸುವ ಮೂಲಭೂತ ಹಕ್ಕು ಇದೆ ಎಂಬ ಅರ್ಥ ಸಂವಿಧಾನದಲ್ಲಿ ಎಲ್ಲೂ ಬರುವುದಿಲ್ಲ. ಆದ್ದರಿಂದ ಇದನ್ನು ಕುತರ್ಕವೆಂದೇ ಹೇಳಬೇಕು. ನ್ಯಾಯಾಧೀಶರ ವರ್ಗ ಪಕ್ಷಪಾತವನ್ನು ಇದು ಬಿಂಬಿಸುತ್ತದಷ್ಟೇ ಎನ್ನುವ ಪಿ.ಕೆ.ಗಂಗೂಲಿಯವರು ಒಂದು ಸಮೂಹ ಅಥವಾ ಬಹುಮಂದಿಯ ಅಭಿಪ್ರಾಯಕ್ಕಿಂತ ಕೆಲವು ವ್ಯಕ್ತಿಗಳ ಅಭಿಪ್ರಾಯಕ್ಕೆ ಆದ್ಯತೆ ನೀಡುವ ಈ ಕ್ರಮ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಬುಡಕ್ಕೇ ಏಟು ಕೊಡುವಂತದ್ದು ಎನ್ನುತ್ತಾರೆ.

ಇನ್ನು ತೀರ್ಪು 'ರಾಷ್ಟ್ರೀಯ ನಷ್ಟ'ದ ಬಗ್ಗೆ ಹೇಳಿದೆ. ಫಿಕ್ಕಿ, ಸಿಐಐ ಇತ್ಯಾದಿ ಮಾಲಕರ ಸಂಘಗಳು ಇದನ್ನು ಇನ್ನಷ್ಟು ಹಿಗ್ಗಿಸಿ ಬಂದ್‌ಗಳು ಹೊಸ ಉದಾರೀಕರಣದ ವ್ಯವಸ್ಥೆಯಲ್ಲಿ ಇಡೀ ಆರ್ಥಿಕವನ್ನು ಹಾಳುಗೆಡುವುತ್ತವೆ ಎಂದು ಅರ್ಥ ಕಲ್ಪಿಸಿದ್ದಾರೆ. ಆದರೆ ಲಕ್ಷಾಂತರ ಘಟಕಗಳನ್ನು ಮುಚ್ಚಿ, ಲಕ್ಷಾಂತರ ಕಾರ್ಮಿಕರನ್ನು ರಿಟ್ರೆಂಚ್ ಮಾಡಿ ಈ ಮಹಾನುಭಾವರುಗಳು ಉಂಟು ಮಾಡುವ 'ರಾಷ್ಟ್ರೀಯ ನಷ್ಟ' ದ ಬಗ್ಗೆ ಏಕೆ ಮಾತನಾಡುವುದಿಲ್ಲ? ಅಂದರೆ 'ರಾಷ್ಟ್ರೀಯ ನಷ್ಟ' ದ ಬಗ್ಗೆ ಬಂದ್‌ಗಳಿಂದ ಕಾರ್ಮಿಕರ ಕೂಲಿಗೂ ಸಂಚಕಾರ ಬರುತ್ತದೆ ಎಂಬ ಇವರದು ಕೇವಲ ಮೊಸಳೆ ಕಣ್ಣೀರು ಎಂದು ಸ್ಪಷ್ಟವಾಗುವುದಿಲ್ಲವೇ? ಮಾನ್ಯ ನ್ಯಾಯಾಧೀಶರುಗಳು ಹೆಚ್ಚು 'ರಾಷ್ಟ್ರೀಯ ನಷ್ಟ' ಆಗುತ್ತಿರುವುದು ಬಂದ್, ಹರತಾಳಗಳಿಂದಲೇ ಅಥವಾ ಈ ಮಾಲಕರು, ಗುತ್ತೇದಾರಿಗಳು ನಡೆಸುವ ಕ್ಲೋಶರ್, ರಿಟ್ರೆಂಚ್ ಮೆಂಟ್‌ಗಳಿಂದಲೋ ಎಂಬ ಬಗ್ಗೆ ವಿವರವಾಗಿ ಪರಿಶೀಲಿಸಿದ್ದಾರೆಯೇ? ಈ ಕ್ಲೋಶರ್, ರಿಟ್ರೆಂಚ್ ಮೆಂಟ್‌ಗಳು, ಆ ಮೂಲಕ ಲಕ್ಷಾಂತರ ಕುಟುಂಬಗಳನ್ನು ಬೀದಿಗೆಸೆಯುವ, ಮಾನವ ಸಂಪನ್ಮೂಲವನ್ನು ವ್ಯರ್ಥಗೊಳಿಸುವ ಕ್ರಿಮಿನಲ್ ಚಟುವಟಿಕೆಗಳು ನಿಜವಾಗಿ ರಾಷ್ಟ್ರೀಯ ನಷ್ಟ ತರುವಂತಹ ಕೃತ್ಯಗಳು ಮತ್ತು ಇಂತಹ ಸಮಾಜ-ವಿರೋಧಿ ಕೃತ್ಯಗಳೇ ಇಂತಹ ಬಂದ್‌ಗಳು, ಹರತಾಳಗಳು ನಡೆಯಲು ಪ್ರಧಾನ ಕಾರಣ ಎಂಬುದನ್ನು ಈ ಮಾನ್ಯ ನ್ಯಾಯಾಧೀಶರುಗಳು ಒಪ್ಪುತ್ತಾರೆಯೇ? ಎಂದು ಪಿ.ಕೆ.ಗಂಗೂಲಿಯವರು ಖಾರವಾಗಿ ಪ್ರಶ್ನಿಸುತ್ತಾರೆ.

ರಾಷ್ಟ್ರ ಎಂದರೆ ಗುತ್ತೇದಾರಿಗಳು ಮಾತ್ರವೇ?

ದುರದೃಷ್ಟವಶಾತ್ ಮಾನ್ಯ ನ್ಯಾಯಾಧೀಶರುಗಳು ಇವನ್ನೆಲ್ಲಾ ವಿಶ್ಲೇಷಿಸಿಲ್ಲ. ಅಲ್ಪಸಂಖ್ಯೆಯ ಶೋಷಕರ ವಾದವನ್ನು ಕಣ್ಣು ಮುಚ್ಚಿ ಸ್ವೀಕರಿಸಿದ್ದಾರೆ ಎಂದು ಅವರು ಖೇದ ವ್ಯಕ್ತಪಡಿಸುತ್ತಾರೆ. ಕೇರಳ ಹೈಕೋರ್ಟ್‌ನಲ್ಲಿ ಬಂದ್‌ಗಳ ವಿರುದ್ಧ ಕೇಸ್ ಹಾಕಿರುವುದು ಕೊಚ್ಚಿನ್ ಚೇಂಬರ್ ಆಫ್ ಕಾಮರ್ಸ್ ಎಂಬುದನ್ನಿಲ್ಲಿ ಗಮನಿಸಬೇಕು. ಈ ಬಂದ್‌ಗಳಿಂದ ಈ ಗುತ್ತೇದಾರಿಗಳ ಲಾಭಗಳೇನೂ ಕುಂದು ಬಂದಿಲ್ಲ ಎಂಬುದನ್ನು ನ್ಯಾಯಾಧೀಶರು ಗಮನಿಸಿದಂತಿಲ್ಲ.

'ಬಂದ್‌ಗಳು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಅನುಗುಣವಾಗಿಲ್ಲ' ಎನ್ನುವ ನ್ಯಾಯಾಧೀಶರು ವಾಸ್ತವವಾಗಿ ಗುತ್ತೇದಾರಿಗಳು ಮತ್ತು ರಾಷ್ಟ್ರ ಒಂದೇ ಎಂದು ಪರಿಗಣಿಸುವಂತೆ ಕಾಣುತ್ತದೆ. ಈ ಮೂಲಕ ಗುತ್ತೇದಾರಿಗಳ ಹಿತಾಸಕ್ತಿಗಳನ್ನು ಎತ್ತಿ ಹಿಡಿದಿದ್ದಾರೆ ಎಂದು ಗಂಗೂಲಿಯವರು ಅಭಿಪ್ರಾಯ ಪಡುತ್ತಾರೆ. ವಾಸ್ತವವಾಗಿ ನ್ಯಾಯಾಧೀಶರು ಇಲ್ಲಿ ಪರಿಗಣಿಸಬೇಕಾಗಿದ್ದದ್ದು ಮೂಲಭೂತ ಹಿತಾಸಕ್ತಿಗಳ ಪ್ರಶ್ನೆ. ಆದರೆ ಅವರು ಇದನ್ನು ಮೀರಿ ಹೋಗಿದ್ದಾರೆ. ಅಷ್ಟೆ ಅಲ್ಲ, ನ್ಯಾಯಾಧೀಶರು ತಮ್ಮ ಕಾರ್ಯವ್ಯಾಪ್ತಿಯನ್ನು ಮೀರಿ ಹೋಗಿ ಶಾಸನ ಸಭೆಗಳು ಬಂದ್‌ನ್ನು ನಿಷೇಧಿಸಲು ಅಥವಾ ಅದನ್ನು ಮೊಟಕು ಮಾಡಲು ಮುಂದಾಗದಿದ್ದರೆ ತಾನೇ 'ನಾಗರೀಕ ಹಕ್ಕುಗಳನ್ನು ರಕ್ಷಿಸಲು ಮುಂದಾಗ ಬೇಕಾದೀತು' ಎಂದೂ ಅವರು ಹೇಳಿದ್ದಾರೆ. ಇದು ಸರಿಯಲ್ಲ ಎಂದು ಪಿ.ಕೆ.ಗಂಗೂಲಿ ಅಭಿಪ್ರಾಯ ಪಟ್ಟಿದ್ದಾರೆ.

ಅದೇನೇ ಇರಲಿ, ಈ ತೀರ್ಪಿನಲ್ಲಿ ಇರುವ ನ್ಯೂನತೆಗಳು ಹಲವು. ಇದು ಎಲ್ಲಾ ದುಡಿಯುವ ಜನ ವಿಭಾಗಗಳ ಭಾವನೆಗಳನ್ನು, ಆಕಾಂಕ್ಷೆಗಳನ್ನು ಘಾಸಿಗೊಳಿಸಿದೆ. ಆದ್ದರಿಂದ ಈ ತೀರ್ಪು ಬಂಡವಾಳಶಾಹಿ ವ್ಯವಸ್ಥೆಯ ಮೂಲಭೂತ ನ್ಯೂನತೆಯ ನಿಜವಾದ ಪ್ರತಿಫಲನ ಎಂಬ ರಾಜಕೀಯ ತಿಳುವಳಿಕೆ ಯೊಂದಿಗೆ ಈ ತೀರ್ಪಿನ ಪರಿಣಾಮವಾಗಿ ಬರುವ ಯಾವುದೇ ಧಾಳಿಯ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಗಂಗೂಲಿಯವರು ಹೇಳುತ್ತಾರೆ. 'ಶ್ರಮಜೀವಿ ಬದ್ಧಶತ್ರು. ಅವನನ್ನು ಸೋಲಿಸಬೇಕು ಎಂಬ ವಿಚಾರದ ಮೇಲೆಯೇ ಈ ಎಲ್ಲಾ ಕಾನೂನುಗಳು ನಿಂತಿವೆ" ಎಂಬುದನ್ನು ಎಂಗೆಲ್ಸ್‌ರವರು ಬಹಳ ಹಿಂದೆಯೇ ಹೇಳಿದ್ದನ್ನು ನೆನಪಿಸಿರುವ ಅವರು ಎದ್ದು ಬರುತ್ತಿರುವ ಹೋರಾಟದ ಅಲೆಗಳ ಮುಂದೆ ಈ ತೀರ್ಪು ಹಾಸ್ಯಾಸ್ಪದವಾಗಿಬಿಡುತ್ತದೆ ಎಂದಿದ್ದಾರೆ.

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಮಳೆ ಬಂದರೂ............

ಕಳೆದ ವರ್ಷ ಮಳೆ ಚೆನ್ನಾಗಿ ಆದರೂ ಆಹಾರಧಾನ್ಯಗಳ ಉತ್ಪಾದನೆ ಗುರಿಗಿಂತ 2 ದಶಲಕ್ಷ ಟನ್‌ಗಳಷ್ಟು ಕಡಿಮೆಯಾಗಲಿದೆ. 1996-97 ರ ಸಾಲಿಗೆ 193.50 ದಶಲಕ್ಷ ಟನ್‌ಗಳಷ್ಟು ಆಹಾರ ಉತ್ಪಾದನೆಯ ಗುರಿಯನ್ನು ಹಾಕಿಕೊಳ್ಳಲಾಗಿತ್ತು. 191.50 ದಶಲಕ್ಷ ಟನ್ನುಗಳಷ್ಟೇ ಉತ್ಪಾದನೆಯಾಗಲಿದೆಯಂತೆ. 1997-98 ರ ಸಾಲಿಗೆ 198 ದಶಲಕ್ಷ ಟನ್ನುಗಳಷ್ಟು ಆಹಾರ ಉತ್ಪಾದನೆ ಮಾಡುವ ಗುರಿ ಹಾಕಿಕೊಳ್ಳಲಾಗಿದೆ. ಕೃಷಿ ಮಂತ್ರಾಲಯ ಈ ಮಹತ್ವಾಕಾಂಕ್ಷೆ ಹಾಕಿಕೊಂಡಿದೆ. 2002 ಇಸವಿಗೆ ಕೊನೆಯಾಗುವ 9ನೇ ವಾರ್ಷಿಕ ಯೋಜನೆಯ ಅವಧಿಯಲ್ಲಿ ಕೃಷಿ ವಲಯದಲ್ಲಿ ಶೇ4.5 ರಷ್ಟು ಬೆಳವಣಿಗೆ ಸಾಧಿಸುವ ಗುರಿಯನ್ನು ಅದು ಹಾಕಿಕೊಂಡಿದೆ.

1997-98 ರ ಸಾಲಿನಲ್ಲೂ ಉತ್ತಮ ಮಳೆಯಾಗಿರುವುದರಿಂದ ಹೆಚ್ಚು ಕಡಿಮೆ ಈ ಗುರಿ ಸಾಧಿತವಾಗಬಹುದೆಂದು ಆಸೆ ಇಟ್ಟುಕೊಳ್ಳೋಣ. ಇದು ಉತ್ತಮ ಮಳೆಯಾಗುವ ವರ್ಷಗಳ ಕತೆ. ಉತ್ತಮ ಮಳೆಯಾಗದ ವರ್ಷಗಳಲ್ಲಿ ಏನಾಗಬಹುದೆಂಬುದು ಈಗಿನ ಪ್ರಶ್ನೆ. ಹಣಕಾಸು ಕೊರತೆಯನ್ನು ಕಡಿಮೆ ಮಾಡುವ ನೆಪದಲ್ಲಿ ಸಹಾಯಧನ, ಯೋಜನಾವೆಚ್ಚಗಳಲ್ಲಿ ಕಡಿಮೆ ಮಾಡುತ್ತಿರುವುದು ವಿವಿಧ ವಲಯಗಳಲ್ಲಿ ಸರ್ಕಾರೀ ಮಧ್ಯಪ್ರವೇಶವನ್ನು ತೀರಾ ಕಡಿಮೆ ಮಾಡುತ್ತಿರುವುದು ಉದಾರೀಕರಣದ ಮಹತ್ಸಾಧನೆ. ಈ ಹಿನ್ನೆಲೆಯಲ್ಲಿಯೇ ಈ ಕಡಿಮೆ ಮಳೆ, ಕಡಿಮೆ ಉತ್ಪಾದನೆ ಎಂತಹ ಸಮಸ್ಯೆ ಸೃಷ್ಟಿಸ ಬಹುದೆಂಬುದನ್ನು ವಿಚಾರ ಮಾಡಬೇಕು. ಈ ಸರ್ಕಾರಿ ವೆಚ್ಚ ಕಡಿಮೆಯಾಗಿರುವುದರಿಂದ ಮಣ್ಣು ಮತ್ತು ನೀರು ನಿರ್ವಹಣೆಗಳಿಗೆ, ತಂತ್ರಜ್ಞಾನ ಅಭಿವೃದ್ಧಿಗೆ, ಸಂಶೋಧನೆಗಳಿಗೆ ಮತ್ತು ಉತ್ತಮ ಬೀಜ ಉತ್ಪಾದನೆಗೆ ಇತ್ಯಾದಿ ಕೃಷಿಯ ಅಭಿವೃದ್ಧಿಗೆ ಬೇಕಾಗುವ ಎಲ್ಲ ವಲಯಗಳಲ್ಲೂ ಸರ್ಕಾರೀ ಹಣಹೂಡಿಕೆ ಕಡಿಮೆಯಾಗಿದೆ, ಖಾಸಗಿಯವರು ಅಪಾರ ಲಾಭ ತರಬಹುದಾದ ಉತ್ತಮ ತಳಿ ಬೀಜ ಉತ್ಪಾದನೆ, ರಸಗೊಬ್ಬರ ಮತ್ತು ಕೃಷಿ ರಸಾಯನಿಕಗಳು ಇತ್ಯಾದಿಗಳಿಗಾಗಿ ಮಾತ್ರ ಖರ್ಚು ಮಾಡುತ್ತಿದ್ದಾರೆ. ಖರ್ಚುಮಾಡಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಈ ಮೂಲಕ ಕೃಷಿ ಈ ಖಾಸಗಿಯವರ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿತವಾಗುವ ಸ್ಥಿತಿ ಹತ್ತಿರವಾಗುತ್ತಲಿದ.

ಖಾಸಗಿ ಮಾರುಕಟ್ಟೆಯ ಶಕ್ತಿಗಳ ಸೆಳವು ಸುಳಿಗಳಲ್ಲಿ ಸಿಕ್ಕಿಕೊಂಡು ಸಣ್ಣ ಮತ್ತು ಮಧ್ಯಮ ರೈತರು ಕಂಗಾಲಾಗುತ್ತಿದ್ದಾರೆ. ಭಾರತದ ಕೃಷಿ ರಫ್ತು ಅಭಿಮುಖವಾಗಿ ಅಭಿವೃದ್ಧಿ ಹೊಂದಿದ ದೇಶಗಳು ಏನು ಬಯಸುತ್ತಾವೋ ಅವನ್ನೇ ಬೆಳೆವ ಪರಿಸ್ಥಿತಿ ಉಂಟಾಗುತ್ತಿದೆ. ನಮ್ಮ ಜನರ ಅವಶ್ಯಕತೆಗಳಿಗೆ ತಕ್ಕಂತೆ ಕೃಷಿಯನ್ನು ಅಭಿವೃದ್ಧಿ ಮಾಡಿ ಬೆಳೆಸಿ ನಮ್ಮ ಸ್ವಾವಲಂಬನೆ ಹೆಚ್ಚಿಸಬೇಕಾದ ಕಡೆ ಈಗ ಪರಾವಲಂಬನೆಯನ್ನೇ ಹೆಚ್ಚಿಸಲಾಗುತ್ತಿದೆ. ಉದಾರೀಕರಣ ಮತ್ತು ಜಾಗತೀಕರಣಗಳು ಈಗ ಭಾರತದಲ್ಲಿ ಮೆರೆಯುತ್ತಿರುವಾಗ ಮಳೆ ಕೈಕೊಟ್ಟರೆ ದೇಶವೇ ಅಲ್ಲೋಲ ಕಲ್ಲೋಲವಾಗುವ ಸ್ಥಿತಿ ನಿರ್ಮಾಣವಾಗುತ್ತಿದೆ.

○

ಆಹಾರ ಸಂಸ್ಕರಣವೆಂಬ ಹುಲುಸಾದ ಮೇವು ಪ್ರದೇಶ

ಡಿಸೆಂಬರ್ ಹತ್ತರಿಂದ ಚೆನ್ನೈಯಲ್ಲಿ ಆಹಾರ ತಂತ್ರಜ್ಞಾನದ ಬಗ್ಗೆ ದೊಡ್ಡ ಪ್ರದರ್ಶನ ಹಾಗೂ ಸಮಾವೇಶ ನಡೆಯಲಿದೆ. ಹಾಗೆಯೇ ದೆಹಲಿಯಲ್ಲಿ ಸದ್ಯದಲ್ಲಿಯೇ ಇಂತಹದ್ದೊಂದು ಪ್ರದರ್ಶನ ಸಮಾವೇಶ ನಡೆಯಲಿದೆ. ಯಾಕೆ? ಒಪ್ಪೊತ್ತಿಗೊಂದು ಊಟವೂ ದೊರೆಯದ ಭಾರತದ ಬಡಪ್ರಜೆಗಳಿಗೆ ಸುಲಭ ದರದಲ್ಲಿ ಆಹಾರ ಒದಗಿಸುವ ಬಗ್ಗೆ, ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ದೇಶದ ಜನಸಾಮಾನ್ಯರು ಪೌಷ್ಟಿಕ ಆಹಾರ ಉಣುವಂತೆ ಮಾಡುವ ಬಗ್ಗೆ ವಿಚಾರಿಸಲೆಂದೇ? ಖಂಡಿತ ಅಲ್ಲ.

ಆಹಾರ ಸಂಸ್ಕರಣ ಒಂದು ದೊಡ್ಡ ಉದ್ಯಮ. ಭಾರತದಲ್ಲಿ ಇದು ಇದೀಗ ಅರಳುತ್ತಿರುವ ಉದ್ಯಮ. ಉದಾರೀಕರಣ ಈ ಉದ್ದಿಮೆಯನ್ನು ಇನ್ನೂ ಹೆಚ್ಚು ಆಕರ್ಷಕಗೊಳಿಸಿದೆ. ಯಾವುದರಲ್ಲಿ ಬಂಡವಾಳ ಹೂಡಬೇಕು, ಹೇಗೆ ಹೂಡಬೇಕು, ಯಾವ ಉತ್ತಮ ತಂತ್ರಜ್ಞಾನದಲ್ಲಿ ಲಾಭ ಹೆಚ್ಚು ಇತ್ಯಾದಿ ವಿಚಾರಗಳ ವಿನಿಮಯಕ್ಕಾಗಿಯೇ ನಡೆವ ಸಮಾವೇಶ ಇದು. ಬಂಡವಾಳಿಗರ ಲಾಭದಾಯಕತೆ ಬಗೆಗೆ ವಿಚಾರ ಮಾಡುವ ಸಮಾವೇಶ ಇದು ಎಲ್ಲಿ ಅಪಾರ ಲಾಭವಿದೆಯೋ ಅಲ್ಲಿ ಇಂತಹ ಸಮಾವೇಶ ಪ್ರದರ್ಶನ ನಡೆಸುವುದು ಬಂಡವಾಳಿಗರ ಪದ್ಧತಿ. ಈ ವಿಷಯದಲ್ಲಿ ಈ ಬಂಡವಾಳಿಗರು ಸಂಗ್ರಹಿಸಿರುವ ಅಂಕಿ-ಸಂಖ್ಯೆಯನ್ನು ನೋಡಿ. ಸಂಸ್ಕರಿತ ಆಹಾರಗಳ ಮಾರುಕಟ್ಟೆ ಇಂದಿನ 21.4 ಶತಕೋಟಿ ಡಾಲರುಗಳಷ್ಟರಿಂದ 2005 ನೇ ಇಸವಿಯ ವೇಳೆಗೆ 62.5 ಶತಕೋಟಿ ಡಾಲರುಗಳಷ್ಟಕ್ಕೇರಲಿದೆಯಂತೆ. ಆದ್ದರಿಂದ ಈ ಆಹಾರ ಸಂಸ್ಕರಣ ಉದ್ದಿಮೆ ಟೆಲಿಕಾಂ ಉದ್ದಿಮೆಗಿಂತ ದೊಡ್ಡದು ಎಂಬುದು ಇವರ ಅಭಿಪ್ರಾಯ.

ಈ ಉದ್ದಿಮೆಯಲ್ಲಿ ಅತಿ ಹೆಚ್ಚಿನ ಬೆಳವಣಿಗೆ, ಉತ್ತಮ ಲಾಭದಾಯಕತೆ, ಹೆಚ್ಚಿನ ಅವಕಾಶಗಳು ಇವೆಲ್ಲ ಇರುವುದರಿಂದಲೇ ಬಂಡವಾಳಿಗರಿಗೆ ಹೆಚ್ಚು ಆಕರ್ಷಕವಾಗಿರುವುದು.

ಇದು ಇಷ್ಟೆಲ್ಲ ದೊಡ್ಡ ಉದ್ದಿಮೆಯಾದರೆ ಅದರಿಂದ ಲಾಭ ಯಾರಿಗೆ? ಲಾಭ ಖಂಡಿತವಾಗಿಯೂ ಉಳ್ಳವರಿಗೆ-ಬಡವರಿಗಲ್ಲ. ಅಂಗಡಿಯಿಂದ ತಂದ ತಿಂಡಿತಿನಿಸುಗಳು, ಐಸ್‌ಕ್ರೀಮ್, ಸಂಸ್ಕರಿತ ಹಣ್ಣುಗಳು ಇತ್ಯಾದಿ ಆಹಾರ ಪದಾರ್ಥಗಳನ್ನು ಉಳ್ಳವರೇ ಕೊಂಡು ತಿನ್ನುವವರು, ಮಧ್ಯಮ ವರ್ಗದವರೂ ಇವನ್ನು ಬಳಸಬಹುದು. ಆದರೆ ಬಡವರಂತೂ ಬಳಸಲಾರರು. ದೇಶದ ಜನರಿಗೆ ಎರಡು ಹೊತ್ತಿನ ಊಟ ದೊರೆಯುವಂತೆ ಮಾಡಲಾರದ ಸರ್ಕಾರ ಈ ಬಂಡವಾಳಿಗರಿಗಂತೂ ಒಳ್ಳೆಯ ಅವಕಾಶಗಳನ್ನು ಮಾಡಿ ಕೊಡುತ್ತಿದೆ. ಅಲ್ಲವೆ?

ಕುಸಿಯುತ್ತಲೇ ಇರುವ ರೂಪಾಯಿ

ಭಾರತದ ರೂಪಾಯಿ ಡಾಲರಿಗೆದುರಾಗಿ ಕುಸಿಯುತ್ತಲೇ ಇದೆ. ರೂಪಾಯಿಯ ಮೌಲ್ಯದ ಕುಸಿತದಿಂದಾಗಿ ಇಡೀ ಆರ್ಥಿಕತೆಯ ವಿವಿಧ ಭಾಗಗಳಲ್ಲಿ ಏರುಪೇರಾಗುತ್ತಿದೆ. ರಫ್ತು ಹೆಚ್ಚು ಲಾಭಕರವಾದರೆ ಆಮದು ಅಷ್ಟೇ ನಷ್ಟದಾಯಕವಾಗುತ್ತಿದೆ. ರೂಪಾಯಿಯ ಮೌಲ್ಯ ಕುಸಿಯುತ್ತಿರುವಾಗ ಭಾರತೀಯ ರಿಸರ್ವ್ ಬ್ಯಾಂಕ್ ಮಧ್ಯಪ್ರವೇಶಮಾಡಿ ಆ ಕುಸಿತವನ್ನು ತಡೆಯುವ ಬದಲು ಸುಮ್ಮನೆ ಕುಳಿತಿತ್ತು ಎಂಬ ಆಪಾದನೆಯನ್ನೂ ಮಾಡಲಾಗುತ್ತಿದೆ. ಮೊದಲಿಗೆ ಸುಮ್ಮನಿದ್ದ ಭಾರತೀಯ ರಿಸರ್ವ್ ಬ್ಯಾಂಕ್ ನಂತರ ದೊಡ್ಡ ಪ್ರಮಾಣದಲ್ಲಿ ಮಧ್ಯಪ್ರವೇಶ ಮಾಡಿ ಡಾಲರನ್ನು ಮಾರಾಟ ಮಾಡಿತು. ಸುಮಾರು 200 ದಶಲಕ್ಷ ಡಾಲರುಗಳನ್ನು ಮಾರಿತು. ಆದರೂ ರೂಪಾಯಿಯ ಮೌಲ್ಯ ಕುಸಿತ ಮುಂದುವರಿಯುತ್ತಲೇ ಇದೆ. ರೂಪಾಯಿಯ ಮೌಲ್ಯ ಕುಸಿತದಿಂದಾಗಿ ವಿದ್ಯುತ್ ಬೆಲೆ ಏರಲಿದೆ. ತೈಲದ ಆಮದು ವೆಚ್ಚವೂ ಏರಲಿದೆ. ಒಂದು ಅಂದಾಜಿನ ಪ್ರಕಾರ ತೈಲ ಆಮದು ವೆಚ್ಚ 600 ಕೋಟಿ ರೂಪಾಯಿಗಳಷ್ಟು ಹೆಚ್ಚಾಗಲಿದೆ. ಇಂತಹ ಹೆಚ್ಚಳ ಆರ್ಥಿಕದ ಮೇಲೆ ಬಹಳ ಗಂಭೀರ ಪರಿಣಾಮಗಳನ್ನು ಬೀರಲಿದೆ ಎಂದು ಹೇಳಲಾಗುತ್ತಿದೆ. ತೈಲ ಖಾತೆಯ ಕೊರತೆಯ ನಿರ್ವಹಣೆ ಬಹಳ ಕಠಿಣವಾಗುತ್ತಿದೆ. ಈ ಕೊರತೆಯಿಂದಾಗಿ ತೈಲ ಕಂಪನಿಗಳ (ಸಾರ್ವಜನಿಕ ವಲಯದವು) ಪರಿಸ್ಥಿತಿ ಹದಗೆಡಲಿವೆ. ಈ ಕಂಪನಿಗಳಲ್ಲಿ ಕೆಲವು ತೈಲ ಬಾಂಡುಗಳ ನೀಡಿಕೆಯ ತಯಾರಿ ನಡೆಸಿದವು. ಈ ಬಾಂಡು ನೀಡಿಕೆಯ ಮೇಲು ಬೆಲೆ ಹೆಚ್ಚಳದಿಂದಾಗಿ ದುಷ್ಪರಿಣಾಮ ಉಂಟಾಗಲಿದೆ.

ಉದ್ದಿಮೆ ರೋಗಗ್ರಸ್ತವಾದರೆ ಕಾರ್ಮಿಕರು ಮನೆಗೆ

ಇದು ಹೊಸ 'ರೋಗಗ್ರಸ್ತ ಔದ್ಯಮಿಕ ಕಂಪನಿಗಳ (ವಿಶೇಷ ಅವಕಾಶ) ಮಸೂದೆ 1997 ರ ತಿರುಳು. ಈಗಾಗಲೇ ಈ ಮಸೂದೆಯನ್ನು ಲೋಕಸಭೆಯಲ್ಲಿ ಸರ್ಕಾರ ಮಂಡಿಸಿ ಆಗಿದೆ. ಈಗ ಸರ್ಕಾರವೇ ಬಿದ್ದು ಹೋಗಿರುವುದರಿಂದ ಈ ಮಸೂದೆ ಜಾರಿಗೆ ಬರಲಿಕ್ಕಿಲ್ಲ. ಆದರೆ ಉದಾರೀಕರಣವಾದಿಗಳ ಮನೋಭಾವವನ್ನು ಈ ಮಸೂದೆ ಸ್ಪಷ್ಟವಾಗಿ ತೋರಿಸುತ್ತದೆ. ಉದ್ದಿಮೆ ರೋಗಗ್ರಸ್ತವಾದರೆ ಕಾರ್ಮಿಕರನ್ನು ಮನೆಗೆ ಕಳುಹಿಸುವ ಅಧಿಕಾರ ಆ ಕಂಪನಿಗೆ ಇರಬೇಕು ಎಂಬುದು ಮಸೂದೆಯ ತಿರುಳು. ಅದರ ಜೊತೆಗೇ ಒಂದು ಔದ್ಯಮಿಕ ಕಂಪನಿಯನ್ನು ರೋಗಗ್ರಸ್ತವೆಂದು ತೀರ್ಮಾನಿಸಲೂ ಸುಲಭವಾದ ಮಾನದಂಡ. ಯಾವುದೇ ಕಂಪನಿ ತಾನು ಕೊಡಬೇಕಾದ ಸಾಂಸ್ಥಿಕ ಸಾಲವನ್ನು 180 ದಿನಗಳೊಳಗೆ ಕಟ್ಟಲು ವಿಫಲವಾದಲ್ಲಿ ಅದು ರೋಗಗ್ರಸ್ತ ಕಂಪನಿಯೆಂದು ಘೋಷಿತವಾಗಬೇಕು. ಇದರರ್ಥವೇನೆಂದರೆ ಕಾರ್ಮಿಕರನ್ನು ಮನೆಗೆ ಕಳುಹಿಸಬೇಕಾದಲ್ಲಿ 150 ದಿನಗಳ ಕಾಲ ಕಂಪನಿ ಸುಸ್ತಿಗಾರನಾಗುತ್ತದೆ. ಎಲ್ಲ ಕಾರ್ಮಿಕ ಸಂಘಟನೆಗಳು ಈ ಮಸೂದೆಯನ್ನು ಒಕ್ಕೊರಲಿನಿಂದ ವಿರೋಧಿಸಿವೆ.

ಮುಂದೆ ಬರುವ ಸರ್ಕಾರವೂ ಈ ಬಗ್ಗೆ ಸರಿಯಾದ ನಿಲುವು ತಾಳದೇ ಹೋದಲ್ಲಿ ಕಾರ್ಮಿಕರ ವಿರೋಧವನ್ನು ಎದುರಿಸಲೇಬೇಕಾಗುತ್ತದೆ.

ಮದರ್ ತೆರೆಸಾ ಮತ್ತು ಮಹಾತ್ಮಾ ಗಾಂಧಿ

ಒಂದು ವಾರದ ಅಂತರದಲ್ಲಿ ನಿಧನರಾದ ಮದರ್ ತೆರೆಸಾ ಹಾಗೂ ಡಯಾನಾರ ಕುರಿತಂತೆ ಸುದ್ದಿ ಮಾಧ್ಯಮಗಳಲ್ಲಿ ಕಂಡ ಮಹಾಪೂರವನ್ನು
ನೀವಿನ್ನೂ ಮರೆತಿರಲಿಕ್ಕಿಲ್ಲ, ಅಪೂರ್ವ ಚಾರಿತ್ರಿಕ ಘಟನೆಗಳೆನ್ನುವಂತೆ ದಿನಗಟ್ಟಲೆ ಭರಾಟೆಯ ಪ್ರಚಾರ ನಡೆಯಿತು.
ಜಗತ್ತಿನ ಬಡವರಿಗಾಗಿ, ಅಸಹಾಯಕರಿಗಾಗಿ ದುಡಿದವರಲ್ಲವೇ ಅವರು, ಇದರಲ್ಲಿ ತಪ್ಪೇನು ಎಂದು ಕೇಳಬಹುದು. ಕಮ್ಯುನಿಸ್ಟರೂ ಇದೇ
ಬಡವರಿಗಾಗಿ, ಅಸಹಾಯಕರಿಗಾಗಿ ಜೀವ ತೇಯುವುದು, ಹೋರಾಡುವುದು. ಪ್ರಮುಖ ಕಮ್ಯುನಿಸ್ಟ್ ಮುಂದಾಳುಗಳು ನಿಧನರಾದಾಗ ಇಂತಹ
ಪ್ರಚಾರ ಏಕಿರುವುದಿಲ್ಲ ಎಂಬ ಪ್ರಶ್ನೆಯೂ ಪ್ರಜ್ಞಾಶೀಲರಲ್ಲಿ ಸಹಜವಾಗಿ ಏಳುತ್ತದಲ್ಲವೇ? ಡಾ|| ವಿಜಯ್ ಪ್ರಸಾದ್ ಎಂಬ ಒಬ್ಬ ಪ್ರಗತಿಪರ
ಚಿಂತಕರು ಈ ಪ್ರಶ್ನೆಯ ಹಿನ್ನೆಲೆಯಲ್ಲಿ ಇದನ್ನು ವಿಶ್ಲೇಷಿಸಿದ್ದಾರೆ. ಕೆಲವು ಹೊಸ ಮಾಹಿತಿಗಳನ್ನು ನೀಡಿದ್ದಾರೆ. ಮದರ್ ತೆರೆಸಾರವರ ಬಗ್ಗೆ
ಟಿ.ವಿ.ಗಳಲ್ಲಿ ನೋಡಿದ್ದೀರಿ, ಪತ್ರಿಕೆಗಳಲ್ಲಿ ಓದಿದ್ದೀರಿ. ಈ ಎಲ್ಲದರ ಇನ್ನೊಂದು ಮಗ್ಗುಲಿನ ಬಗ್ಗೆ ಡಾ|| ವಿಜಯ ಪ್ರಸಾದ್ ಏನು ಹೇಳುತ್ತಾರೆ ಓದಿ.
ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಕಮ್ಯುನಿಸ್ಟ್ ಪಕ್ಷದ ಸೈದ್ಧಾಂತಿಕ ಮಾಸಿಕದಲ್ಲಿ ಪ್ರಕಟವಾದ ಅವರ ಲೇಖನದ ಸಂಗ್ರಹಾನುವಾದ ಇದು.

ಬಡವರ, ಅಸಹಾಯಕರ, ನಿರ್ಗತಿಕರ ನೋವು ಕಡಿಮೆ ಮಾಡುವಲ್ಲಿ, ಅವರ ಸೇವೆಯಲ್ಲಿ ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲಿ ಮದರ್ ತೆರೆಸಾ ಕಲ್ಕತ್ತಾದಲ್ಲಿ ಮಾಡಿದ ಕೆಲಸ ವಿಶಿಷ್ಟವಾದದ್ದು ಎಂಬುವರ ಬಗ್ಗೆ ಎರಡು ಮಾತಿಲ್ಲ. ಕುಷ್ಠರೋಗಿಗಳೊಂದಿಗೆ, ಮರಣಾಂತಿಕ ಕಾಯಿಲೆಗಳಿಂದ ನರಳುತ್ತಿರುವವರಿಗೆ ಅವರ ಮತ್ತು ಅವರ ಸಂಘಟನೆಯ ನಿಸ್ವಾರ್ಥ ಸೇವೆ, ಅವರ ಅತ್ಯಂತ ಸರಳ ಜೀವನ, ಸಜ್ಜನಿಕೆಯನ್ನು ನೋಡಿದವರಿಗೆ - ಅವರ ಕೆಲಸವನ್ನು ವಿಮರ್ಶೆಗೆ ಒಳಪಡಿಸುವುದು ಕಷ್ಟದ ಕೆಲಸ. ಅವರ ಥರದ ಕೆಲಸ ಮಾಡಿದ್ದೀರಾ? ನಿಮಗೇನು ಹಕ್ಕು ಅಂತಹ ಮಹಾತ್ಮರ ಕೆಲಸದ ಬಗ್ಗೆ ವಿಮರ್ಶೆ ಮಾಡಲು ಎಂದು ಮೂಗು ಮುರಿಯುವವರಿದ್ದಾರೆ. ಮಹಾತ್ಮಾ ಗಾಂಧಿಯವರ ಬಗ್ಗೆ ವಿಮರ್ಶೆಗೂ ಇದೇ ರೀತಿಯ ಟೀಕೆ ಬರುತ್ತದೆ. ಈ ಲೇಖನದ ಉದ್ದೇಶ ಮದರ್ ತೆರೆಸಾರವರ ಕೆಲಸದ ಮಹತ್ವವನ್ನು ಕಡೆಗಣಿಸುವುದಾಗಲಿ, ಅವರ ಧಾರ್ಮಿಕ ಹಿನ್ನೆಲೆಯಿಂದಾಗಿ ಅವರನ್ನು ಟೀಕಿಸುವುದೂ ಅಲ್ಲ. ಅವರು ಬಡವರ ಕೆಲಸದ ಸೀಮಿತತೆ ಬಗ್ಗೆ ಚರ್ಚಿಸುವುದು ಮಾತ್ರವಲ್ಲ ಅವರ ಕೆಲಸ ರಾಜಕೀಯ ಹಾಗೂ ಸೈದ್ಧಾಂತಿಕ ಎರಡೂ ಅರ್ಥದಲ್ಲಿ ಹೇಗೆ ಸಾಮ್ರಾಜ್ಯಶಾಹಿಯ ಜಾಗತಿಕ ಯೋಜನೆಯ ಭಾಗವಾಗಿತ್ತು ಎಂದು ತೋರಿಸುವುದು.

ಮದರ್ ತೆರೆಸಾರವರನ್ನು ಅಂತರ್ರಾಷ್ಟ್ರೀಯ ಮಾಧ್ಯಮಗಳು ಮಹಾತ್ಮಾ ಗಾಂಧಿಗೆ ಹೋಲಿಸಿದ್ದನ್ನೇ ತೆಗೆದು ಕೊಳ್ಳೋಣ. ಜಗತ್ತಿನ ಬಡವೇ ಒಂದು ಭಾಗವಾದ ಭಾರತದ ರೈತರನ್ನು, ಬಡಜನರನ್ನು, ಆಗ ಅತ್ಯಂತ ಪ್ರಬಲವಿದ್ದ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟದಲ್ಲಿ ಅಣಿನೆರೆಸಿದ್ದು, ಇಡೀ ದೇಶದ ಸ್ವಾತಂತ್ರ್ಯ ಹೋರಾಟದ ಪ್ರಧಾನ ನಾಯಕತ್ವ ವಹಿಸಿದ್ದ ಗಾಂಧೀಜಿ ಎದುರು - ಮದರ್ ತೆರೆಸಾರವರ ತುಲನೆ ಎಲ್ಲಿ? ಬಡವರ, ಅಸಹಾಯಕರ ನೇರವಾದ ಸೇವೆ ತೆಗೆದುಕೊಂಡರೂ ಬಹುಶಃ ಗಾಂಧೀಜಿಯವರ ಕೆಲಸದ ವ್ಯಾಪಕತೆ ಹೆಚ್ಚು. ಆ ರೀತಿ ನೋಡಿದರೆ ಈಗ ದೇಶದಲ್ಲಿ ಮದರ ತೆರೆಸಾ ರವರ ದಲಿತರ ಸೇವೆಯಂತಹುದೇ ಕೆಲಸ ಮಾಡುವ ನಿಜವಾದ ನಿಸ್ವಾರ್ಥ ಸೇವಾ ಸಂಘಟನೆಗಳಿಗೇನೂ ಕೊರತೆಯಿಲ್ಲ. ಹಾಗಿದ್ದರೆ ಮದರ್ ತೆರೆಸಾರವರನ್ನು ಜಾಗತಿಕವಾಗಿ ಅಷ್ಟು ಗಮನ ಸೆಳೆಯುವುದು ಹೇಗೆ? ಭಾರತ ಸರ್ಕಾರ ಕೆಥೊಲಿಕರ ವ್ಯಾಟಿಕನ್ ಚರ್ಚ್, ಅಮೇರಿಕನ್ ಸರ್ಕಾರ, ವಿಶ್ವಸಂಸ್ಥೆ, ನೊಬೆಲ್ ಸಮಿತಿ ಅವರ ಮೇಲೆ ಪ್ರಶಸ್ತಿ, ಸನ್ಮಾನಗಳ ಸುರಿಮಳೆಗರೆದದ್ದು ಯಾಕೆ?

ಆಗ್ನೆಸ್ ಮದರ್ ಆದ ಬಗೆ.

ಇದಕ್ಕೆ ಮದರ್ ತೆರೆಸಾರ ಮದರ್ ಆದ ಮೊದಲ ಜೀವನದ ಹಿನ್ನೆಲೆ ಗಮನಿಸಬೇಕು. ಮದರ್ ನಿಜವಾದ ಹೆಸರು ಆಗ್ನೆಸ್ ಅಂತ. ಅವರು ಜನಿಸಿದ್ದು ಯುರೋಪಿನ ಅಲ್ಬೇನಿಯಾ ದೇಶದಲ್ಲಿ 1910 ರಲ್ಲಿ. ಅವರು 'ಲೊರೆಟೊ ಸೋದರಿಯರು' ಎಂಬ ಧಾರ್ಮಿಕ ಸಂಘಟನೆ ಕಲ್ಕತ್ತಾದಲ್ಲಿ ನಡೆಸುತ್ತಿದ್ದ ಸ್ಕೂಲಿನಲ್ಲಿ ಶಿಕ್ಷಕಿಯಾಗಿ ಮೊದಲು ಭಾರತಕ್ಕೆ ಬಂದಿದ್ದು 1929 ರಲ್ಲಿ. ಇಪ್ಪತ್ತು ವರ್ಷಗಳ ಕಾಲ ಅವರು, ಉಚ್ಚ ವರ್ಗದ ಹುಡುಗಿಯರಿಗೆ ಮೀಸಲಾಗಿದ್ದ, ಕಲ್ಕತ್ತಾದ ಲೊರೆಟೋ ಸ್ಕೂಲ್‌ಗಳಲ್ಲಿ ದುಡಿದರು. ಆಮೇಲೆ ಅವರು ವ್ಯಾಟಿಕನ್ (ಕೆಥೊಲಿಕರ ಜಾಗತಿಕ ಕೇಂದ್ರ - ರೋಮ್ ನಲ್ಲಿರುವಂತಹುದು) ನ ಅನುಮತಿ ಪಡೆದು ಈಗ ಪ್ರಖ್ಯಾತವಾಗಿರುವ 'ಮಿಶನರಿಸ್ ಆಫ್ ಚಾರಿಟಿ' ಆರಂಭಿಸಿದ್ದು - ಸ್ವತಂತ್ರ ಭಾರತದಲ್ಲಿ 1950ರಲ್ಲಿ. ಈ ಸಂಘಟನೆಯ 120 ಪುಟಗಳ ಸಂವಿಧಾನ ಹೇಳುವಂತೆ - ಅದರ ಉದ್ದೇಶ 'ಬಡವರು ಮತ್ತು ದಲಿತರ ಬಗ್ಗೆ ಕ್ರಿಸ್ತನ ಕಾಳಜಿ' ಯನ್ನು ಮುಂದು ವರೆಸುವುದು.



'ಮಿಶನರೀಸ್ ಆಫ್ ಚಾರಿಟಿ' ಕಲ್ಕತ್ತದಲ್ಲಿ ಮರಣಾಂತಿಕ ಕಾಯಿಲೆಯಲ್ಲಿ ನರಳುತ್ತಿರುವವರಿಗೆ, ಕುಷ್ಠರೋಗಿಗಳ ಮತ್ತು ಅನಾಥ ಮಕ್ಕಳ ಆಶ್ರಮಗಳನ್ನು ತೆರೆಯಿತು. ಈ ಆಶ್ರಮಗಳು ಒಳ್ಳೆಯ ಕೆಲಸ ಮಾಡಿ ಹೆಸರು ಮಾಡಿದವು. ಕಲ್ಕತ್ತಾದ ಸ್ಥಳೀಯ ಸಮಾಜ ಸೇವಿಕೆ ಒಬ್ಬ ಪ್ರಸಿದ್ಧ ಸಂತೆ ಯಾದದ್ದು 1969ರಲ್ಲಿ ನಡೆದ ಒಂದು ಘಟನೆ ಯಿಂದ. ಮ್ಯಾಲ್ಕಂ ಮಗ್ಗೆರಿಜ್ ಎಂಬವ 1969ರಲ್ಲಿ ಆಕೆಯ ಮೇಲೆ ಒಂದು ಸಾಕ್ಷ್ಯ ಚಿತ್ರ ತಯಾರಿಸಿದ. 1971ರಲ್ಲಿ ಒಂದು ಪುಸ್ತಕ ಬರೆದ. ಎರಡರದ್ದೂ ಶೀರ್ಷಿಕೆ 'ದೇವರಿಗಾಗಿ ಒಂದು ಸುಂದರ ಕಾಣಿಕೆ' ಆಗಿತ್ತು. ಇದು ಇಂಗ್ಲೀಷ್ ಬಲ್ಲ ಜಾಗತಿಕ ವಲಯಗಳಲ್ಲಿ ಮದರ್ ತೆರೆಸಾ ಗೆ ಭಾರಿ ಪ್ರಚಾರ ಕೊಟ್ಟಿತು.

ಇಲ್ಲಿಂದ ಆರಂಭವಾಗುತ್ತದೆ ಮದರ್ ತೆರೆಸಾರ 'ಚಮತ್ಕಾರ'. ಅದರಿಂದ ಒಳ್ಳೆಯ ಫಿಲಂ ಪ್ರಿಂಟ್ ತಯಾರಿಸಲು ಸಾಧ್ಯವಾಯಿತು ಎಂದು ಬರೆದಿದ್ದಾನೆ!

ಆತ ಮದರ್ ತೆರೆಸಾರನ್ನು ಸಂತ ದರ್ಜೆಗೆ ಏರಿಸಿದ್ದು ಮಾತ್ರವಲ್ಲ, ಆಕೆಯ ಮಹಾನತೆ ಎದ್ದು ಕಾಣುವಂತೆ ಮಾಡಲು ಕೋಟಿ ಜನರು ಬೀದಿಯಲ್ಲೆಲ್ಲಾ ತುಂಬಿರುವ ಅತ್ಯಂತ ದರಿದ್ರ ನಗರವಾಗಿ ಕಲ್ಕತ್ತಾದ ಕರಾಳ ಚಿತ್ರವನ್ನು ಬಿಂಬಿಸಿದ. ಕಲ್ಕತ್ತಾದ ಈ ದುಸ್ಥಿತಿಗೆ ಕಾರಣರಾದ ಬ್ರಿಟಿಷ್ ವಸಾಹತುಶಾಹಿ ಚರಿತ್ರೆಯಾಗಲಿ, ಕಲ್ಕತ್ತಾದ ಜೀವನದ ಇತರ ಮಜಲು ಗಳಾಗಲಿ, ಅದೇ ಆಗ ಕಲ್ಕತ್ತಾ ಬಡಜನರ ಹೋರಾಟಗಳ ಹೆಮ್ಮೆಯ ಕೇಂದ್ರವಾಗುತ್ತಿ ರುವುದಾಗಲೀ ಎಲ್ಲೂ ಅವನ ಚಿತ್ರಣದಲ್ಲಿ ಸುಳಿಯಲಿಲ್ಲ. ಅವನ ಚಿತ್ರಣದಿಂದ ಕಲ್ಕತ್ತಾ, ಭಾರತ ಮತ್ತು ಬಡತನದ ಗಂಧ ಗಾಳಿ ಇಲ್ಲದ ಬಿಳಿಯ ಜನ ತಿಳಿದದ್ದು ಇಷ್ಟೇ - ಕಲ್ಕತ್ತಾ ಕೋಟಿ ಜನರ ದರಿದ್ರ ನಗರ. ಮದರ್ ತೆರೆಸಾ ಎಂಬ ಯುರೋಪಿಯನ್ ಮೂಲದ ಮಹಾ ಸಂತೆ ಅವರ ಕಣ್ಣೊರೆಸುವ ಮಹಾನ್ ಕಾರ್ಯದಲ್ಲಿ ತೊಡಗಿದ್ದಾಳೆ.


ಇದರ ನಂತರ ಹಲವಾರು ಪಾಶ್ಚಿಮಾತ್ಯ ಲೇಖಕರು, ಕಲಾವಿದರು ಕಲ್ಕತ್ತಾ ಮತ್ತು ಮದರ್ ತೆರೆಸಾ ಮೇಲೆ ಚರ್ವಿತ ಚರ್ವಣದ ಪುಸ್ತಕಗಳು, ಸಾಕ್ಷ್ಯಚಿತ್ರಗಳು - ಇವುಗಳ ಸುರಿಮಳೆ ಗೈದರು. ಭಾರತ ಸರ್ಕಾರ ಸಹ 'ಮದರ್ ತೆರೆಸಾ' ರನ್ನು ಗುರುತಿಸಿದ್ದು ಆಮೇಲೆ. ಆಕೆಗೆ ಪ್ರಶಸ್ತಿ ಘೋಷಿಸಿತು. ಭಾರತ ಸರ್ಕಾರ (ಚಮತ್ಕಾರದ ಕಮಲ ಪ್ರಶಸ್ತಿ). 1971 ರಲ್ಲಿ ವ್ಯಾಟಿಕನ್ ಶಾಂತಿ ಪ್ರಶಸ್ತಿ, ಅಮೇರಿಕಾದ good samaritan ಹಾಗೂ ಕೆನೆಡಿ ಪ್ರಶಸ್ತಿ, ಬ್ರಿಟಿಷ್ ಸರ್ಕಾರದ 1973ರಲ್ಲಿ ಟೆಂಪಲ್‌ಟನ್ ಪ್ರಶಸ್ತಿ, 1975



ರಲ್ಲಿ ವಿಶ್ವ ಸಂಸ್ಥೆಯ ಪದಕ, 1979ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ - ಹೀಗೆ ಮದರ್ ತೆರೆಸಾ ಅಂತರ್ರಾಷ್ಟ್ರೀಯ ಮಾಧ್ಯಮದಲ್ಲಿ ದಂತಕಥೆಯಾದರು.

ಅದೇ ಸಮಯದಲ್ಲಿ ಕಲ್ಕತ್ತಾ ಮಾತ್ರವಲ್ಲ, ಇಡೀ ಪಶ್ಚಿಮ ಬಂಗಾಳ ರಾಜ್ಯದಲ್ಲಿ ದಟ್ಟದರಿದ್ರರು-ರೈತರು, ಕಾರ್ಮಿಕರು ಕಮ್ಯುನಿಸ್ಟ್ ನಾಯಕತ್ವದಲ್ಲಿ ತಮ್ಮ ಆರ್ಥಿಕ ಸ್ಥಿತಿಯ ಸುಧಾರಣೆಗೆ ತಮ್ಮ ರಾಜಕೀಯ ಹಕ್ಕುಗಳನ್ನು ಸಾಧಿಸುವ ಮಹಾನ್ ಹೋರಾಟದಲ್ಲಿ ತೊಡಗಿದ್ದರು. ಕಾಂಗ್ರೆಸ್ ಸರ್ಕಾರ ತನ್ನ ಎಲ್ಲ ದಮನಕಾರಿ ಹಿಂಸೆ ಬಳಸಿ ಈ ಬಡವರಿಗೆ ನಾಯಕತ್ವ ಕೊಡುತ್ತಿದ್ದ ಸಾವಿರಾರು ಕಮ್ಯುನಿಸ್ಟ್ ಕಾರ್ಯಕರ್ತರನ್ನು ಕೊಂದಿತ್ತು. ಇವರೆಲ್ಲ ದಟ್ಟ ದರಿದ್ರರ ನಿಸ್ವಾರ್ಥ ಸೇವೆ ಮಾಡುತ್ತಿದ್ದರಲ್ಲವೇ? ಸಂಖ್ಯೆಯಲ್ಲಿ ಮದರ್ ತೆರೆಸಾರವರ ಮಿಶನರಿ ಗಳ ಹಲವು ಪಟ್ಟು ಇದ್ದರು. ಅವರು ಸೇವೆ ಸಲ್ಲಿಸುತ್ತಿದ್ದದ್ದು ಇಡೀ ರಾಜ್ಯದ ಲಕ್ಷಾಂತರ ಬಡವರಿಗೆ - ಅದೂ

ದೇಶದೊಳಗೆ



- ವಿಶ್ವ

ಬಿಹಾರದಲ್ಲಿ ಭೂಮಾಲಿಕರಿಂದ ನರಮೇಧ

ದೇಶದಲ್ಲಿ ಪರಿಹಾರ ಕಾಣದಿರುವ ಭೂಹಿಡುವಳಿ ಸಮಸ್ಯೆಯಿಂದಾಗಿ ಮುಗ್ಧ ಜನರ ಹತ್ಯೆ ನಡೆಯುವ ದುಷ್ಟಪ್ರವೃತ್ತಿ ಇನ್ನೂ ಕೊನೆಗೊಂಡಿಲ್ಲ. ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಸಂದರ್ಭದಲ್ಲೂ ದೇಶ ವಿಷಾದ ಪಡಬೇಕಾದ, ನಾಚಿ ತಲೆತಗ್ಗಿಸಬೇಕಾದ ಹೇಯ ಪ್ರಕರಣವೊಂದು ಭೂಮಾಲಿಕರ ದೌರ್ಜನ್ಯಕ್ಕೆ ಕುಖ್ಯಾತವಾದ ಬಿಹಾರದಿಂದ ವರದಿಯಾಗಿದೆ.

ಬಿಹಾರದ ಭೂಮಾಲಿಕರ ಗೊಂಡಾ ಪಡೆಯಾದ ನಿಷೇಧಿತ ರಣವೀರಸೇನೆ ಸೋಮವಾರ ರಾತ್ರಿ (ಡಿಸೆಂಬರ್ 1) ಜೆಹಾನಾಬಾದ್ ಜಿಲ್ಲೆಯ ಲಕ್ಷ್ಮಣ್ ಪುರಾ ಬಾತೆ ಗ್ರಾಮದಲ್ಲಿ 61 ಜನರನ್ನು ಗುಂಡಿಕ್ಕಿ ಕೊಂದಿದೆ.

ಭೂ ಮಾಲಿಕರು ನಡೆಸಿರುವ ಈ ಪೈಶಾಚಿಕ ಕೃತ್ಯದಲ್ಲಿ ಸುಮಾರು 75 ಕ್ಕೂ ಹೆಚ್ಚು ಜನರು ಮೃತರಾಗಿರಬಹುದು ಎಂದು ಅನಧಿಕೃತ ಮೂಲಗಳು ತಿಳಿಸಿವೆ.

ಇದುವರೆಗೂ 61 ಮೃತದೇಹಗಳು ಮಾತ್ರ ಸಿಕ್ಕಿವೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಸೋಮವಾರ ರಾತ್ರಿ ಸುಮಾರು 10.30 ರಿಂದ ಮುಂಜಾನೆ 1.00 ಗಂಟೆಯವರೆಗೂ ಈ ನರಹತ್ಯೆ ನಡೆದಿದೆ ಎಂದು ಅನಧಿಕೃತ ಮೂಲಗಳು ತಿಳಿಸಿವೆ. ಜೆಹನಾಬಾದ್ ಗೆ 75 ಕಿ.ಮೀ. ದೂರದ ಈ ನತದೃಷ್ಟ ಗ್ರಾಮ ಸೋನಾ ನದಿ ತೀರದಲ್ಲಿದೆ.

ರಣವೀರ ಸೇನೆಯ ಸುಮಾರು 300 ಮಂದಿ ದುಷ್ಕರ್ಮಿಗಳು ನೆರೆಯ ಭೋಜ್ ಪುರ್ ಜಿಲ್ಲೆಯಿಂದ ಎರಡು ದೋಣಿಗಳಲ್ಲಿ ಈ ಗ್ರಾಮಕ್ಕೆ ನುಗ್ಗಿ ಮನೆಗಳಲ್ಲಿ ಮಲಗಿದ್ದ ಜನರನ್ನು ಎಬ್ಬಿಸಿದರು.

ಜನರು ಗಾಬರಿಯಿಂದ ಓಡಲಾರಂಭಿಸಿದಾಗ ದುಷ್ಕರ್ಮಿಗಳು ಅವರ ಮೇಲೆ ಗುಂಡಿನ ಮಳೆ ಸುರಿಸಿದರು. ಹಂತಕರು ಸುಮಾರು ಎರಡೂವರೆ ಗಂಟೆ ಕಾಲ ಸತತ ಗುಂಡಿನ ಮಳೆಗರೆದರು ಎಂದು ತಿಳಿದು ಬಂದಿದೆ. ಹಂತಕರು ಹಿಂತಿರುಗುವ ಮುನ್ನ ಇಬ್ಬರು ನಾವಿಕರನ್ನು ಸಹ ಗುಂಡಿಕ್ಕಿ ಕೊಂದರು.

ಸತ್ತವರಲ್ಲಿ ಅನೇಕ ಜನ ಮಹಿಳೆಯರು ಮತ್ತು ಮಕ್ಕಳೂ ಸೇರಿದ್ದಾರೆ.

ಸರ್ಕಾರ ಭೂಮಿಯೊಂದರ ವಿಷಯದಲ್ಲಿ ಭೂಮಾಲಿಕರು ಮತ್ತು ಭೂರಹಿತ ಕೃಷಿಕರ ನಡುವೆ ಇದ್ದ ವೈಷಮ್ಯವೇ ಈ ದುಷ್ಕೃತ್ಯಕ್ಕೆ ಕಾರಣ ಎಂದು ಹೇಳಲಾಗಿದೆ.

ಭೂರಹಿತ ಕೃಷಿಕರು ಉಳುಮೆ ಮಾಡುತ್ತಿದ್ದ ಸರ್ಕಾರಿ ಭೂಮಿಯನ್ನು ಇದೇ ಗ್ರಾಮದ ರಣವೀರ ಪಡೆಯ ಬೆಂಬಲಿಗರು ಬಲವಂತವಾಗಿ ಕಿತ್ತುಕೊಂಡು ಉಳುಮೆ ಮಾಡುತ್ತಿದ್ದರು. ಇದರಿಂದಾಗಿ ಎರಡು ಗುಂಪುಗಳ ಮಧ್ಯೆ ತೀವ್ರ ವಿರೋಧದ ವಾತಾವರಣ ತಲೆದೋರಿತ್ತೆಂದು ತಿಳಿದು ಬಂದಿದೆ.

ಔರಂಗಾಬಾದ್ ಜಿಲ್ಲೆಯ ದಲೇಲ್ ಚಕ್-ಬಾಘೋರ ಗ್ರಾಮದಲ್ಲಿ 1988 ರಲ್ಲಿ 42 ಜನರನ್ನು ಗುಂಡಿಕ್ಕಿ ಕೊಂದ ಘಟನೆಯ ನಂತರ ಇದೇ ಮೊದಲ ಬಾರಿಗೆ ಲಕ್ಷ್ಮಣಪುರ ಬಾತೆ ಗ್ರಾಮದಲ್ಲಿ ಇಷ್ಟೊಂದು ಪ್ರಮಾಣದ ಜನರನ್ನು ಗುಂಡಿಕ್ಕಿ ಕೊಲ್ಲಲಾಗಿದೆ.

ವ್ಯಾಪಕ ಖಂಡನೆ ಬಂಧನ, ಪರಿಹಾರಕ್ಕೆ ಸಿ.ಪಿ.ಐ(ಎಂ) ಒತ್ತಾಯ

ಭೂಮಾಲಿಕರ ಸೇನೆ ನಡೆಸಿರುವ ಮುಗ್ಧ ಜನರ ಮಾರಣಹೋಮಕ್ಕೆ ಬಿಹಾರ ಹಾಗೂ ದೇಶದ ಎಲ್ಲಾ ಕಡೆ ತೀಕ್ಷ್ಣ ಪ್ರತಿಭಟನೆ ವ್ಯಕ್ತವಾಗಿದೆ.

ಮುಗ್ಧ ಜನರ ಮಾರಣಹೋಮ ನಡೆಸಿದ ದುಷ್ಕರ್ಮಿಗಳನ್ನು ತಕ್ಷಣ ಬಂಧಿಸಬೇಕು ಹಾಗೂ ಮೃತರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಒದಗಿಸಬೇಕು ಎಂದು ಸಿ.ಪಿ.ಐ (ಎಂ) ಪಾಲಿಟ್ ಬ್ಯೂರೋ ಒತ್ತಾಯಿಸಿದೆ.

ರಾಬ್ರಿ ದೇವಿ ನೇತೃತ್ವದ ಬಿಹಾರ ಸರಕಾರದ ಒಂದು ವಿಭಾಗ ಕ್ರಿಮಿನಲ್ ಗ್ಯಾಂಗ್ ಗಳಿಗೆ ನೆರವು ಹಾಗೂ ಬೆಂಬಲ ನೀಡುತ್ತಿವೆ ಎಂದು ಪಾಲಿಟ್ ಬ್ಯೂರೋ ಹೇಳಿದೆ.

ರಾಜ್ಯದಲ್ಲಿ ಕೃಷಿಕೂಲಿಗಾರರು ಮತ್ತು ಬಡ ರೈತರ ಮೇಲೆ ಇಂತ ದೌರ್ಜನ್ಯಗಳು ಹೆಚ್ಚುತ್ತಿರುವುದಕ್ಕೆ ಪಕ್ಷ ಕಳವಳ ವ್ಯಕ್ತಪಡಿಸಿದೆ.

ಬಂದ್ ಕರೆ

ಭೂಮಾಲಿಕರು ನಡೆಸಿರುವ ದೌರ್ಜನ್ಯವನ್ನು ಪ್ರತಿಭಟಿಸಿ ಡಿಸೆಂಬರ್ 5 ರಂದು ಬಿಹಾರ ಬಂದ್ ನಡೆಸಲು 17 ಎಡ ಹಾಗೂ ಪ್ರಜಾಸತ್ತಾತ್ಮಕ ಪಕ್ಷಗಳು ಜಂಟಿಯಾಗಿ ಕರೆ ಕೊಟ್ಟಿವೆ. ಡಿ. 2 ರಂದು ನಡೆಸಿದ ತುರ್ತು ಸಭೆಯಲ್ಲಿ ಅವು ಈ ಬಗ್ಗೆ ನಿರ್ಧಾರ ಕೈಗೊಂಡವು.

ಆಳುವ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಮತ್ತು ಭೂಮಾಲಿಕರ ಸಂಘಟನೆ ನಡುವಿನ ಅಪವಿತ್ರ ಮೈತ್ರಿಗೆ ವಿರೋಧ ವ್ಯಕ್ತಪಡಿಸಲು 4 ರಂದು ಕರಾಳ ದಿನವನ್ನು ಆಚರಿಸಲೂ ಸಭೆ ನಿರ್ಧರಿಸಿತು.

ರಾಬ್ರಿದೇವಿ ಮುಖ್ಯಮಂತ್ರಿ ಸ್ಥಾನಕ್ಕೆ ತಕ್ಷಣ ರಾಜೀನಾಮೆ ನೀಡಬೇಕೆಂದು ಸಭೆ ಒತ್ತಾಯಿಸಿತು.

ಸಿಪಿಐ, ಸಿಪಿಐ(ಎಂ), ಜನತಾದಳ, ಸಮಾಜವಾದಿ ಪಕ್ಷ, ಎಸ್ ಜೆಪಿ, ಆರ್‌ಎಸ್‌ಪಿ, ಎಸ್.ಯುಸಿಐ, ಬಿಹಾರ ಬಚಾವೋ ಮೋರ್ಚಾ ಸಹಿತ 17 ಪಕ್ಷಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಭೂಪಾಲ್ ಅನಿಲ ದುರಂತ ಸಂತ್ರಸ್ತರ ಮುಗಿಯದ ಗೋಳು

ಭೂಪಾಲ್ ಅನಿಲ ದುರಂತ ಸಂಭವಿಸಿ ಡಿಸೆಂಬರ್ 3 ಕ್ಕೆ 13 ವರ್ಷ. ಜಗತ್ತಿನ ಅತ್ಯಂತ ಭೀಕರ ಕೈಗಾರಿಕಾ ದುರಂತದಲ್ಲಿ ಸಾವಿರಾರು ಜನರು ಸತ್ತು ಇನ್ನೂ ಸಾವಿರಾರು ಜನರು ಭಯಂಕರ ರೋಗಗಳಿಗೆ ತುತ್ತಾಗಿದ್ದಾರೆ. ಅಪಘಾತ ಸಂಭವಿಸಿ 13 ವರ್ಷಗಳ ನಂತರವೂ ಅಪಾಯಕಾರಿ ಅನಿಲ ದೇಹ ಸೇರಿದ್ದಕ್ಕಾಗಿ ಉಂಟಾಗಿರುವ ನಾನಾ ರೋಗ-ಸಮಸ್ಯೆಗಳಿಗೆ ಪ್ರತಿತಿಂಗಳೂ ಸರಾಸರಿ 10 ರಿಂದ 15 ಜನರು ಸಾಯುತ್ತಿದ್ದಾರೆ.

ಯೂನಿಯನ್ ಕಾರ್ಬೈಡ್ ನಿಗಮದ (ಯುಸಿಸಿ) ಈ ದುರಂತದಿಂದ ಪೀಡಿತರಾಗಿರುವವರ ಸಂಖ್ಯೆ ಸುಮಾರು 1,50,000 ಎಂದು ಅಂದಾಜು ಮಾಡಲಾಗಿದೆ. ಪರಿಸ್ಥಿತಿಯ ಭೀಕರತೆ ಹೀಗಿದ್ದರೂ ಆ ಬಹುರಾಷ್ಟ್ರೀಯ ಕಂಪೆನಿಯಾಗಲೀ, ಸ್ವತಃ ಭಾರತ ಸರಕಾರದ ಸಂಸ್ಥೆಗಳಾಗಲಿ ಸಂತ್ರಸ್ತರಿಗೆ ಪರಿಹಾರ ನೀಡುವಲ್ಲಿ ವಿಫಲವಾಗಿವೆ. ಪೀಡಿತರಿಗೆ ಸೂಕ್ತ ವೈದ್ಯ ಚಿಕಿತ್ಸೆ ಕೊಡಿಸುವಲ್ಲಿಯೂ ಮೀನ ಮೇಷ ಎಣಿಸಲಾಗುತ್ತಿದೆ. ಈ ಎಲ್ಲದಕ್ಕೆ ಕಳಸವಿಟ್ಟಂತೆ, ಪರಿಹಾರನಿಧಿಯ ದುರುಪಯೋಗ ಆಗುತ್ತಿರುವುದು ತೀರಾ ನಾಚಿಕೆಗೇಡಿನ ಸಂಗತಿ. ಮಾನವೀಯತೆಯನ್ನೇ ಮರೆತು ನಡೆಯುವಂತ ಹೇಯ ಕೃತ್ಯ ಇದಾಗಿದೆ.

ವಿಷಾನಿಲ ಪೀಡಿತರ ಪರಿಹಾರ ಹಾಗೂ ದುರಾಡಳಿತ ಹಾಗೂ ಅಪವ್ಯಯ ಆಗುತ್ತಿರುವ ಬಗ್ಗೆ ತನಿಖೆ ನಡೆಸಲು ಆಯೋಗವೊಂದನ್ನು ರಚಿಸುವಂತೆ (ಬಿಜಿಪಿಎಂಯುಎಸ್) ಒತ್ತಾಯಪಡಿಸಿದೆ. ಒಟ್ಟು 13 ಬೇಡಿಕೆಗಳನ್ನು ಸಂಘಟನೆ ಮುಂದಿಟ್ಟಿದೆ.

ದುರಂತದಲ್ಲಿ ಬದುಕುಳಿದವರ ಬದುಕುವ ಹಕ್ಕನ್ನು ಸರಕಾರದ ಸಂಸ್ಥೆಗಳು ನಗ್ನವಾಗಿ ಉಲ್ಲಂಘಿಸಿವೆ ಎಂದು ಸಂಘಟನೆಯ ಸಂಚಾಲಕ ಅಬ್ದುಲ್ ಜಬ್ಬಾರ್ ಹೇಳಿದ್ದಾರೆ. ವಿಷಾನಿಲದಿಂದ ತೀವ್ರವಾಗಿ ಪೀಡಿತರಾಗಿರುವವರಿಗೆ ಅಗತ್ಯವಾದ ದೀರ್ಘಕಾಲೀನ ಚಿಕಿತ್ಸೆ ಒದಗಿಸುವ ಜವಾಬ್ದಾರಿಯಿಂದ ಸರಕಾರ ನುಣಿಚಿಕೊಂಡಿದೆ. ಈ ಹೊಣೆಯನ್ನು ಯು.ಸಿ.ಸಿ. ಗೆ ವಹಿಸಿರುವುದರಿಂದ ಈ ಅಂಶ ಸ್ಪಷ್ಟವಾಗುತ್ತದೆ ಎಂದವರು ತಿಳಿಸಿದ್ದಾರೆ.

ಭೂಪಾಲ್‌ನಲ್ಲಿನ ಆರೋಗ್ಯ ರಕ್ಷಣೆಯ ಆಡಳಿತವನ್ನು ಯುಸಿಸಿ ಸ್ಥಾಪಿಸಿದ ಭೂಪಾಲ್ ಆರೋಗ್ಯ ದತ್ತಿ (ಬಿ.ಎಚ್.ಟಿ) ವಹಿಸಿಕೊಳ್ಳಲು ಸಜ್ಜಾಗಿದೆ. ಸಮುದಾಯಿಕ ಆಸ್ಪತ್ರೆಗಳನ್ನು ಕೂಡ ಬಿ.ಎಚ್.ಟಿ ಗೆ ವಹಿಸಿಕೊಟ್ಟು, ಕೈತೊಳೆದುಕೊಳ್ಳಲು ಸರಕಾರ ಕ್ರಮಕ್ಕೆಗೊಳ್ಳುತ್ತಿದೆ. ರೆಡ್ ಕ್ರಾಸ್ ಕ್ಲಿನಿಕ್‌ಗಳನ್ನು ಕೂಡ ಬಿ.ಎಚ್.ಟಿ ವಹಿಸಿಕೊಳ್ಳುವ ಸಂಭವವಿದೆ.

ವೈದ್ಯಕೀಯ ಮಾಹಿತಿಯನ್ನು ಯು.ಸಿ.ಸಿ. ತಡೆಹಿಡಿದಿರುವುದು ಹಾಗೂ ಹಣಕಾಸು ನೆರವನ್ನು ನಿಲ್ಲಿಸಿದ್ದರಿಂದ ರೆಡ್ ಕ್ರಾಸ್ ಕ್ಲಿನಿಕ್‌ಗಳು ಮುಚ್ಚಿರುವುದು ಪೀಡಿತರಿಗೆ ಸೂಕ್ತ ಚಿಕಿತ್ಸೆ ಸಿಗುವಲ್ಲಿ ಅಡ್ಡಿಯನ್ನುಂಟುಮಾಡಿರುವ ಅಂಶಗಳಾಗಿವೆ.

ಸರಕಾರದ ನಿರ್ಲಜ್ಜ ಕ್ರಮ

ದುರಂತ ಪೀಡಿತರಿಗೆ ಪರಿಹಾರ ಸಿಗುವುದಕ್ಕಿಂತ ಅವರಿಗೆ ಆಘಾತದ ಮೇಲೆ ಆಘಾತ ನೀಡಲಾಗುತ್ತಿದೆ. ವಿಷಾನಿಲ ದುರಂತ ಪರಿಹಾರ ಇಲಾಖೆಯನ್ನು ವಿಸರ್ಜಿಸಲು ಮಧ್ಯಪ್ರದೇಶ ಸರಕಾರ ಯೋಚಿಸುತ್ತಿರುವುದು ನಿಜಕ್ಕೂ ದುರಂತದ ವಿರೋಧಾಭಾಸ ಆಗಿದೆ. ಈ ವರ್ಷದ ಮಧ್ಯಭಾಗದಲ್ಲಿ ನಡೆದ ರಾಜ್ಯಸಮಿತಿ ಸಭೆ ಈ ಸಿಟ್ಟಿನಲ್ಲಿ ವಿಚಾರ ಮಾಡಿತು.

ಸಂತ್ರಸ್ತರನ್ನು ನಿರ್ಲಕ್ಷಿಸುವಲ್ಲಿ ಭಾರತ ಸರಕಾರವೂ ಹಿಂದೆ ಬಿದ್ದಿಲ್ಲ! ಕೇಂದ್ರ ನೀಡುತ್ತಿದ್ದ ನಿಧಿಯಲ್ಲಿ ಈಗೀಗ ಭಾರೀ ಕಡಿತ ಆಗುತ್ತಿದೆ. ಹಿಂದೆ ಕೊಡುತ್ತಿದ್ದ ಹಣದ ಶೇಕಡ 20 ಕ್ಕಿಂತ ಕಡಿಮೆ ಮೊತ್ತವನ್ನು ಕೊಡಲು ಶುರುಮಾಡಿದೆ. ಸರಕಾರಿ ವೈದ್ಯಕೀಯ ಸೌಲಭ್ಯವೂ ಹದಗೆಡುತ್ತಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಸಿಗುತ್ತಿಲ್ಲ. ಬಹುತೇಕ ವೈದ್ಯಕೀಯ ಸಾಧನ ಸಲಕರಣೆಗಳು ಬಳಕೆಯಾಗದೆ ಬಿದ್ದಿವೆ ಅಥವಾ ಹಾಸಿಗೊಂಡಿವೆ. ಈ ನಡುವೆ, ತಮ್ಮ ಉದ್ಯೋಗಗಳನ್ನು ಖಾಯಂ ಗೊಳಿಸುವಂತೆ ವೈದ್ಯಕೀಯ ಸಿಬ್ಬಂದಿ ಚಳವಳಿ ನಡೆಸಿದ್ದಾರೆ.

ವಿಷಾನಿಲ ದುರಂತದ ಪ್ರಮುಖ ಆರೋಪಿ ಯುಸಿಸಿಯ ಮಾಜಿ ಅಧ್ಯಕ್ಷ ವಾರನ್ ಆಂಡರ್ಸನ್ ಕಾನೂನಿನ ಹಿಡಿತದಿಂದ ಇನ್ನೂ ತಪ್ಪಿಸಿಕೊಂಡಿದ್ದು ಅವರನ್ನು ಭಾರತಕ್ಕೆ ಕರೆತರುವಲ್ಲಿ ಸರಕಾರ ವಿಫಲವಾಗಿದೆ.

ದೆಹಲಿ ರಾಜ್ಯ ಸಮ್ಮೇಳನ

ಸಿಪಿಐ(ಎಂ) ದೆಹಲಿ ರಾಜ್ಯದ 9ನೇ ಸಮ್ಮೇಳನ ನವೆಂಬರ್ 16 ರಿಂದ 18 ರವರೆಗೆ ನಡೆಯಿತು. ಪ್ರಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಉದ್ಘಾಟಿಸಿದರು. ದಿವಂಗತ ಸಂಗಾತಿ ವೇದಗುಪ್ತಾ ಅವರ ಹೆಸರಿಡಲಾಗಿದ್ದ ಸ್ಥಳದಲ್ಲಿ ಪಕ್ಷದ ಹಾಗೂ ಟ್ರೇಡ್ ಯೂನಿಯನ್ ನಾಯಕ ಎಸ್.ಬಿ. ಭಾರದ್ವಾಜ್ ಧ್ವಜಾರೋಹಣ ಮಾಡಿದರು. 25 ಮಹಿಳೆಯರ ಸಹಿತ 151 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಸಮ್ಮೇಳನದ ಕೊನೆಯ ದಿನ ರಸೋಲ್ ಭಾಗ್ ನ ಹಾಥಿವಾಲಾ ಚೌಕದಲ್ಲಿ ಬಹಿರಂಗ ಸಭೆ ನಡೆಯಿತು. ಕೇಂದ್ರ ಸಮಿತಿ ಸದಸ್ಯ ಜೋಗೇಂದ್ರ ಶರ್ಮಾ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಪಾಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಮುಖ್ಯ ಭಾಷಣಕಾರರಾಗಿದ್ದರು. ರಾಜ್ಯಸಮಿತಿಯ ಹೊಸ ಕಾರ್ಯದರ್ಶಿ ಪುಷ್ಪೇಂದ್ರ ಸಿಂಗ್ ಅಗ್ರವಾಲ್ ಅವರೂ ಮಾತನಾಡಿದರು.

ಅನಾರೋಗ್ಯದಿಂದ ನಿರ್ಗಮಿಸಿದ ಕಾಂ. ಜೋಗೇಂದ್ರಸಿಂಗ್ ಅವರ ಸ್ಥಾನದಲ್ಲಿ ಕಾಂ. ಪುಷ್ಪೇಂದ್ರ ಸಿಂಗ್ ಹೊಸ ಕಾರ್ಯದರ್ಶಿಯಾಗಿ ಚುನಾಯಿತರಾದರು. ಅವರಲ್ಲದೆ ಜೋಗೇಂದ್ರ ಶರ್ಮಾ, ಎಸ್.ಬಿ. ಭಾರದ್ವಾಜ್, ಬೃಂದಾ ಕಾರಟ್, ಮೋಹನ್ ಲಾಲ್ ಮತ್ತು ಕೆ.ಎಂ.ತಿವಾರಿ ಅವರುಳ್ಳ ಆರು ಸದಸ್ಯರ ಕಾರ್ಯದರ್ಶಿ ಮಂಡಳಿ ಪುನರಾಯ್ಕೆಗೊಂಡಿತು.

ಮದರ್ ತೆರೆಸಾ..........

ಪುಟ 5 ರಿಂದ

ಇನ್ನೂ ಹೆಚ್ಚು ಮೂಲ ಭೂತ ರೀತಿಯಲ್ಲಿ ಅವರು ಕಣ್ಣೀರೊರೆಸುತ್ತಿದ್ದದ್ದು ಮಾತ್ರವಲ್ಲ, ಬಡತನದ ವಿನಾಶ ಮಾಡುವ ಕೆಲಸಕ್ಕೆ ಶಾಶ್ವತ ಬುನಾದಿ ಹಾಕಲಾರಂಭಿಸಿದರು. ಬಡತನದ ವಿನಾಶದ ಪ್ರಯತ್ನದಲ್ಲಿ ಕಮ್ಯುನಿಸ್ಟರ ಪಾತ್ರದ ಬಗ್ಗೆ ಗಾಢ ಮಾನ ಆಚರಿಸದೆ, ಮದರ್ ತೆರೆಸಾ ದಂತ ಕಥೆಯಾಗಲು ಸಾಧ್ಯವಿಲ್ಲದ್ದರಿಂದ ಈ ಎಲ್ಲಾ ಪುಸ್ತಕಗಳು ಸಾಕ್ಷ್ಯ ಚಿತ್ರಗಳು ಆ ಬಗ್ಗೆ ಮಾನವಾಗಿದೆ.

ಬಡತನದ 'ಸೌಂದರ್ಯ' ದ ಆರಾಧಕರು

1994 ರಲ್ಲಿ ಮದರ್‌ತೆರೆಸಾ ಆಶ್ರಮಗಳಿಗೆ ಭೇಟಿ ನೀಡಿದ ಡಾಕ್ಟರ್ ರಾಬಿನ್ ಫಾಕ್ಸ್ ಎಂಬ ವೈದ್ಯ ತಜ್ಞ ಅಲ್ಲಿ ಯಾವುದೇ ರೀತಿಯಲ್ಲಿ ರೋಗಿಗಳನ್ನು ಗುಣವಾಗಿಸಲು ಆಧುನಿಕ ತಂತ್ರಜ್ಞಾನ ಬಳಸುತ್ತಿಲ್ಲ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಗುಣಮಾಡ ಬಹುದಾದ ಕಾಯಿಲೆಗಳಿಂದ ನರಳುತ್ತಿರುವ ರೋಗಿಗಳನ್ನು ಮರಣಾಂತಿಕ ಕಾಯಿಲೆಯ ರೋಗಿಗಳಿಂದ ಪ್ರತ್ಯೇಕಿಸುವುದಕ್ಕೂ ಆಧುನಿಕ ವೈದ್ಯಕೀಯ ತಂತ್ರಜ್ಞಾನವನ್ನು ಬಳಸ ಲಾಗುತ್ತಿಲ್ಲ. 1948 ರಲ್ಲಿ ಮದರ್‌ತೆರೆಸಾ ಸ್ವತಃ ಕೆಲವುತಿಂಗಳು ವೈದ್ಯಕೀಯದಲ್ಲಿ ಪಾಟ್ನಾದಲ್ಲಿ ತರಬೇತಿ ಪಡೆದಿದ್ದು ಬಿಟ್ಟರೆ ಇತರ ಯಾವ ಸಿಸ್ಟರ್‌ಗಳು ತರಬೇತಿ ಪಡೆದಿಲ್ಲ. ಮಲೇರಿಯಾದಂತಹ ರೋಗಿಗಳನ್ನು ಇತರ ರೋಗಿಗಳಿಂದ ಪ್ರತ್ಯೇಕಿಸುವ ಪ್ರಯತ್ನವೂ ಇಲ್ಲ. ಆಶ್ರಮದಲ್ಲಿ ವಿಚಾರಿಸಲಾಗಿ ಮದರ್ ಹಾಗೂ ಸಿಸ್ಟರ್‌ಗಳು ಇಂತಹ ಭೌತಿಕ ವಿಚಾರಗಳಲ್ಲಿ ಆಶ್ರಮ ತೊಡಗಿಸಿ ಕೊಳ್ಳುವುದಿಲ್ಲ ಎಂದರು. ಆಶ್ರಮದ ರೋಗಿಗಳಿಗ ಪ್ರೇಮದ ಮುಲಾಮಿನಿಂದ ಗುಣಪಡಿಸುವ ಆಧ್ಯಾತ್ಮಿಕ ದಾರಿಯ ಪರಿಣಾಮಕಾರಿತ್ವದ ಬಗ್ಗೆ ನನಗೆ ಅನುಮಾನವಿದೆ. ಆದರೆ ಈ ದಾರಿಯಲ್ಲಿ ಯಾವುದೇ ಭೌತಿಕ ಪರಿಹಾರ ಸೇರಿಲ್ಲದಿರುವುದು ನನಗೆ ಖೇದ ವುಂಟುಮಾಡಿದೆ ಎನ್ನುತ್ತಾರೆ ಡಾಕ್ಟರ್ ರಾಬಿನ್ ಫಾಕ್ಸ್ ಪತ್ರಿಕೆಗೆ ಬರೆದ ಲೇಖನವೊಂದರಲ್ಲಿ. "ನಾನು ಕಂಡ ಹಾಗೆ ಇಲ್ಲಿ ಆಶ್ರಮವಾಸಿಗಳಿಗೆ ಪರಿಹಾರದ ಪ್ರಶ್ನೆಯೇ ಬರುವುದಿಲ್ಲ" ಅದೊಂದು ಸಾವು, ನೋವು ಹಾಗೂ ಅಧೀನವಾಗಿ ರುವವರ ಮೇಲೆ ಆಧಾರಿತ ಪಂಥ..... ಅಸಹಾಯಕ ಮಕ್ಕಳು, ನಿರ್ಗತಿಕರು, ಕುಷ್ಠರೋಗಿಗಳು, ಮರಣಾಂತಿಕ ಕಾಯಿಲೆ ಇರುವವರು ಅನುಕಂಪ ತೋರಿಸಲಿಕ್ಕಾಗಿಯೇ ಆಯ್ಕೆ ಯಾದ ಕಚ್ಚಾ ಸಾಮಗ್ರಿಗಳು. ಅವರು ಯಾವುದಕ್ಕಾಗಿಯೂ ದೂರುವ ಸ್ಥಿತಿಯಲ್ಲಿ ಇಲ್ಲ. ಅವರ ನಿಷ್ಕ್ರಿಯತೆ ಮತ್ತು ಅಸಹಾಯಕತೆಯನ್ನೇ ದೊಡ್ಡ ಸದ್ಗುಣವೆಂದು ಪರಿಗಣಿಸಲಾಗುತ್ತಿದೆ" ಎಂದು ಡಾಕ್ಟರ್ ರಾಬಿನ್ ಫಾಕ್ಸ್‌ರವರು ಮದರ್ ತೆರೆಸಾ ಆಶ್ರಮದ ಬಗೆಗಿನ ಉದ್ಗಾರ.

ಬಡತನ, ಅಸಹಾಯಕತೆಯನ್ನು ಆರಾಧಿಸುವುದು ಮದರ್‌ತೆರೆಸಾರವರು ಕಂಡಂತೆ ಕ್ರಿಶ್ಚಿಯನ್ ಧರ್ಮ ಹಾಗೂ ಗಾಂಧೀಜಿಯವರಿಗೆ ಸಾಮಾನ್ಯವಾದ ವಿಚಾರ. ಬಡಜನರು ಆಧ್ಯಾತ್ಮಿಕವಾಗಿ ಆಶೀರ್ವದಿತರು. ಆದ್ದರಿಂದ ಬಡತನದ ಮೂಲ ಶೋಧಿಸಿ, ಅದನ್ನು ಹೋಗಲಾಡಿಸುವುದು ಮದರ್ ಹಾಗೂ ಗಾಂಧೀಜಿ ಯವರ ಆಧ್ಯಾತ್ಮಿಕ ದಾರಿಯಲ್ಲಿ ಮುಖ್ಯವಾಗುವುದಿಲ್ಲ. ಬಡವರ ಸೇವೆಯಲ್ಲಿ ಸಂತೃಪ್ತಿಯನ್ನು ಕಾಣುವುದು ಬಡತನದ "ಸಂತೋಷ" ವನ್ನು, 'ಸೌಂದರ್ಯ' ವನ್ನು ಆರಾಧಿಸುವುದೇ ಈ ಇಬ್ಬರ ಧೋರಣೆಯ ಸಾರ. ಬಡವರು ದಾನ ಧರ್ಮವನ್ನು ಸ್ವೀಕರಿಸುವ ಮೂಲಕ ತಾವು ಧನ್ಯಗೊಳ್ಳುತ್ತಾರೆ, ಆರಾಧಕರನ್ನೂ ಧನ್ಯಗೊಳಿಸುತ್ತಾರೆ!

ಮದರ್ ತೆರೆಸಾರ ಜಾಗದಲ್ಲಿ 'ಸಿಸ್ಟರ್ ಆಫ್ ಚಾರಿಟಿಸ್' ನಾಯಕತ್ವ ವಹಿಸಿದ ಸಿಸ್ಟರ್ ನಿರ್ಮಲಾ-'ಬಡತನ ಯಾವಾಗಲೂ ಇರುತ್ತದೆ. ಬಡವರು ಬಡತನವನ್ನು ಸರಿಯಾದ ರೀತಿಯಲ್ಲಿ ನೋಡಬೇಕೆಂದು ಬಯಸುತ್ತೇವೆ. ಬಡತನವನ್ನು ಅವರು ಒಪ್ಪಿಕೊಳ್ಳಬೇಕು. ದೇವರು ಅವರ ಅವಶ್ಯಕತೆಯನ್ನು ಪೂರೈಸುತ್ತಾನೆ ಎಂದು ನಂಬಬೇಕು" ಎನ್ನುತ್ತಾರ

ಬಡತನವನ್ನು ಒಪ್ಪಿಕೊಳ್ಳುವುದು, ಅದರ ಮೂಲದ ಬಗ್ಗೆ ಹಾಗೂ ಅದನ್ನು ಹೋಗಲಾಡಿಸುವ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನೇ ಪ್ರಶ್ನಿಸುವುದು, ಅದನ್ನು ಆರಾಧಿಸುವುದು, ವೈಭವೀಕರಿಸುವುದು - ಬಡತನವನ್ನು ಸೃಷ್ಟಿಸುವ ಎಲ್ಲಾ ವರ್ಗ ವ್ಯವಸ್ಥೆಯ ಸಂರಕ್ಷಕರಿಗೆ (ಪಾಳೆಯಗಾರಿ ಇರಲಿ, ಬಂಡವಾಳಶಾಹಿ ಇರಲಿ) ಅತ್ಯಂತ ಪ್ರಿಯವಾದ ಸಿದ್ಧಾಂತ ಆಗುವುದು ಸಹಜ.

ಪ್ರಗತಿಪರ 'ಲಿಬರಲ್ ಥಿಯೋಲಾಜಿ' ಗೆ ವಿರೋಧವೇಕೆ?

ಮದರ್ ತೆರೆಸಾರವರ ಈ ನೀತಿ ಕ್ರಿಶ್ಚಿಯನ್ ಧಾರ್ಮಿಕ ಕಾರ್ಯಕರ್ತರ ಸಾಮಾನ್ಯ ನೀತಿ ಎಂದು ತಿಳಿಯಬಾರದು. ಮದರ್‌ತೆರೆಸಾರವರ ಈ ನೀತಿಗೆ ವಿರುದ್ಧವಾದ, ಹಲವು ತೊರೆಗಳು ಕ್ರಿಶ್ಚಿಯನ್ ಧರ್ಮದಲ್ಲಿವೆ. 60ರ ದಶಕದಲ್ಲಿ ಪೋಪ್ ಆಗಿದ್ದ ಜಾನ್ 23, 'ಮನುಷ್ಯನ ದೈನಂದಿನ ಜೀವನ, ಕೆಲಸ, ಲೌಕಿಕ ಕಲ್ಯಾಣ ಚರ್ಚ್‌ನ ಕಾಳಜಿ ಆಗಿರಬೇಕು ಎಂಬ ನೀತಿ ಪ್ರತಿಪಾದಿಸಿದರು. 1981 ರಲ್ಲಿ ಪೋಪ್ ಆಗಿದ್ದ ಲಿಯೋ 23 ರವರು 'ಬಂಡವಾಳ ಶಾಹಿ ಕೆಲವರಲ್ಲಿ ಭಾರಿ ಶ್ರೀಮಂತಿಕೆ ಕೂಡಿಹಾಕುವ ಹಲವರನ್ನು ಬಡತನಕ್ಕೆ ತಳ್ಳುವ ಅನೈತಿಕ ವ್ಯವಸ್ಥೆ' ಎಂದಿದ್ದನ್ನು ಪ್ರಚಾರಕ್ಕೆ ತಂದಿದ್ದರು. ಮದರ್ ತೆರೆಸಾರವರು ಪೋಪ್ ಜಾನ್ 23 ರ ಈ 'ಲೌಕಿಕ ನೀತಿ'ಯನ್ನು ಬಲವಾಗಿ ವಿರೋಧಿಸಿದ್ದರು.

ಪೋಪ್ ಜಾನ್ 23 ರವರು ಚರ್ಚನ್ನು ಬಡವರ ಪರವಾದ ಸಾಮಾಜಿಕ ನ್ಯಾಯದ ಬಗ್ಗೆ ಕಾರ್ಯಾಚರಣೆಯ ಭಾಗವಾಗುವ ಪ್ರಯತ್ನ ಮಾಡಲಿಲ್ಲ. ಅದರರ್ಥ ಅವರು ಬಡತನದ ಮೂಲ ಶೋಧಿಸಿ ಅದರ ನಿರ್ನಾಮಕ್ಕೆ ಕರೆಕೊಡಲು ಹೋಗಲಿಲ್ಲ.

ಆದರೆ ಜಾಗತಿಕ ಚರ್ಚ್‌ನ ಇನ್ನೊಂದು ಭಾಗ ಪೋಪ್ ಜಾನ್ 23 ರ ನೀತಿಗಿಂತ ಬಹುಮುಂದೆ ಹೋಗಿ ಬಡತನದ ನಿರ್ಮೂಲನವನ್ನು ತನ್ನ ಗುರಿಯಾಗಿಸಿತು. ದಕ್ಷಿಣ ಅಮೆರಿಕಾದಲ್ಲಿ 60 ರ ದಶಕದಲ್ಲಿ 'ಲಿಬರೇಶನ್ ಥಿಯೋಲಜಿ' (ವಿಮೋಚನಾ ಧರ್ಮಶಾಸ್ತ್ರ) ಎಂದು ಹೆಸರಾದ ಈ ನೀತಿ ಜನಪ್ರಿಯವಾಗಿತ್ತು. ಕೊಲೆ ಮಾಡಲ್ಪಟ್ಟ ಎಲ್‌ಸಾಲ್ವಡೊರ್‌ನ ಆರ್ಚ್‌ಬಿಷಪ್ ಓಸ್ಕರ್ ರೊಮೆರೊ ಇವರಲ್ಲಿ ಪ್ರಮುಖರಾಗಿದ್ದರು. ದಕ್ಷಿಣ ಅಮೆರಿಕದ ಹಲವು ದೇಶಗಳಲ್ಲಿ ಪ್ರಚಲಿತವಾದ ಈ ಪಂಥ ಕಮ್ಯುನಿಸ್ಟರೊಂದಿಗೆ ರಾಷ್ಟ್ರವಾದಿ ವಿಮೋಚನಾ ಹೋರಾಟದಲ್ಲಿ ಹಲವುಕಡೆ ಸಶಸ್ತ್ರ ಹೋರಾಟದಲ್ಲಿಯೂ ಭಾಗವಹಿಸಲು ಹಿಂಜರಿಯಲಿಲ್ಲ. 'ಕೆಥೊಲಿಕರಿಗೂ ಕಮ್ಯುನಿಸ್ಟರಿಗೂ ಏನೂ ವ್ಯತ್ಯಾಸವಿಲ್ಲ' ಎಂದು ಗ್ವಾಟೆಮಾಲಾದ ಮಿಲಿಟರಿ ಸರ್ಕಾರ ಹೇಳುವಷ್ಟು ಪ್ರಬಲವಾಗಿತ್ತು ಈ ಪಂಥ. ನಿಕರಾಗುವದ ಸ್ಯಾಂಡಿನಿಸ್ತಾ ಚಳುವಳಿ ಯಲ್ಲೂ ಇವರು ಸಕ್ರಿಯರಾಗಿದ್ದರು. ಇಲ್ಲಿ ನೆನಪಿಸಿಕೊಳ್ಳಬೇಕಾದ್ದೆಂದರೆ ಈ 'ಲಿಬರೇಶನ್ ಥಿಯೋಲಾಜಿ' ಪಂಥವನ್ನು ಮದರ್ ತೆರೆಸಾ ವಿರೋಧಿಸಿದ್ದರು.

ಪ್ರಸಕ್ತ ಪೋಪ್ ಕ್ಯಾಥೊಲಿಕ್ ಚರ್ಚನ್ನು ಇವೆಲ್ಲದ್ದರಿಂದ ದೂರ ಹೆಚ್ಚು ಸಂಪ್ರದಾಯ ಶರಣ ದಾರಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಮಹಿಳೆಯರು ಪುರೋಹಿತರಾಗುವುದು, ಗರ್ಭಪಾತ, ಕುಟುಂಬ ಯೋಜನಾ ಕ್ರಮ, ವಿವಾಹ ವಿಚ್ಛೇದನ ಇವುಗಳಿಗ ವಿರೋಧ, ಪೂರ್ವಯುರೋಪಿನ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆ ಬುಡಮೇಲು ಮಾಡುವುದರಲ್ಲಿ ಸಿಐಎ ಜತೆ ಸಹಕಾರ-ಈಗಿನ ಪೋಪ್‌ರ ವಿಶೇಷತೆ. ಮದರ್ ತೆರೆಸಾ ಈ ಪೋಪರ ಭಾರಿ ಬೆಂಬಲಿಗರು. ಐರ್ಲೆಂಡಿನಲ್ಲಿ ಸಂವಿಧಾನದಲ್ಲಿ ಮಹಿಳೆಯರ ವಿವಾಹ ವಿಚ್ಛೇದನ ಹಾಗೂ ಮರುವಿವಾಹ ಬಗೆಗಿನ ನಿಷೇಧವನ್ನು ತೆಗೆದುಹಾಕುವ ಬಗ್ಗೆ ನಡೆದ ಜನಮತ ಸಂಗ್ರಹ ಮಹಿಳಾ ಚಳುವಳಿಯ ನೀತಿ ಯನ್ನು ಎತ್ತಿಹಿಡಿದು, ಮದರ್ ತೆರೆಸಾರ ಸಂಪ್ರದಾಯ ಶರಣತೆಯನ್ನು ತಿರಸ್ಕರಿಸಿತ್ತು. ನ್ಯೂಯಾರ್ಕ್‌ನಲ್ಲಿ 1994 ರಲ್ಲಿ ನಡೆದ ಕ್ಯಾಥೊಲಿಕ್ ಸಮಾರಂಭ ವೊಂದರಲ್ಲಿ ವಿಶ್ವಶಾಂತಿಗೆ ಇಂದು ಅತಿ ದೊಡ್ಡ ಅಪಾಯ ಗರ್ಭಪಾತದಿಂದ ಎಂಬ ಅಣಿಮುತ್ತು ಉದುರಿಸಿದ್ದರು ಮದರ್.

ಹಗರಣಕೋರರನ್ನು ಭೂಪಾಲ್ ಹಂತಕರನ್ನು ಕ್ಷಮಿಸಿ"!

ಹೆಚ್ಚಿನ ಸ್ವಯಂಸೇವಾ ಸಂಘಟನೆ ಗಳಂತೆ ಮದರ್ ತೆರೆಸಾರ ಸಂಘಟನೆ ಸಹ ಶ್ರೀಮಂತರ, ಭಾರಿ ಕಂಪನಿಗಳ, ಸರ್ಕಾರಗಳ ದಾನದ ಮೇಲೆ ಅವಲಂಬಿಸಿದೆ. ಮದರ್ ತೆರೆಸಾ ಸಂಘಟನೆಗಳಿಗೆ ದಾನ ಮಾಡುವವರ ಪಟ್ಟಿ, ಬಡವರನ್ನು ತುಳಿಯುವವರಿರುವ ಹಗರಣಕೋರರಿಂದ ತುಂಬಿ ತುಳುಕುತ್ತಿದೆ. ಇದರಲ್ಲಿ ಚಾರ್ಲ್ಸ್ ಕೀಟಿಂಗ್ ಎಂಬ ಹೆಸರು ಗಮನಾರ್ಹ. ಈತ ಅಮೆರಿಕದ 'ಲಿಂಕನ್ ಉಳಿತಾಯ ಹಾಗೂ ಸಾಲದ ಸಂಸ್ಥೆ' ಯ ಮಾಲಿಕ. ಈತ ಮದರ್ ತೆರೆಸಾ ಸಂಘಟನೆಗೆ 12.5 ಲಕ್ಷ ಡಾಲರುಗಳಷ್ಟು ದಾನ ಮಾಡಿದ್ದ. ತನ್ನ ಖಾಸಗಿ

ಪುಟ 7

ಪಾಕಿಸ್ತಾನಿ ಅಧ್ಯಕ್ಷರ ರಾಜೀನಾಮೆ - ಪ್ರಧಾನಿ ಕೈಮೇಲು

ಪಾಕಿಸ್ತಾನದ ರಾಜಕೀಯ ಸಂವಿಧಾನಿಕ ಬಿಕ್ಕಟ್ಟು, ತೀರಾ ಉಲ್ಬಣಗೊಂಡು ಒಂದು ರೀತಿಯ ಪರಿಹಾರ ಕಂಡಿದೆ. ಪ್ರಧಾನಿ ನವಾಜ್ ಶರೀಫ್ ಮತ್ತು ಅಧ್ಯಕ್ಷರು ಹಾಗೂ ಸುಪ್ರೀಂ ಕೋರ್ಟು ಮುಖ್ಯ ನ್ಯಾಯ ಮೂರ್ತಿಗಳ ನಡುವೆ ನಡೆಯುತ್ತಿದ್ದ ಹಣಾಹಣಿ ಪ್ರಧಾನಿ ಕೈಮೇಲಾಗುವುದ ರೊಂದಿಗೆ ಕೊನೆಗೊಂಡಿದೆ. ಅಧ್ಯಕ್ಷ ಲೆಘಾರಿಯವರು ರಾಜೀನಾಮೆ ಕೊಟ್ಟಿದ್ದು, ಮುಖ್ಯ ನ್ಯಾಯಮೂರ್ತಿ ಸಜ್ಜಾಡ್ ಅಲಿ ಶಹಾ ರಜೆಯಲ್ಲಿ ಹೋಗಿದ್ದಾರೆ.

ಇದಕ್ಕಿಂತ ಮೊದಲು, ಪ್ರಧಾನಿ ಹಾಗೂ ಮುಖ್ಯ ನ್ಯಾಯಮೂರ್ತಿಗಳ ನಡುವೆ ಹಣಾಹಣಿ, ಬಹಳ ಕೆಳಮಟ್ಟಕ್ಕೆ ಹೋಗಿತ್ತು. ಪ್ರಧಾನಿ ಶರೀಫರ ವಿರುದ್ಧ ಕೋರ್ಟು ನಿಂದನೆಯ ಕೇಸು ಬರುವ ದಿನ, ಶರೀಫರ ಬೆಂಬಲಿಗರ ಒಂದು ಗುಂಪು ಕೋರ್ಟಿಗೆ ನುಗ್ಗಿ ದಾಂಧಲೆ ಮಾಡಿ, ಕೇಸು ಮುಂದಕ್ಕೆ ಹೋಗುವಂತೆ ಒತ್ತಾಯಿಸಿತು. ಮುಖ್ಯ ನ್ಯಾಯಮೂರ್ತಿ ಸಹ ತನ್ನ ಸ್ಥಾನದ ಘನತೆ ಕಾಯ್ದುಕೊಳ್ಳದೆ, ರಕ್ಷಣೆಗೆ ಸೈನ್ಯಕ್ಕೆ ಮತ್ತು ಅಧ್ಯಕ್ಷರಿಗೆ ಮನವಿ ಕಳಿಸಿದ್ದರು. ಕೋರ್ಟುನಿಂದನೆ ಕಾನೂನಿನಲ್ಲಿ, ಪ್ರಧಾನಿಗೆ ಇದರಿಂದ ವಿನಾಯಿತಿ ನೀಡುವ ತಿದ್ದುಪಡಿಗೆ ಸಹಿ ಹಾಕದಂತೆ ಅಧ್ಯಕ್ಷರಿಗೆ ಸಾರ್ವಜನಿಕವಾಗಿ ಹೇಳಿದ್ದರು. ಶರೀಫ ಸಹ ಸುಮ್ಮನಿರಲಿಲ್ಲ. ಅವರ ಬೆಂಬಲಿಗರ ಕೈಯಲ್ಲಿ, ಬೆನಜಿರ್ ಸರ್ಕಾರ ಇತರ ನಾಲ್ಕು ನ್ಯಾಯಮೂರ್ತಿಗಳ ಸೀನಿಯಾರಿಟಿ ನಿರ್ಲಕ್ಷಿಸಿ, ಶಹಾರವರನ್ನು ಮುಖ್ಯ ನ್ಯಾಯಮೂರ್ತಿಗಳನ್ನಾಗಿ ನೇಮಿಸಿದ್ದನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದರು. ಇದನ್ನು ಕೈಗೆತ್ತಿಕೊಂಡ ನಾಲ್ಕು ನ್ಯಾಯಾಧೀಶರ ನ್ಯಾಯಪೀಠ ಇದರ ವಿಚಾರಣೆ ಆಗುವವರೆಗೆ ಶಹಾ ಮುಖ್ಯ ನ್ಯಾಯಾಧೀಶರಾಗಿ ಕೆಲಸ ಮಾಡಬಾರದು ಎಂದು ಅವರನ್ನು ಅಮಾನತ್ತಿನಲ್ಲಿರಿಸಲು ಆಜ್ಞೆ ನೀಡಿತು. ಶಹಾ ಆ ನ್ಯಾಯಾಪೀಠವನ್ನು ವಿಸರ್ಜಿಸಿ ಆಜ್ಞೆ ಹೊರಡಿಸಿದರು. ಅಲ್ಲದೆ ಶರೀಫ ಸರ್ಕಾರ, ವಜಾ ಮಾಡುವ ಅಧ್ಯಕ್ಷರ ಅಧಿಕಾರವನ್ನು ಮೊಟಕು ಮಾಡಿದ್ದ 13 ನೇ ತಿದ್ದುಪಡಿಯನ್ನು ರದ್ದು ಮಾಡಿ ಆಜ್ಞೆ ಹೊರಡಿಸಿದರು. ಇದು ಅಧ್ಯಕ್ಷ ಲೆಗಾರಿಗೆ, ಶರೀಫರ ಸರ್ಕಾರವನ್ನು ರದ್ದು ಮಾಡಲು ಅನುವು ಮಾಡಿಕೊಟ್ಟಿದ್ದು ಎಂಬುದಾಗಿ ತಿಳಿಯಲಾಗಿತ್ತು. ಈ ನಡುವೆ ಸೈನ್ಯ ಸಹಾ ಈ ಬಿಕ್ಕಟ್ಟಿನಲ್ಲಿ ಪ್ರವೇಶಿಸಿತ್ತು. ಅಧ್ಯಕ್ಷ ಲೆಗಾರಿ ವಿರುದ್ಧ ನಿಂದನೆ ಪ್ರಸ್ತಾಪ, ಪಾರ್ಲಿಮೆಂಟು ಮುಂದೆ ಕರೆಯದಂತೆ ಪ್ರಧಾನಿ ಶರೀಫರಿಗೆ ಖಾಸಗಿಯಾಗಿ ತಿಳಿಸಿದ್ದರು. ಒತ್ತಡ ಹಾಕಿದ್ದರು ಎನ್ನುವುದು ಹೆಚ್ಚು ಸರಿಯಾದೀತು. ಅಧ್ಯಕ್ಷರು ಹಾಗೂ ಮುಖ್ಯ ನ್ಯಾಯಾಧೀಶರುಗಳು ಶಾಮೀಲಾಗಿ ಶರೀಫರ ಸರ್ಕಾರದ ವಿರುದ್ಧ ಮಸಲತ್ತು ನಡೆಸುತ್ತಿದ್ದದ್ದು, ಪಾಕಿಸ್ತಾನದ ರಾಜಕೀಯವನ್ನು ಪಾತಾಳಕ್ಕೆ ಒಯ್ದಿತ್ತು. ಶರೀಫ ಸರ್ಕಾರ ಮುಖ್ಯ ನ್ಯಾಯಾಧೀಶರ ವಿರುದ್ಧ ನಿಂದನಾ ನಿರ್ಣಯ ತರಲು ತಯಾರಿ ಮಾಡಹತ್ತಿತ್ತು. ಇದಕ್ಕೆ ಬೇಕಾದ ಬಹುಮತ ತರುವುದು ಶರೀಫರ ಸರ್ಕಾರದ ಉದ್ದೇಶವಾಗಿತ್ತು. ಇದನ್ನರಿತ ಅಧ್ಯಕ್ಷರು ರಾಜೀನಾಮೆ ಕೊಟ್ಟರು. ಶಹಾ ಸಹ ರಜದ ಮೇಲೆ ಹೋಗಿದ್ದಾರೆ. ಫೆಬ್ರವರಿ-ಮಾರ್ಚ್‌ನಲ್ಲಿ ಅವರು ಹೇಗಿದ್ದರೂ, ನಿವೃತ್ತಿ ಹೊಂದಲಿರುವು ದರಿಂದ ಸರ್ಕಾರದ ಜತೆ ಗುದ್ದಾಟ ಅವರು ನಿಲ್ಲಿಸಿದ್ದಾರೆ. ಇವೆರಡು ಘಟನಗಳಿಂದ ಶರೀಫ ಸರ್ಕಾರದ ಅಭದ್ರತೆ ಹೋಗಿದೆ. ಆದರೆ ಪಾಕಿಸ್ತಾನದ ಇನ್ನೂ ಎಳಸು ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಬಲಗೊಂಡಿದೆಯೇ ಈ ಬಿಕ್ಕಟ್ಟಿನ ಪರಿಹಾರದಿಂದ? ಇಲ್ಲವೇ ಇಲ್ಲ ಎನ್ನಬಹುದು. ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗ, ಕಾರ್ಯಾಂಗ- ಮತ್ತು ಶಾಸಕಾಂಗ ಸಾಮರಸ್ಯದಿಂದ ಇದ್ದರೆ, ಅದು ಬಲವಾಗಿರುವುದು. ಈ ಅಂಗಗಳ ನಡುವೆ ಸದಾ ಘರ್ಷಣೆ ನಡೆಯುತ್ತಿದ್ದರೆ, ಅವು ಸಂವಿಧಾನಾತ್ಮಕ ನೀತಿಗಳನ್ನು ದಾಟುತ್ತಿದ್ದರೆ, ಬಲವಾದ ಪ್ರಜಾಪ್ರಭುತ್ವ ಸಾಧ್ಯವಿಲ್ಲ. ಮಿಲಿಟರಿ ಸಹ ಈ ಬಿಕ್ಕಟ್ಟಿನಲ್ಲಿ ತನ್ನದೇ ಪಾತ್ರ ವಹಿಸಿದೆ. ಅದು ತಟಸ್ಥ ಪಾತ್ರ ಎನ್ನಲಾಗದು. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರವನ್ನು, ಅಧ್ಯಕ್ಷರು ವಿಸರ್ಜಿಸಲು ಸಾಧ್ಯವಾಗಲಿಲ್ಲ ಎನ್ನುವುದೇ ಸಮಾಧಾನಕರ ವಿಷಯ.

ಲೋಕ ಸಂಚಾರ

ಶರತ್ ಚಂದ್ರ

ಏಷ್ಯಾ-ಪೆಸಿಫಿಕ್ ನ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಚಕಾರವೆತ್ತದ್ದ ಅಪೆಕ್ ಸಮ್ಮೇಳನದ ಬಗ್ಗೆ ನಿರಾಸೆ

ದಕ್ಷಿಣ-ಪೂರ್ವ ಏಷ್ಯಾದ ಹಲವು ದೇಶಗಳಲ್ಲಿ ಹಾಗೂ ದಕ್ಷಿಣ ಕೊರಿಯಾದಲ್ಲಿ ಅಭೂತ ಪೂರ್ವ ಆರ್ಥಿಕ ಬಿಕ್ಕಟ್ಟಿನ ಹಿನ್ನಲೆಯಲ್ಲಿ ನಡೆದ ಅಪೆಕ್ (Apec-ಏಷ್ಯಾ-ಶಾಂತಸಾಗರ ಆರ್ಥಿಕ ಸಮುದಾಯ) ಶೃಂಗಸಭೆ, ಸದಸ್ಯ ದೇಶಗಳಲ್ಲಿ ನಿರಾಸೆ ತಂದಿದೆ. ಈ ತೀವ್ರ ಬಿಕ್ಕಟ್ಟಿಗೆ ಒಳಗಾದ ಏಷ್ಯಾದ ದೇಶಗಳು ಅಪೆಕ್ ನಿಂದ ದೊಡ್ಡ ಸಹಾಯ ನಿರೀಕ್ಷಿಸುತ್ತಿದ್ದರು. ಅಪೆಕ್ ಈ ದೇಶಗಳಿಗೆ ಬೆಂಬಲ ನೀಡುವ ಕೆಲಸವನ್ನು ಪೂರ್ತಿಯಾಗಿ ಐಎಂಎಫ್ ಗೆ ಬಿಟ್ಟಿದ್ದು, ಅವುಗಳಿಗೆ ನಿರಾಸೆ ತಂದಿದೆ. ಕೆನಡಾದ ವಾಂಕೂವರ್ ಎಂಬ ನಗರದಲ್ಲಿ ನಡೆದ 18 ದೇಶಗಳ ಈ ಅಪೆಕ್ ಶೃಂಗಸಭೆಯಲ್ಲಿ ಈ ಸದಸ್ಯ ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟು ಎಲ್ಲಾ ಚರ್ಚೆಗಳಲ್ಲಿ ಪ್ರಧಾನ ವಿಷಯವಾಗಿತ್ತು. ಈ ಶೃಂಗಸಭೆಯಲ್ಲಿ ಮೂರು ಹೊಸ ಸದಸ್ಯ ದೇಶಗಳನ್ನು ಸೇರಿಸಿಕೊಳ್ಳಲಾಯಿತು. ರಷ್ಯಾ, ಪೆರು ಹಾಗೂ ವಿಯೆಟ್ನಾಮ್ ಗಳೇ ಆ ದೇಶಗಳು. ಅಪೆಕ್ ನ ಮುಖ್ಯ ಸದಸ್ಯ ಕೂಟವಾದ ಆಸಿಯನ್ (Asean) ಸದಸ್ಯ ವಾದದ್ದರಿಂದ ವಿಯೆಟ್ನಾಮ್ ಅಪೆಕ್ ನ ಸದಸ್ಯವಾಗಿದೆ. ರಷ್ಯವನ್ನು ಅಮೇರಿಕ ಹಾಗೂ ಪೆರುವನ್ನು ಜಪಾನ್ ಸೂಚಿಸಿದ್ದವು.

ಶೃಂಗಸಭೆಯುದ್ದಕ್ಕೂ ದಕ್ಷಿಣ-ಪೂರ್ವ ಏಷ್ಯಾದ ದೇಶಗಳು ಹಾಗೂ ದಕ್ಷಿಣ ಕೊರಿಯಾದ ಆರ್ಥಿಕ ಬಿಕ್ಕಟ್ಟು, ಹಣಕಾಸಿನ ಬಿಕ್ಕಟ್ಟು ಹಿಂದಿನ ಕಾರಣಗಳ ಬಗ್ಗೆ ಜಿಜ್ಞಾಸೆ ನಡೆಯಿತು. ಹೆಚ್ಚು ಬೆಳೆಯುತ್ತಿರುವ ದೇಶಗಳು-ದಕ್ಷಿಣ ಕೋರಿಯ ಸೇರಿದಂತೆ ಹಣಕಾಸಿನ ವ್ಯಾಪಾರದ ಮೇಲೆ ನಿರ್ಬಂಧಗಳು ಇರಬೇಕು, ಈಗಿನ ಬಿಕ್ಕಟ್ಟು ಈ ದೇಶಗಳ ಆರ್ಥಿಕದ ಮೂಲಭೂತ ದೌರ್ಬಲ್ಯ ಅಥವಾ ಅಜಾಗರೂಕತೆಯಿಂದ ಆದದ್ದಲ್ಲ ವಿದೇಶಿ ಹೂಡಿಕೆದಾರರ ಅವಿಶ್ವಾಸದಿಂದಾಗಿ ಆದದ್ದಲ್ಲ, ಅದು ಹಣಕಾಸಿನ ಮಾರುಕಟ್ಟೆಯನ್ನು ನಿಯಂತ್ರಿಸಿ ತಮ್ಮ ಲಾಭಕ್ಕಾಗಿ ಆಡಿಸುವ ಪ್ರಬಲ ಹಿತಾಸಕ್ತಿಗಳಿಂದ ಆದದ್ದು ಎಂದು ಅಭಿಪ್ರಾಯಪಟ್ಟವು. ಈ ಧೋರಣೆಗೆ ದನಿ ಕೊಟ್ಟವರು ಮಲೇಷ್ಯಾದ ಪ್ರಧಾನಿ ಡಾ. ಮಹಾತೀರ್ ಮಹಮ್ಮದ್. ಇತರ ಸರಕು, ಸೇವೆಗಳ ವ್ಯಾಪಾರದ ಬಗ್ಗೆ ಬಹುಪಕ್ಷೀಯ ಒಪ್ಪಂದದ ಹಾಗೆ, ಹಣಕಾಸಿನ ಮಾರುಕಟ್ಟೆಯ ಬಗೆಗೂ ಚರ್ಚಿಸಿ ಅದರ ಮೇಲಿನ ನಿಯಂತ್ರಣವೂ ಬೇಕು ಎಂದು ಅವರ ವಾದ.

ಅಮೇರಿಕ, ಕೆನಡಾಗಳ ನಾಯಕರು ಇದು ಈ ಆರ್ಥಿಕಗಳ ಕೆಲವು ದೌರ್ಬಲ್ಯಗಳು, ಅಚಾತುರ್ಯದಿಂದ ಆದದ್ದೆಂದು ವಾದಿಸಿದರು. ಇದಕ್ಕೆ ಅಪೆಕ್ ಏನೂ ಮಾಡಲಾರದು, ಅಗತ್ಯ ಬಿದ್ದ ದೇಶಗಳು ಐಎಂಎಫ್ ನ ಬಳಿ ಸಾಲ ತೆಗೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿತು. ಕೊನೆಯದಾಗಿ ಇತರ ಅಭಿವೃದ್ಧಿಶೀಲ ದೇಶಗಳ ಮೇಲೆ ಒತ್ತಡ ಹಾಕಿ ಆ ಧೋರಣೆಯನ್ನು ಅನುಸರಿಸುವಂತೆ ಮಾಡಿದರು.

ಆದರೂ ವಿಕಾಸಶೀಲ ದೇಶಗಳ ನಾಯಕರು ಈ ಬಿಕ್ಕಟ್ಟಿನ ನಂತರ, ಐಎಂಎಫ್ ಬಂಡವಾಳಶಾಹಿ ಆರ್ಥಿಕಗಳ ಕೆಲವು ಮೂಲಭೂತ ನೀತಿಗಳ ಪ್ರಸ್ತುತತೆ ಬಗ್ಗೆ ಪ್ರಶ್ನಿಸಲಾರಂಭಿಸಿದ್ದಾರೆ ಎನ್ನುವುದು ಸಮಾಧಾನಕರ ಸಂಗತಿ. ಜಾಗತೀಕರಣ ಒಳ್ಳೆಯದೇ ಎಂಬ ಬಗೆಗೂ ಗುಮಾನಿಗಳು ಆರಂಭವಾಗಿವೆ.

ಇತ್ತೀಚೆಗೆ ಸಂಭವಿಸಿದ ಅಭೂತಪೂರ್ವ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರಲು ದಕ್ಷಿಣಕೊರಿಯಾ ಸರಕಾರ ಐಎಂಎಫ್ ಸಾಲಕ್ಕೆ ಶರಣಾದ್ದನ್ನು ಪ್ರತಿಭಟಿಸಿ ಅಲ್ಲಿ ಭಾರೀ ಮತಪ್ರದರ್ಶನಗಳು ನಡೆದಿವೆ. ದಕ್ಷಿಣ ಕೊರಿಯಾವನ್ನು ಐಎಂಎಫ್‌ಗೆ ಒತ್ತೆಯಿಡಬಾರದೆಂದು ಆಗ್ರಹಿಸುವ ಪೋಸ್ಟರ್‌ಗಳನ್ನು ಹಿಡಿದ ಈ ಮತಪ್ರದರ್ಶನಗಳು ಭಾರತದ ಉದಾರೀಕರಣವಾದಿಗಳ, ಜಾಗತೀಕರಣವಾದಿಗಳ ಕಣ್ಣು ತೆರೆಸಿಯಾವೆ?



ಯಾಮಾಯಿಚಿ-ನಾಲ್ಕನೇ ಜಪಾನಿ ಹಣಕಾಸು ಸಂಸ್ಥೆಯ ದಿವಾಳಿ

ಜಪಾನಿನಲ್ಲೂ ಏಷ್ಯಾದಲ್ಲಿ ಆರಂಭವಾಗಿರುವ ತೀವ್ರ ಆರ್ಥಿಕ ಬಿಕ್ಕಟ್ಟಿನ ಶಾಖ ಮುಟ್ಟತೊಡಗಿದೆ. ಇತ್ತೀಚೆಗೆ ಯಾಮಾಯಿಚಿ ಸೆಕ್ಯುರಿಟೀಸ್ ಹಾಗೂ ಟೋಕಿಯೋ ಸಿಟಿ ಬ್ಯಾಂಕ್ ಎಂಬ ಎರಡೂ ಹಣಕಾಸಿನ ಸಂಸ್ಥೆಗಳು ದೀವಾಳಿ ಎದ್ದಿದ್ದು, ಈ ರೀತಿ ದೀವಾಳಿಯಾದ ಪ್ರಮುಖ ಹಣಕಾಸಿನ ಸಂಸ್ಥೆಗಳಲ್ಲಿ ನಾಲ್ಕನೆಯದು ಇದು. ಇಡೀ ಜಪಾನಿನ ಹಣಕಾಸಿನ ಸಂಸ್ಥೆಗಳು, ಆರ್ಥಿಕತೆಗಳಲ್ಲಿ ಆತಂಕ ಮೂಡಿಸಿದೆ. ದಕ್ಷಿಣ ಕೋರಿಯಾದ ನಂತರ ತೀವ್ರ ಆರ್ಥಿಕ, ಹಣಕಾಸು ಬಿಕ್ಕಟ್ಟು ಜಪಾನನ್ನು ತಟ್ಟುತ್ತದೆ ಎಂದು ಕೆಲವು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ.

ಯಾಮಾಯಿಚಿ ಸೆಕ್ಯೂರಿಟೀಸ್ ನ ಎಲ್ಲಾ ಬ್ರಿಟಿಷ್ (ಬ್ರಿಟಿಷ್ ನಲ್ಲಿರುವ) ಉದ್ಯೋಗಿಗಳು ಉದ್ಯೋಗ ಕಳೆದುಕೊಂಡಿದ್ದಾರೆ. ಇದು ಬ್ರಿಟನ್ ನಲ್ಲೂ ಭಾರಿ ಆತಂಕ ಮೂಡಿಸಿದೆ. ಸರ್ವೇಸಾಮಾನ್ಯವಾಗಿ ಇಂದಿನ ಜಾಗತಿಕ ಆರ್ಥಿಕದಲ್ಲಿ, ಒಂದು ಪ್ರದೇಶದ ಬಿಕ್ಕಟ್ಟು, ಇನ್ನೊಂದು ಪ್ರದೇಶಕ್ಕೆ ಹರಡುವುದು ಬಹಳ ವೇಗದಲ್ಲಿ, ಪಶ್ಚಿಮ ಯೂರೋಪು, ಉತ್ತರ ಅಮೇರಿಕಾದ ಪ್ರಬಲ ಆರ್ಥಿಕಗಳಿಗೆ ಹಬ್ಬಿ ಕ್ರಮೇಣ ಈ ಬಿಕ್ಕಟ್ಟಿಗೆ ಗುರಿಯಾಗಬಹುದು.

ಚೆಕ್ ಕಮ್ಯುನಿಷ್ಟ್-ವಿರೋಧಿ ಸರ್ಕಾರದ ಪತನ

ಚೆಕ್ ಗಣರಾಜ್ಯದ ಆಳುವ ಬಲಪಂಥೀಯ ಕೂಟದ ಸರ್ಕಾರ ರಾಜೀನಾಮೆ ಕೊಡುವ ಪರಿಸ್ಥಿತಿ ಉಂಟಾಗಿದ್ದು, ಪ್ರಧಾನಿ ಕ್ಲಾಸ್ ರವರ ಸರ್ಕಾರದ ಪತನವಾಗಿದೆ. ಇದಕ್ಕೆ ಮುಖ್ಯ ಕಾರಣ ಪ್ರಧಾನಿ ಕ್ಲಾಸ್ ರವರು ವೈಯುಕ್ತಿಕವಾಗಿ ಹಾಗೂ ಅವರ ಪಕ್ಷ ಎದುರಿಸುತ್ತಿರುವ ಭ್ರಷ್ಟಾಚಾರ ಹಗರಣ. ಕ್ಲಾಸ್ ರವರ ಪಕ್ಷ ವಿದೇಶಿ ಕಂಪನಿಗಳಿಂದ 75 ಲಕ್ಷ ಕೊರುವಾ (ಚೆಕ್ ನಾಣ್ಯ) ಲಂಚ ಸ್ವೀಕರಿಸಿದೆ ಎಂಬುದು ಆಪಾದನೆ. ಪ್ರಧಾನಿ ಕ್ಲಾಸ್ ಇದನ್ನು ನಿರಾಕರಿಸುತ್ತ ಬಂದಿದ್ದರು. ಆದರೆ ಆ ಬಗ್ಗೆ ನಡೆದ ವಿಚಾರಣೆ, ಲಂಚ ಸ್ವೀಕರಿಸಲಾಗಿದೆ. ಮಾತ್ರವಲ್ಲ, ಈ ಲಂಚ ಕೊಟ್ಟಿರುವವರು ಚೆಕ್ ಖಾಸಗೀಕರಣದಿಂದ ಪ್ರಯೋಜನ ಪಡೆದ ವಿದೇಶಿ ಕಂಪನಿಗಳವರು ಎಂದು ರುಜುವಾತು ಆದ ಮೇಲೆ, ಕ್ಲಾಸ್ ಪಕ್ಷದ ಉಪಾಧ್ಯಕ್ಷ ಹಾಗೂ ಸರ್ಕಾರದಲ್ಲಿ ವಿದೇಶ ಮಂತ್ರಿ ಈ ವಿಷಯದ ಮೇಲೆ ರಾಜೀನಾಮೆ ಕೊಟ್ಟಮೇಲೆ ಕ್ಲಾಸ್ ಮುಂದುವರೆಯುವುದು ಕಷ್ಟವಾಯಿತು. ಅಲ್ಲದೆ ಅವರು ಪಕ್ಷದ ಹಿಂದಿನ ನಾಯಕತ್ವಕ್ಕೆ ಗೊತ್ತಿಲ್ಲದೆ ಆದ ವಿಷಯ ಎಂದು ಆಪಾದಿಸಿದ್ದು, ಕ್ಲಾಸ್ ರವರ ನಾಯಕತ್ವವನ್ನು ಪೂರ್ಣ ನಾಶ ಮಾಡಿದೆ. ಆ ಮೇಲೆ ಕೂಟದ ಎರಡು ಇತರ ಪಕ್ಷಗಳು ಬೆಂಬಲ ವಾಪಸು ತೆಗೆದುಕೊಂಡ ಮೇಲೆ ಪ್ರಧಾನಿ ಕ್ಲಾಸ್ ಅವರಿಗೆ ರಾಜೀನಾಮೆ ಕೊಡದೆ ಬೇರೆ ವಿಧಿಯಿರಲಿಲ್ಲ.

ಸರ್ಕಾರ ಬಿದ್ದಿದ್ದು ಮಾತ್ರವಲ್ಲ, ಸಮಾಜವಾದ ವ್ಯವಸ್ಥೆ ಕಳಚಿ ಹಾಕಿದ ಪ್ರತಿಕೂಲತೆ ನಂತರ ಸತತವಾಗಿ ಸರಕಾರದಲ್ಲಿ ಭಾಗವಹಿಸಿದ್ದ ಪ್ರಧಾನಿ ಕ್ಲಾಸ್ ಗೆ ಅವರ ಈ ಸರ್ಕಾರ ಪತನ ಮಾತ್ರವಲ್ಲ, ಮುಂದೆ ಜವಾಬ್ದಾರಿಯುತ ಸ್ಥಾನ ಯಾವುದಕ್ಕೂ ಸಾಧ್ಯವಾಗದೆ, ರಾಜಕೀಯ ಸನ್ಯಾಸ ತೆಗೆದುಕೊಳ್ಳುವುದು ಅನಿವಾರ್ಯವಾಗಬಹುದು.

ಪೂರ್ವಯೂರೋಪಿನ ಅತ್ಯಂತ್ಯ ಬಲಪಂಥೀಯ ರೀತಿಯಲ್ಲಿ ಸಾಗಿದ ಚೆಕ್ ಸರ್ಕಾರದ ಈ ಬಿಕ್ಕಟ್ಟು, ಬಂಡವಾಳಶಾಹಿ ದಾರಿಯ ಚಾರಿತ್ರಿಕ ಪರಿಣಾಮ.

..........ಮತ್ತು ಗಾಂಧೀಜಿ

ಪುಟ 6 ರಿಂದ

ವಿಷಾದವನ್ನು ಮದರ್ ತೆರೆಸಾರ ಪ್ರವಾಸಗಳಿಗೆ ಕೊಡುತ್ತಿದ್ದ. ಆತ ಖ್ಯಾತ(ಕುಖ್ಯಾತ)ನಾಗಿರುವುದು ಏತಕ್ಕೆ ಗೊತ್ತೆ? ಭಾರಿ ಹಣಕಾಸಿನ ಹಗರಣಕ್ಕೆ. ಅಮೇರಿಕನ್ ಕಾರ್ಮಿಕರ, ಸಾಮಾನ್ಯ ಜನರ ಕೋಟ್ಯಾಂತರ ಡಾಲರುಗಳನ್ನು ಆತ ನುಂಗಿ ಹಾಕಿದ್ದ. ಆ ಹಗರಣದಲ್ಲಿ ದೀವಾಳಿಯಾದ ಆತನ ಕಂಪನಿಯನ್ನು ಉಳಿಸಲು ಅಮೆರಿಕನ್ ಸರ್ಕಾರ 200 ಕೋಟಿ ಡಾಲರುಗಳಷ್ಟು ಖರ್ಚು ಮಾಡಬೇಕಾಯಿತು. 1992 ರಲ್ಲಿ ಆತನ ಮೇಲೆ ಹಣಕಾಸಿನ ದುರ್ವ್ಯಯ, ಸಾರ್ವಜನಿಕರಿಗೆ ಮೋಸ ಮಾಡಿದ ಅಪರಾಧಗಳ ಮೇಲೆ 70 ಕೇಸುಗಳನ್ನು ಹಾಕಲಾಗಿತ್ತು. ಆತನಿಗೆ ಹತ್ತು ವರ್ಷಗಳ ಶಿಕ್ಷೆ ಆಗಿತ್ತು. ಆಗ ಮದರ್ ತೆರೆಸಾ ಕೀಟಿಂಗ್ ವಿಚಾರಣೆ ನಡೆಸುತ್ತಿದ್ದ ನ್ಯಾಯಾಧೀಶರಿಗೆ ಆತನನ್ನು ಕ್ಷಮಿಸುವಂತೆ ಬರೆದ ಪತ್ರ, ಆಕೆಯ ಅಭಿಮಾನಿಗಳನ್ನೂ ದಂಗು ಬಡಿಸಿತ್ತು. ಕೀಟಿಂಗ್ ಯಾವ ರೀತಿ ವ್ಯವಹಾರ ಹೊಂದಿದ್ದನೋ ಗೊತ್ತಿಲ್ಲ, ಅಪರಾಧಗಳು ಏನೋ ಗೊತ್ತಿಲ್ಲ, ಆದರೆ 'ದೇವರ ಬಡವ' ರಿಗೆ ತನ್ನ ಆದಾಯದ ಒಂದು ಭಾಗ ಕೊಡುವವನು. ಆದ್ದರಿಂದ ಆತನನ್ನು ದೇವರ ಪರವಾಗಿ ಕ್ಷಮಿಸಬೇಕು' ಎಂಬ ಮದರ್ ತೆರೆಸಾರ ಮನವಿ ಕಾಣುವಷ್ಟು ಮುಗ್ಧವಾದದ್ದೇ? ಅಥವಾ ತನ್ನನ್ನು ಬೆಂಬಲಿಸುವವರ ಪಾಪಕೃತ್ಯಗಳನ್ನು ಸಮರ್ಥಿಸುವ ಅನೀತಿಯುತ ಧೋರಣೆಯೆ?

ಇದಕ್ಕಿಂತಲೂ ದಂಗು ಬಡಿಸುವಂತಹದು ಮದರ್ ತೆರೆಸಾರ ಭೋಪಾಲ್ ದುರಂತದ ಬಗೆಗಿನ ಉದ್ಗಾರ. 'ಭೋಪಾಲ್ ದುರಂತ' ವಾದ ತತ್‌ಕ್ಷಣ ಸರ್ಕಾರಿ ಕಾರುಗಳಲ್ಲಿ ಸ್ಥಳಕ್ಕೆ ಭೇಟಿ ಇತ್ತ ಮದರ್ ಜನಗಳಿಗೆ ಸಂತಮೇರಿ ಮೆಡಲುಗಳನ್ನು ಹಂಚಿ ಉದ್ಗರಿಸಿದರು - ''ಇದೊಂದು ಬೆಂಕಿ ಆಕಸ್ಮಿಕದಂತೆ. ಎಲ್ಲಿಯಾದರೂ ಇಂತಹ ಬೆಂಕಿ ಬೀಳಬಹುದು. ಆದ್ದರಿಂದ ಇಂತವರನ್ನು ಕ್ಷಮಿಸಬೇಕು. ಕ್ಷಮಿಸಿದರೆ ನೊಂದವರಿಗೆ ನೂರು ಪಾಲು ಹಾಯೆನಿಸುತ್ತದೆ''. ಮದರ್ ತೆರೆಸಾರ ಗುರು ಪೋಪರು ಇನ್ನೂ ಮುಂದೆ ಹೋಗಿ ಭೋಪಾಲ್‌ನ 'ವಿಷಾದಕರ ಘಟನೆ' ಪ್ರಗತಿ ಸಾಧಿಸುವ ,ಮನುಷ್ಯನ ಪ್ರಯತ್ನದ ಫಲ ಎಂದು ಅಪ್ಪಣೆ ಕೊಡಿಸಿದರು. ಮನುಷ್ಯ ಜೀವಗಳ ಜತೆ ಚೆಲ್ಲಾಟವಾಡುವ, ಬಡವರ ಸುರಕ್ಷಿತತೆ ಬಗ್ಗೆ ತಿರಸ್ಕಾರ ಹಾಗೂ ತಮ್ಮ ಲಾಭದ ಬಗ್ಗೆ ಭಾರಿ ಆಸೆಬುರುಕುತನ ಪ್ರದರ್ಶಿಸಿದ ಯೂನಿಯನ್ ಕಾರ್ಬೈಡ್ ಬಗ್ಗೆ ಚಕಾರವೆತ್ತದ್ದು ಮುಗ್ಧತೆಯೋ ಅಥವಾ ಆಳುವ ಪಾಪಿಗಳನ್ನು ಸಮರ್ಥಿಸುವ ಅನೀತಿಯುತ ಧೋರಣೆಯೋ?

ವಿಶೇಷವೆಂದರೆ ಯೂನಿಯನ್ ಕಾರ್ಬೈಡ್ ದೇವರ ಮಕ್ಕಳಾದ ಬಡವರನ್ನು ಆರಾಧಿಸುವ ಮದರ್ ತೆರೆಸಾಗೆ ಏನೂ ದಾನ ಕೊಟ್ಟಿರಲಿಲ್ಲ. ದೇವರ ಮಕ್ಕಳಿಗೆ ಕಾರ್ಬೈಡ್ ಕೊಟ್ಟಿದ್ದು ವಿಷಾನಿಲ. ಜೀವನ ಪರ್ಯಂತ ಬೇಯುವ ಕಷ್ಟ ಅಷ್ಟೆ. ಇವರನ್ನು ಸಮರ್ಥಿಸುವ, ಕ್ಷಮಿಸುವ ತುರ್ತು ಏಕೆ ಮದರ್‌ಗೆ? ಮುಂದೆ ದಾನ ಮಾಡಿಯಾರು ಎಂದೆ?

ಡಯಾನಾ ಜ್ವರ

ಅಂತರ್ರಾಷ್ಟ್ರೀಯ ಸುದ್ದಿ ಮಾಧ್ಯಮಗಳು ಡಯಾನಾ ಆಕಸ್ಮಿಕ ಮರಣದ ನಂತರ ಹರಿಯಬಿಟ್ಟ 'ಡಯಾನಾ ಜ್ವರ' ದ ಹಿಂದೆಯೂ, ಮದರ್ ತೆರೆಸಾರವರನ್ನು 'ಮಹಾಸಂತೆ' ಮಾಡಿದ ಧೋರಣೆಯೇ ಕೆಲಸ ಮಾಡುತ್ತಿದೆ. ಡಯಾನಾ ಮದರ್ ತೆರೆಸಾ ರವರ ದಾನಿಗಳಲ್ಲಿ ಪ್ರಮುಖಳು. 'ಲ್ಯಾಂಡ್ ಮೈನ್' ನ ನಿಷೇಧ ಬಗ್ಗೆ ಜಾಗತಿಕ ಚಳುವಳಿಯಲ್ಲಿ ಆಕೆಯ ಪಾತ್ರವನ್ನು ಅತಿಶಯ ಗೊಳಿಸಲಾಯಿತು. ಬ್ರಿಟನ್‌ನ ಇತರ 'ದಾನ' ಚಟುವಟಿಕೆಗಳಲ್ಲೂ ಆಕೆಯ ಪಾತ್ರವನ್ನು ವೈಭವೀಕರಿಸಲಾಗಿತ್ತು. ಇಡೀ ಜಗತ್ತಿನಲ್ಲಿ 'ಲ್ಯಾಂಡ್‌ಮೈನ್' ಗಳ ದುಷ್ಪರಿಣಾಮದ ಬಗ್ಗೆ ಕಣ್ಣೀರು ಸುರಿಸಿದ ಡಯಾನಾ, ಈ ನಿಷೇಧದ ವಿರುದ್ಧ ಅಮೆರಿಕನ್ ಸರ್ಕಾರದ ಪ್ರಚಾರವನ್ನು ಎಂದೂ ಖಂಡಿಸಿಲ್ಲ. ಜಗತ್ತಿನ ಶೇಕಡಾ 90 'ಲ್ಯಾಂಡ್‌ಮೈನ್'ಗಳನ್ನು ಉತ್ಪಾದಿಸುವ ಅಮೆರಿಕನ್ ಕಂಪನಿಗಳ ಬಗ್ಗೆ ಚಕಾರವೆತ್ತಲಿಲ್ಲ. ಬ್ರಿಟಿಷ್ ಸೈನ್ಯ ಉತ್ತರ ಐರ್ಲೆಂಡಿನಲ್ಲಿ ನಡೆಸುತ್ತಿರುವ ನರಮೇಧದ ಬಗೆಗೂ, ಆಕೆ ಚಕಾರವೆತ್ತಿಲ್ಲ ಎಂಬುದೂ ಆಕಸ್ಮಿಕವೇ? ಡಯಾನಾಳನ್ನು ಮದರ್ ಜತೆ ಹೋಲಿಸಿದ್ದು, ಮದರ್‌ನ್ನು ಮಹಾತ್ಮ ಜತೆ ಹೋಲಿಸಿದಂತೆ ಪ್ರಜ್ಞಾವಂತರಿಗೂ ಮುಜುಗರ ಉಂಟುಮಾಡುವಂತಹದು ಆಗಿತ್ತು. 'ಡಯಾನಾ ಜ್ವರ' ಕ್ಕೆ ಇತರ ಮುಖಗಳೂ ಇವೆ. ಅವಿಲ್ಲಿ ಪ್ರಸ್ತುತವಲ್ಲ.

ವಿವಾಹ ನಿಷೇಧ ಮತ್ತು ಮರುವಿವಾಹ ವಿರೋಧಿಸುವ ಮದರ್, ಡಯಾನಾ ವಿಚ್ಛೇದನವನ್ನು ಸಮರ್ಥಿಸಿದ್ದರು! ಇದು ಅವರ ವಿಶೇಷ ಭಾವನಾತ್ಮಕ ಸಂಬಂಧವನ್ನು, ದ್ವಂದ್ವನೀತಿಯನ್ನು ಪ್ರದರ್ಶಿಸಿತ್ತು.

ಸಾಮ್ರಾಜ್ಯಶಾಹಿಯ 'ಸ್ವಯಂ ಸೇವಾ' ಧಾಳಿಯ ಭಾಗ

1973 ರಲ್ಲಿ ರಾಬರ್ಟ್ ಮಕ್ನಾಮಾರಾ ಅಧ್ಯಕ್ಷರಾದಾಗ ವಿಶ್ವಬ್ಯಾಂಕ್ 'ಸ್ವಯಂ ಸೇವಾ ಸಂಘಟನೆ'ಗಳನ್ನು ಸಾಮ್ರಾಜ್ಯ ಶಾಹಿಯ ಅಸ್ತ್ರವಾಗಿ ಬಳಸುವ ರಣನೀತಿ ಯನ್ನು ಆರಂಭಿಸಿದ್ದರು. ಈ ರಣ ನೀತಿಯ ಪ್ರಕಾರ ಸರ್ಕಾರಗಳು ಜನತೆಯ ಸಮಾಜ ಕಲ್ಯಾಣ, ಇತರ ಮಾನವೀಯ ಕೆಲಸಗಳಿಂದ ಹಿಂದೆಸರಿಯಬೇಕು. ಇವನ್ನು 'ಸ್ವಯಂ ಸೇವಾ ಸಂಘಟನೆಗಳಿಗೆ' ಬಿಡಬೇಕು. ಇಂತಹ 'ಸ್ವಯಂ ಸೇವಾ ಸಂಘಟನೆ'ಗಳು, ಸಾಮ್ರಾಜ್ಯ ಶಾಹಿಗಳ ಸಂಘಟನೆಗಳು, ಸರ್ಕಾರಗಳ, ದೈತ್ಯ ಕಂಪನಿಗಳ ಶ್ರೀಮಂತರ ದಾನಕ್ಕೆ ಹಲ್ಲು ಗಿಂಜಿ, ಅವರಿಗೆ ವಿಧೇಯವಾಗಿ ಇರಬೇಕು. ಇಂತಹ ಸ್ವಯಂ ಸೇವಾ ಸಂಘಟನೆಗಳು ಬಡವರನ್ನು ಸಾಮಾಜಿಕ ನ್ಯಾಯಕ್ಕಾಗಿ ಸಂಘಟಿಸುವ ಎಡಪಂಥೀಯ ಸಂಘಟನೆಗಳಿಂದ ದೂರಸೆಳೆಯಬೇಕು. ಸಾಧ್ಯವಾದಲ್ಲಿ ಎಡಪಂಥೀಯ ಸಂಘಟನೆಗಳಿಂದ ಕಾರ್ಯಕರ್ತರನ್ನು ಈ ಮಾನವೀಯ ಕೆಲಸಗಳಿಗೆ ಆಕರ್ಷಿಸಬೇಕು. ಇಂತಹ ಸ್ವಯಂ ಸೇವಾ ಸಂಘಟನೆಗಳು, ಸಾಮ್ರಾಜ್ಯಶಾಹಿ ಹಾಗೂ ಸ್ಥಳೀಯ ಶೋಷಕರ ದಾನ ಪಡೆಯುವು ದರಿಂದ ಎರಡು ರೀತಿಯ ಪ್ರಯೋಜನವಾಗುತ್ತದೆ. ಅದರ ದಾನಿಗಳು ತಮ್ಮ ಪಾಪದ ಕೊಳೆಯನ್ನು (ಕನಿಷ್ಟ ಜನಮಾನಸದಲ್ಲಿ) ಸ್ವಲ್ಪವಾದರೂ ತೊಳೆದುಕೊಳ್ಳಬಹುದು ಹಾಗೂ ಎಡಪಂಥೀಯರ ನೆಲೆಯನ್ನು ದುರ್ಬಲಗೊಳಿಸುವುದು, ಸಾಧ್ಯವಾದರೆ ನಾಶಮಾಡುವುದು ಇನ್ನೊಂದು.

ಮದರ್ ಮತ್ತು ಡಯಾನಾ ಬಗ್ಗೆ ಅಬ್ಬರದ ಪ್ರಚಾರ, ವೈಭವೀಕರಣ 'ಸ್ವಯಂ ಸೇವಾ ಸಂಘಟನೆಗಳ' ನೀತಿಯನ್ನು ಜನಪ್ರಿಯಗೊಳಿಸುವ ಸಾಮ್ರಾಜ್ಯಶಾಹಿಯ ಹೂರಣದ ಭಾಗ. ಇವರಿಬ್ಬರೂ ಸಾಮ್ರಾಜ್ಯ ಶಾಹಿಯ, ಶೋಷಕರ ವ್ಯವಸ್ಥೆಯ ಕ್ರೂರ ಮುಖವನ್ನು ಮುಚ್ಚಿ ಚೆಂದ ಗೊಳಿಸುವ 'ಮಾನವೀಯ' ಬಣ್ಣದ ಕಾಗದಗಳು.

ಸಾಮ್ರಾಜ್ಯಶಾಹಿ ರಾಜಕೀಯ ಹಾಗೂ ಸೈದ್ಧಾಂತಿಕ ಯೋಜನೆಯ ಭಾಗ ಮದರ್ ಹಾಗೂ ಡಯಾನಾ.

O

11ನೇ ಲೋಕಸಭೆಯಲ್ಲಿ ಬಿಜೆಪಿ

`13 ದಿನಗಳ ವಿಸ್ಮಯ'ದಿಂದ 13 ದಿನಗಳ 'ಸಮಯಸಾಧಕತನ'ದ ವರೆಗೆ

11ನೇ ಲೋಕಸಭೆಯ ಆರಂಭದಲ್ಲಿ `13 ದಿನಗಳ ವಿಸ್ಮಯ'ದ ದಾಖಲೆ ನಿರ್ಮಿಸಿದ ಬಿಜೆಪಿಯ ರಾಜಕೀಯ ಸಮಯಸಾಧಕತನ ಆ ಲೋಕಸಭೆಯ ಕೊನೆಯ 13 ದಿನಗಳಲ್ಲಿ ಪ್ರಪಾತಕ್ಕಿಳಿದ ರೀತಿ ಹೀಗಿದೆ:

ನವಂಬರ್ 22, 1997:
ಮಧ್ಯಂತರ ಚುನಾವಣೆ ಅನಿವಾರ್ಯವಾಗುತ್ತಿದೆ
- ಸುಷ್ಮಾ ಸ್ವರಾಜ್

ನವಂಬರ್ 23, 1997
ಲೋಕಸಭೆಯ ವಿಸರ್ಜನೆಯಲ್ಲದೆ ಬೇರೆ ದಾರಿಯಿಲ್ಲ
- ಅಡ್ವಾಣಿ

ನವಂಬರ್ 24, 1997
ಲೋಕಸಭೆಯನ್ನು ವಿಸರ್ಜಿಸಬಾರದೆಂದು ಬಿಜೆಪಿ ಸಂಸತ್ ಸದಸ್ಯ ರಾಜೀವ್ ಪ್ರತಾಪ್ ಸಿಂಗ್ ನೇತೃತ್ವದಲ್ಲಿ ಮೊದಲ ಬಾರಿ ಎಂ.ಪಿ.ಗಳಾದವರ ಪ್ರಚಾರ, ಒತ್ತಾಯ ಆರಂಭ. ರಾಷ್ಟ್ರಪತಿಗಳ ಭೇಟಿಗಾಗಿ ಬಿಜೆಪಿ ಉಪಾಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ರಾಜಗೋಪಾಲ ಸಕ್ರಿಯ ನೆರವು.

ನವಂಬರ್ 25, 1997
ಮೊದಲ ಬಾರಿ ಎಂ.ಪಿ.ಗಳಾದವರ ಭಾವನೆಗಳನ್ನು ಪರಿಗಣಿಸಿ ಲೋಕಸಭೆಯ ವಿಸರ್ಜನೆಯತ್ತ ಯಾವುದೇ ಆತುರದ ಕ್ರಮ ಬೇಡ
- ರಾಷ್ಟ್ರಪತಿಗಳಿಗೆ ವಾಜಪೇಯಿ ಮನವಿ.

ನವಂಬರ್ 26, 1997
ಮೊದಲ ಬಾರಿ ಎಂ.ಪಿ.ಗಳಾದವರ ವೇದಿಕೆ ರಚನೆ - ಆದರೆ 287 ಇಂತಹ ಎಂ.ಪಿ.ಗಳಲ್ಲಿ ಕೇವಲ 37 ಮಂದಿಯ ಸಹಿ. ಇವರಲ್ಲಿ ಹೆಚ್ಚಿನವರು ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಸದಸ್ಯರು.

ನವಂಬರ್ 27, 1997
ಮಧ್ಯಂತರ ಚುನಾವಣೆ ವಿನಹ ಬೇರೆ ದಾರಿಯಿದ್ದಂತಿಲ್ಲ. ಬಿಜೆಪಿ ಸರಕಾರ ರಚಿಸುವ ದಾವೆ ಮಂಡಿಸುವಂತಹ ಪರಿಸ್ಥಿತಿ ಬಂದಿಲ್ಲ
- ಸುಷ್ಮಾ ಸ್ವರಾಜ್

ನವಂಬರ್ 28, 1997
ಚುನಾವಣೆಗೆ ಸಿದ್ಧರಾಗಲು ನಮ್ಮ ಘಟಕಗಳಿಗೆ ನಿರ್ದೇಶನ ಹೋಗಿದೆ
- ಬಿಜೆಪಿ ಉಪಾಧ್ಯಕ್ಷ ಕೆ.ಎಲ್.ಶರ್ಮ.

ಸಂಸತ್ತನ್ನು ವಿಸರ್ಜಿಸಬಾರದು, ಸಂಸತ್ತು ಅಸಂಬದ್ಧವೆನಿಸುವ ಅಪಾಯವಿದೆ
- ರಾಷ್ಟ್ರಪತಿಗಳಿಗೆ ಮತ್ತು ಲೋಕಸಭಾಧ್ಯಕ್ಷರಿಗೆ ವಾಜಪೇಯಿ ಮನವಿ.

ನವಂಬರ್ 29, 1997
'ಅಧಿಕೃತವಾಗಿ ಸರಕಾರ ರಚಿಸುವ ದಾವೆ ಸಲ್ಲಿಸುವ ಅಗತ್ಯವಿಲ್ಲ. ರಾಷ್ಟ್ರಪತಿಗಳು ಯಾವುದೇ ಕ್ರಮ ಕೈಗೊಳ್ಳುವ ಮೊದಲು ನಮ್ಮೊಡನೆ ಸಮಾಲೋಚಿಸುವುದಾಗಿ ಹೇಳಿದ್ದಾರೆ.
- ಸುಷ್ಮಾ ಸ್ವರಾಜ್

ನವಂಬರ್ 30, 1997
ಸದನದಲ್ಲಿ ನಮ್ಮ ಶಕ್ತಿಯ ಆಧಾರದಲ್ಲಿ ಸರಕಾರ ರಚಿಸುವ ಅವಕಾಶ ನಮಗೆ ಸಿಗಬೇಕೆಂದು ನಿರೀಕ್ಷಿಸುತ್ತೇವೆ. ರಾಜಕೀಯ ಮರು ಧ್ರುವೀಕರಣ ನಡೆಯಲು ಅವಕಾಶ ಕೊಡಿ. ವಿಸರ್ಜನೆಯ ಬಗ್ಗೆ ಯಾವುದೇ ಆತುರದ ನಿರ್ಣಯ ತಗೊಳ್ಳಬೇಡಿ.
- ರಾಷ್ಟ್ರಪತಿಗಳಿಗೆ ಬಿಜೆಪಿ ಮುಖಂಡರ ಮನವಿ

ಇದು ಸರಕಾರ ರಚಿಸುವ ದಾವೆಯೇ? ಎಂಬ ಪ್ರಶ್ನೆಗೆ ಅಡ್ವಾಣಿಯವರ ಉತ್ತರ-"ಒಂದು ರೀತಿಯಲ್ಲಿ ಹಾಗೆಂದೇ ತಿಳಿಯಬಹುದು"

ಉತ್ತರ ಪ್ರದೇಶದಲ್ಲಿ ನಡೆದಂತಹ ಪವಾಡ ನಡೆಯುತ್ತದೆ
- ಕಲ್ಯಾಣ್ ಸಿಂಗ್

ಡಿಸೆಂಬರ್ 1, 1997
ಕಾಂಗ್ರೆಸ್ ಮಿತ್ರರು ಮಧ್ಯಂತರ ಚುನಾವಣೆಗಳನ್ನು ದೂರವಿಡಲು ರಾಜಕೀಯ ಪರಿಸ್ಥಿತಿಯನ್ನು ಸ್ಥಿರಗೊಳಿಸುವಲ್ಲಿ ನಮ್ಮನ್ನು ಸೇರಿಕೊಳ್ಳಲು ಸ್ವಾಗತ
- ವಾಜಪೇಯಿ


ಡಿಸೆಂಬರ್ 2, 1997
ಮಾಜಿ ಕಾಂಗ್ರೆಸ್ ಮಂತ್ರಿ ಹಾಲಿ ಸಂಸತ್ ಸದಸ್ಯ ಜಿ.ವೆಂಕಟಸ್ವಾಮಿ ಪಕ್ಷಾಂತರ ಮಾಡಲು ಬಿಜೆಪಿ 50 ಲಕ್ಷ ರೂ. ಹಾಗೂ ಗೃಹ ಮಂತ್ರಾಲಯ ನೀಡುವ ಆಶ್ವಾಸನೆ ನೀಡಿರುವುದಾಗಿ ಆಪಾದನೆ. ಸುಮಾರು 40 ಕಾಂಗ್ರೆಸ್ಸಿನವರ ಪಕ್ಷಾಂತರಕ್ಕೆ ಆಮಿಷ ಒಡ್ಡಿರುವುದಾಗಿ ಶಂಕೆ.

ರಾಜಕೀಯ ಒತ್ತಡಗಳಿಂದಾಗಿ ರಾಷ್ಟ್ರಪತಿಗಳು ಲೋಕಸಭೆಯನ್ನು ವಿಸರ್ಜಿಸಬಹುದು
- ಅಡ್ವಾಣಿ

ಡಿಸೆಂಬರ್ 3, 1997
ಕಾಂಗ್ರೆಸ್ಸಿನ 40 ರಷ್ಟು ಲೋಕಸಭಾ ಸದಸ್ಯರು ಸರಕಾರ ರಚನೆಗೆ ಬಿಜೆಪಿಯನ್ನು ಬೆಂಬಲಿಸಲು ಮುಂದೆ ಬಂದಿದ್ದರು. ಆದರೆ ಅವರಿಗೆ ಪಕ್ಷಾಂತರ ನಿಷೇಧ ಕಾನೂನಿನ್ವಯ ಅದನ್ನು ಕಾನೂನುಬದ್ಧಗೊಳಿಸಲು ಬೇಕಾದ ಇನ್ನೂ 7 ಸದಸ್ಯರ ಬೆಂಬಲವನ್ನು ಪಡೆಯಲಾಗಲಿಲ್ಲ. ಆದ್ದರಿಂದ ತಕ್ಷಣ ಲೋಕಸಭೆ ವಿಸರ್ಜನೆಯಾಗಬೇಕೆಂದು ಆಗ್ರಹಿಸಿದ್ದೇವೆ.
- ಅಡ್ವಾಣಿ

ಡಿಸೆಂಬರ್ 4, 1997
11ನೇ ಲೋಕಸಭೆಯ ವಿಸರ್ಜನೆ

ಆರಂಭದಿಂದಲೂ ಅಡ್ವಾಣಿ, ವಾಜಪೇಯಿ ಹೊಸ ಚುನಾವಣೆಗಳನ್ನು ಬಯಸುತ್ತಿದ್ದರು
- ಅನಂತ್ ಕುಮಾರ್



ಕೃಪೆ: ಟೈಮ್ಸ್ ಆಫ್ ಇಂಡಿಯಾ

ಅಣಕ — ಶರತ್ ಚಂದ್ರ

ಮೂರಂಕಿ ಲಾಟರಿ........

ದೆಹಲಿಯಲ್ಲಿ ತೀವ್ರ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಏನಾದರೂ ಬಿಸಿ ಸುದ್ದಿ ವರದಿ ಮಾಡಪ್ಪ ಎಂದು ನಮ್ಮ ವರದಿಗಾರ ನಕ್ಷತ್ರಿಕನಿಗೆ ಹೇಳಲಾಗಿ. ಈ ಬಾರಿಯೂ ಟೆಲಿಫೋನ್ ಟ್ಯಾಪ್ ಮಾಡಲು ಹೋಗಿ ಬರಿಗೈಯಲ್ಲಿ ಬಂದ. ಯಾಕಪ್ಪಾ ಅಂದ್ರೆ ಎಂ.ಪಿಗಳೆಲ್ಲಾ ಸೆಲ್ಯುಲರ್ ಫೋನಿನಿಂದ ಮನೆಯ ಗಾರ್ಡನ್ ಗಳಲ್ಲೇ ಮಾತಾಡ್ತಾರೆ- ಎಲ್ಲಾ ವ್ಯವಹಾರಗಳ ಬಗ್ಗೆ ಅಂದ. ಆದರೂ ರಾಜದ್ರೋಹವಾಗಿ ಕೇಳಿಸಿಕೊಂಡು ವರದಿ ಮಾಡಿದ್ದಾನೆ. ಅವರು ಮಾತಾಡಿದ್ದು ಬರಕೊಂಡೆ. ನನಗೆ ಏನೂ ಅರ್ಥವಾಗಿಲ್ಲ. ನಿಮಗೇನಾದರೂ ಆಯ್ತಾ ಎಂದ. ನನಗನ್ನಿಸಿದ್ದು ಇದು ಮೂರನೇ ಪಕ್ಷದ ಮೊದಲನೆ ಬಾರಿ ಎಂ.ಪಿ. ಮತ್ತು ಮೊದಲನೇ ಪಕ್ಷದ ಮೂರನೇ ಬಾರಿ ಎಂ.ಪಿ ನಡುವೆ ಸಂಭಾಷಣೆ. ಇಲ್ಲವೇ ಅವರು ಗಣಿತ ಪ್ರಾಕ್ಟೀಸ್ ಮಾಡುತ್ತಿರಬಹುದೇ? ನಿಮಗೇನಾದರೂ ಅರ್ಥವಾದರೆ ಹೇಳಿ. ಅತ್ಯುತ್ತಮ ಉತ್ತರಕ್ಕೆ ಸೂಕ್ತ ಬಹುಮಾನವಿದೆ.

" ಈಗ ನಿಮ್ಮ ಕಡೆ ಸ್ಕೋರ್ ಎಷ್ಟಪ್ಪಾ ? "

"ಸ್ವಲ್ಪ ಇರು. ಹೇಳ್ತೀನಿ. ಏನ್ನೂರಾ ನಾಲ್ಕತ್ತರ ಅರ್ಧ ಎಷ್ಟು ?"

"ಯಾಕೆ ? ಇನ್ನೂರಾ ಎಪ್ಪತ್ತು."

"ಇರಪ್ಪಾ ! ನೂರಾ ತೊಂಬತ್ತಾ ಮೂರರ ಮೂರನೇ ಒಂದು ಭಾಗ ಎಷ್ಟಪ್ಪಾ ?"

"ಏನಪ್ಪಾ ಇದು ಒಗಟು ? ಅರವತ್ತೊಂದು. ನಿಮ್ಮ ಕಡೆ ಸ್ಕೋರ್ ಹೇಳಪ್ಪಾ ?"

"ನಿಮ್ಮ ಕಡೆ ಸ್ಕೋರ್ ಹೇಳಿದ್ರೆ, ನನ್ನ ಕಡೆ ಸ್ಕೋರ್ ಹೇಳ್ತೀನಿ."

"ನೂರಾ ನಾಲ್ವತ್ತ ನಾಲ್ಕರ ಮೂರನೇ ಒಂದು ಭಾಗ ಎಷ್ಟು ?"

"ನಲವತ್ತೆಂಟು, ಯಾಕಪ್ಪಾ ? ಅದು. ನೂರ್‍ತೊಂಬತ್ತ ಮೂರಕ್ಕೆ ಅದನ್ನು ಸೇರಿಸಿದರೆ ಎಷ್ಟು ?"

"ಅಷ್ಟೋ! ಬಿಡಪ್ಪಾ ನೂರಾ ನಾಲ್ವತ್ತ ನಾಲ್ಕಕ್ಕೆ ಅರವತ್ತೊಂದು ಸೇರಿಸಿದರೆ ಎಷ್ಟು ?"

"ಎರಡೂ ಏನ್ನೂರಾ ನಾಲ್ವತ್ತರ ಅರ್ಧ ಆಗಲ್ವಲ್ಲ."

"ಅದೂ ಸಾಯಲಿ, ನೂರಾ ತೊಂಬತ್ತಾ ಮೂರಕ್ಕೆ, ಇನ್ನೂರಾ ಎಪ್ಪತ್ತು ಮಾಡ್ಲಿಕ್ಕೆ ಎಷ್ಟು ಕಡಿಮ ?"

"ಎಪ್ಪತ್ತೇಳು"

"ಎಪ್ಪತ್ತೇಳಕ್ಕೆ ಐವತ್ತು ಲಕ್ಷದಿಂದ ಗುಣಿಸಿದ್ರೆ ಎಷ್ಟು ?"

"ಮೂವತ್ತೆಂಟೂವರೆ ಕೋಟಿ."

"ಬಹಳ ಜಾಸ್ತಿಯಲ್ಲಪ್ಪ, ಎಲ್ಲಿಂದ ತರ್‍ತಾರೆ ಇಷ್ಟನ್ನು ?"

"ನೂರಾ ಅರವತ್ತೇಳಕ್ಕೆ ನೂರಾ ನಲ್ವತ್ತಾ ನಾಲ್ಕು ಸೇರಿಸಿದರೆ ಎಷ್ಟಪ್ಪಾ."

"ಮುನ್ನೂರಾ ಹನ್ನೊಂದಾಗುತ್ತಲ್ಲ, ಇನ್ನೂರಾ ಎಪ್ಪತ್ತಕ್ಕಿಂತ ಹೆಚ್ಚಾಯ್ತಲ್ಲ."

"ಅದೇ ಚೆನ್ನಾಗಿತ್ತು. ಒಂದನ್ನೇ ಎರಡು ಬಾರಿ ಹೇಳಿದ್ರೆ, ಮಾಡಿದ್ರೆ ಒಟ್ಟು ಎಷ್ಟಾಗುತ್ತಪ್ಪ ಗೊತ್ತಾ ?"

"ಗೊತ್ತಿಲ್ಲ!"

"ಸೊನ್ನೆ. ಈಗ ಆದದ್ದೇ ಅದು ಗೊತ್ತಾ."

"ಇಷ್ಟೆಲ್ಲಾ ಕೂಡಿಸಿ, ಕಳೆದು, ಗುಣಿಸಿ, ಭಾಗಿಸಿ ತಲೆಕೆಡಿಸಿಕೊಂಡು ಮಾಡಿದ್ರೆ ಸೊನ್ನೆ ಆಯ್ತಲ್ಲಪ್ಪಾ"

ವಿಮೋಚನಾ ಸಮರ

ಪುಟ 4 ರಿಂದ

ದೇಶದೊಳಗೆ ರಾಷ್ಟ್ರೀಯವಾದಿ ಪತ್ರಿಕೆಗಳು ಹಾಗೂ ವಿದೇಶಗಳಲ್ಲಿ ಕಮ್ಯುನಿಸ್ಟ್ ಪತ್ರಿಕೆಗಳು ಪ್ರತಿನಿತ್ಯ ನ್ಯಾಯಾಲಯದಲ್ಲಿ ಆಪಾದಿತರು ನೀಡುತ್ತಿದ್ದ ಹೇಳಿಕೆಗಳಿಗೆ ವ್ಯಾಪಕ ಪ್ರಚಾರ ನೀಡಿದವು. ಅದರ ಫಲವಾಗಿ ಕಮ್ಯುನಿಸ್ಟ್ ಕಣ್ಣೋಟವೇನು ಎಂಬುದು ಇಡೀ ದೇಶ ತಿಳಿಯುವಂತಾಯಿತು. ಅದು ಬಹಳಷ್ಟು ದೇಶಪ್ರೇಮಿ ಯುವಕರನ್ನು ಆಕರ್ಷಿಸಿತು. ನಾಲ್ಕೂವರೆ ವರ್ಷಗಳ ವಿಚಾರಣೆಯ ನಂತರ ಸಾಮ್ರಾಜ್ಯಶಾಹಿ ಆಳ್ವಿಕೆ ಎಲ್ಲಾ ಆಪಾದಿತರಿಗೆ ಕಠಿಣ ಶಿಕ್ಷೆ ವಿಧಿಸಿತು. ಈ 31 ಆಪಾದಿತರಲ್ಲಿ ಮೂವರು ಬ್ರಿಟೀಷ್ ಕಮ್ಯುನಿಷ್ಟರು ಹಾಗೂ ಎಡಪಂಥೀಯರೂ ಇದ್ದರು. ಮೀರತ್ ಬಂಧಿಗಳನ್ನು ಬಿಡುಗಡೆ ಮಾಡಲು ವಿಶ್ವಾದ್ಯಂತ ಒತ್ತಾಯಗಳು ಬಂದವು. ಪ್ರಖ್ಯಾತ ವಿಜ್ಞಾನಿ ಐನ್ ಸ್ಟೀನ್ ಮತ್ತು ಪ್ರಖ್ಯಾತ ಪತ್ರಶಾಸ್ತ್ರ"ರೋಮೇರೋ ಕೋಲಾಂ ಕೂಡಾ ಈ ಬಂಧಿಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

(ಮುಂದುವರಿಯುವುದು)



ಮೀರತ್ ಪಿತೂರಿ ಮೊಕದ್ದಮೆಯ ಆಪಾದಿತರಿಗೆ ಬೆಂಬಲವಾಗಿ ಇಂಗ್ಲೀಷ್ ಕಾರ್ಮಿಕರ ಒಂದು ಬೀದಿ ನಾಟಕದ ದೃಶ್ಯ

ತಿದ್ದುಪಡಿ

ಪದಬಂಧ 4 ರ ಉತ್ತರದಲ್ಲಿ :

ಮೇಲಿನಿಂದ ಕೆಳಕ್ಕೆ 4-ಸಜ, 15-ರಾಜಿ ಹಾಗೂ ಎಡದಿಂದ ಬಲಕ್ಕೆ 17-ಪಂಡಿತ್‌ಜಿ ಎಂದು ಓದಿಕೊಳ್ಳಬೇಕು.

ಪುಸ್ತಕ ಪರಿಚಯ: ಎನ್.ಕೆ.ಉಪಾಧ್ಯಾಯ

ಒಂದು ಉತ್ತಮ ಕೈಪಿಡಿ

'ಜನಾರೋಗ್ಯ'
ನವಕರ್ನಾಟಕ ಪ್ರಕಾಶನ,
ಬೆಲೆ. ರೂ. 35.

ನವಕರ್ನಾಟಕ ಪ್ರಕಾಶನ, ಬೆಂಗಳೂರು ಇವರು ಸುವರ್ಣೋತ್ಸವ ಮಾಲಿಕೆಯಡಿಯಲ್ಲಿ ಪ್ರಕಟಿಸಿರುವ ಜನಾರೋಗ್ಯ ಎಂಬ ಪುಸ್ತಕ ಜನವಾದಿ ಮಹಿಳಾ ಸಂಘಟನೆ, ಅಂಗನವಾಡಿ ಕಾರ್ಯಕರ್ತೆಯರು, ರೈತ ಸಂಘ ಮೊದಲಾದ ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತೆಯರಿಗೆ ಅತ್ಯುತ್ತಮ ಮಾರ್ಗದರ್ಶಿಯಾದ ಪುಸ್ತಕ. ನಾನು 1939 ರಲ್ಲಿ ಮುಂಬಯಿಯಲ್ಲಿ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದಾಗ ಪಕ್ಷದ ಮುಖಂಡರು ಅಗ್ನಿ ಶಾಮಕದಳ, ತುರ್ತುಚಿಕಿತ್ಸೆ ಟ್ರೈನಿಂಗ್ ಪಡೆಯಲು ಕಳುಹಿಸಿದರು. ಆಗ ಎರಡನೇ ಮಹಾಯುದ್ಧ ನಡೆದಿತ್ತು. ಕಮ್ಯುನಿಸ್ಟ್‌ರಿಗೆ ಇಂಥ ಶಿಕ್ಷಣ ಯಾಕೆಂದು ಸವಾಲು ಕೇಳಿದ್ದೂ ಅದಕ್ಕೆ ಬಿ.ಟಿ.ಆರ್ ಮತ್ತು ಗಂಗಾಧರ ಅಧಿಕಾರಿಯವರು ವಿವರಣೆ ಕೊಟ್ಟರು. ಕಮ್ಯುನಿಷ್ಟರು ಉತ್ತಮ ಕಾರ್ಯಕರ್ತರಾಗಿ ಜನರನ್ನು ಪಕ್ಷದ ಪರವಾಗಿ ಬರುವಂತೆ ಮಾಡಬೇಕಾದರೆ ಬರೇ ಮುಷ್ಕರ ಹೂಡಿ ಜಯಗಳಿಸುವುದಷ್ಟೇ ಸಾಲದು ಜನರು ದೈನಂದಿನ ಎದುರಿಸುತ್ತಿರುವ ಸಮಸ್ಯೆಗಳಿಗೆ ಆರೋಗ್ಯ, ವಸತಿ ಸಂಸಾರಿಕ ಜೀವನಗಳಿಗೆ ಸಂಬಂಧಪಟ್ಟಂಥ ವಿಷಯಗಳಲ್ಲಿ ನಮ್ಮ ಸಲಹೆ, ಸಹಕಾರ, ಸಹಾಯ ಅಗತ್ಯ. ಹಾಗಾದರೆ ಮಾತ್ರ ಅವರ ನಿಕಟ ಸಂಪರ್ಕ ಬೆಳೆದು, ರಾಜಕೀಯವಾಗಿಯೂ ಅವರು ನಮ್ಮ ಜೊತೆಯಲ್ಲಿ ಬರುವ ಸಾಧ್ಯತೆಯಿದೆ ಎಂದು ಹೇಳಿದ್ದರು"ಜನಾರೋಗ್ಯ" ಪುಸ್ತಕ ಓದಿದ ನಂತರ 67 ವರ್ಷಗಳ ಹಿಂದೆ ಬಿ.ಟಿ.ಆರ್. ಹೇಳಿದ ಮಾತು ನೆನಪಿಗೆ ಬಂತು. ಡಾ.ಸಿ.ಆರ್. ಚಂದ್ರಶೇಖರ್, ಡಾ.ಎಂ. ಎಸ್. ರಾಜಣ್ಣ ಮತ್ತು ಡಾ.ಪ್ರಕಾಶ್.ಸಿ.ರಾವ್ ಅವರ ಲೇಖನಗಳು ಜನ ಸಂಪರ್ಕ ಬೆಳೆಸಿ ಪಕ್ಷ ಕಟ್ಟಬೇಕೆನ್ನುವ ಕಾರ್ಯಕರ್ತರಿಗೆ ಕೈಪಿಡಿಯಾಗಿದೆ. ಮಾತ್ರವಲ್ಲ ಸ್ವಾತಂತ್ರ್ಯೋತ್ತರದ ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ಸರಕಾರ ವೈದ್ಯಕೀಯ ಕ್ಷೇತ್ರದಲ್ಲಿ ಏನು ಸಾಧಿಸಿದೆ ಅದು ಯಾವ ವರ್ಗದ ಹಿತಕ್ಕಾಗಿ ಎಂಬ ಅಂಶಗಳನ್ನು ವಿವರವಾಗಿ ಸರಳವಾಗಿ ಜನರ ಮುಂದಿಟ್ಟಿದ್ದಾರೆ. ಹಾಗೆಯೇ ಸಾರ್ವಜನಿಕರು ಯಾವ ಯಾವ ರೋಗಗಳಿಂದ ಬಳಲುತ್ತಿದ್ದಾರೆ, ಅವುಗಳಿಗೆ ಪರಿಹಾರವೇನು, ಸರ್ಕಾರ ಕೆಲವಾದರೂ ಜನಪರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳ ಪರಿಚಯ, ಅವುಗಳ ಉಪಯೋಗಗಳನ್ನು ಸರಳವಾಗಿ ವಿವರಿಸಿದ್ದಾರೆ. ಇದರ ಜೊತೆಯಲ್ಲಿಯೇ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿದ್ದಾರೆ. " ಈ ಕ್ಷೇತ್ರದಲ್ಲಿ ಖಾಸಗೀಕರಣ ಲಾಭದಾಯಕ ಉದ್ಯಮವಾಗಿ ಬಲವಾಗಿ ಬೇರೂರುತ್ತಿದೆ. ಉಳ್ಳವರಿಗೆ ಅತ್ಯಾಧುನಿಕ ಸೌಲಭ್ಯಗಳಿರುವ ನಕ್ಷತ್ರ ಆಸ್ಪತ್ರೆಗಳು, ಗ್ರಾಮವಾಸಿಗಳ ಪಾಲಿಗೆ ವೈದ್ಯರಿಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳು- ಈ ತಾರತಮ್ಯ ಮುಂದುವರಿಯುತ್ತಿದೆ" ಎಂದು ಹೇಳಿದ್ದಾರೆ. ಬಹುರಾಷ್ಟ್ರೀಯ ಔಷಧಿ ತಯಾರಕರು ಭಾರತದಂಥ ಅಭಿವೃದ್ಧಿಶೀಲ ದೇಶಗಳನ್ನು ಭಾರಿ ಲಾಭಗಳಿಕೆಯ ಸಂತೆಗಳಾಗಿ ಪರಿಗಣಿಸುತ್ತಿವೆ. ಜನಾರೋಗ್ಯಕ್ಕೆ ಸಂಬಂಧಿಸಿದಂತೆ ಸರಕಾರದ ಹಲವು ಯೋಜನೆಗಳು, ತಜ್ಞರ ಶಿಫಾರಸ್ಸುಗಳು ಕಾರ್ಯರೂಪಕ್ಕೆ ಬಾರದೆ ಕತ್ತಲೆಯಲ್ಲಿ ಕೊಳೆಯುತ್ತಿವೆ ಎಂದಿದ್ದಾರೆ.

ಸಾಮಾಜಿಕ ಅಂತಸ್ತೆಂಬುದು ಹಿಂದೆಂದಿಗಿಂತಲೂ ಈಗ ಹೆಚ್ಚಿನ ಬಂಡವಾಳವಾಗಿ ಕಂಡುಬರುತ್ತಿದೆ. ಅದು ಭೌತಿಕ ಸಂಪತ್ತು ಮತ್ತು ರಾಜಕೀಯ ಸ್ಥಾನಮಾನಗಳನ್ನು ಸಹ ಅವಲಂಬಿಸಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೆಂದೂ, ನಮ್ಮ ದೇಶದ ವೈಜ್ಞಾನಿಕ ಹೆಗ್ಗಳಿಕೆಯನ್ನು ಮನಸಾರೆ ಕೊಂಡಾಡುವ ನಮ್ಮ ಅನೇಕ ರಾಜಕೀಯ ನಾಯಕರು ಅತ್ಯಂತ ಚಿಕ್ಕ ದೈಹಿಕ ಆಪತ್ತುಗಳ ಪರಿಹಾರಕ್ಕೆ ವಿದೇಶಗಳಿಗೆ ಹೇಗೆ ಹಾರಿಹೋಗುತ್ತಾರೆಂದೂ, ಅದಕ್ಕೆಲ್ಲಾ ಸಾರ್ವಜನಿಕರ ಹಣ ಅಪಾರವಾಗಿ ವ್ಯಯ ಮಾಡಲಾಗುತ್ತಿದೆಂದೂ, ಅವರ ಅಂತಸ್ತಿಗೆ ನಮ್ಮಲ್ಲಿರುವ ವೈದ್ಯಕೀಯ ಸೌಲಭ್ಯಗಳು ಬಹಳ ಕಳಪೆಯಾದವುಗಳೆಂದೂ ಆದ್ದರಿಂದ ಕಿವಿಯ ಹಿಂದಿನ ಒಂದು ಗಡ್ಡೆ ತೆಗೆಸಲು ಮಾನ್ಯ ಮಂತ್ರಿವರ್ಯರು ಅಮೇರಿಕಾಕ್ಕೆ ಹೋಗುತ್ತಾರೆಂದೂ, ಅಲ್ಲಿ ಯಾವುದೋ ಆಸ್ಪತ್ರೆಗೆ ಒಂದು ದಿನದಲ್ಲಿ ಏಳು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆಂದೂ ಹೀಗೆ ಮಾಡುವವರ ಸಂಖ್ಯೆ ದಿನೇ ದಿನೇ ಅಸಹ್ಯವೆನಿಸುವಷ್ಟು ಹೆಚ್ಚುತ್ತಿದೆಂದೂ ಈ ಪ್ರಕಟಣೆಯ ಪ್ರಧಾನ ಸಂಪಾದಕರಾದ ಡಾ.ಜಿ.ರಾಮಕೃಷ್ಣ ಅವರು ಇಂದಿನ ವಿಡಂಬನೆಯನ್ನು ಓದುಗರೊಡನೆ ಹಂಚಿಕೊಂಡಿದ್ದಾರೆ.

ಮಹಿಳಾ ಸಂಘಟನೆ, ಅಂಗನವಾಡಿ ಕಾರ್ಯಕರ್ತೆಯರು ಜನಾರೋಗ್ಯ ಪುಸ್ತಕವನ್ನು ತಪ್ಪದೇ ಓದಬೇಕು. ಕಡಿಮೆ ಬೆಲೆಯಿಂದ ಇಂಥವರಿಗೆ ಈ ಪುಸ್ತಕ ಒದಗಿಸಬೇಕೆಂದೂ ನನ್ನ ಸೂಚನೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27